ಜನವರಿ 4, 2026

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2018

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಅಪ್ರಾಪ್ತೆಯನ್ನು ಅಪಹರಿಸಿ ಅತ್ಯಾಚಾರವೆಸಗಿದ್ದ

## ಹಠಯೋಗಿ ಲೋಕೇಶ್ವರನಿಗೆ 35 ವರ್ಷಗಳ ಕಠಿಣ ಶಿಕ್ಷೆ!






## ನಪುಂಸಕರೇ ಯಾರೂ ಮದುವೆ ಆಗಬೇಡಿ...

## ಮೂವರನ್ನು ಬಲಿ ಪಡೆದ ಸ್ಫೋಟದ ಸುತ್ತಾ... ಅನುಮಾನದ ಹುತ್ತ...

## ಕೊಲ್ಲೂರು ಮೂಕಾಂಬಿಕೆ ಹೆಸರಲ್ಲಿ ಆನ್‌ಲೈನ್ ಫ್ರಾಡ್!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# 'ಪೊಲೀಸ್ ನ್ಯೂಸ್' ಸೋದರ ಪತ್ರಿಕೆ 'ಆದರ್ಶ ಗಂಡ ಹೆಂಡತಿ' ಮಾಸಿಕದೊಂದಿಗೆ ವೈದ್ಯರು ಸಾಹಿತಿಗಳ ನಂಟು ಬೆಳೆದದ್ದು!

ಪ್ರಿಯ ಓದುಗರೇ,

'ಪೊಲೀಸ್ ನ್ಯೂಸ್' ವಾರಪತ್ರಿಕೆಯ ಅಭಿಮಾನಿಗಳಿಗೆ ಬಹುಷಃ ಗೊತ್ತೇ ಇರುತ್ತೆ... ನಾವು 'ಪೊಲೀಸ್ ನ್ಯೂಸ್' ಜೊತೆ ಜೊತೆಯಲ್ಲೇ 'ಆದರ್ಶ ಗಂಡ ಹೆಂಡತಿ' ಎಂಬ ಮಾಸಿಕವನ್ನು ಬಹಳಷ್ಟು ವರ್ಷಗಳಿಂದ ಪ್ರಕಟಿಸಿದ್ದೆವು. 1994-95ರಲ್ಲಿ ಪ್ರಕಟಣೆ ಶುರು ಮಾಡಿದ 'ಆದರ್ಶ ಗಂಡ ಹೆಂಡತಿ' ಮಾಸಿಕವು ಆ ದಿನಗಳಲ್ಲಿ ಹೊಸ ಶಕೆಯನ್ನೇ ಹುಟ್ಟುಹಾಕಿತ್ತು. ಸಮಾಜದ ಸ್ವಾಸ್ತ್ಯ ಕೆಡಿಸುವ ಚಿತ್ರ ವಿಚಿತ್ರ ಸೆಕ್ಸ್ ಪುಸ್ತಕಗಳು ವಿಜೃಂಭಿಸುತ್ತಿದ್ದ ಕಾಲದಲ್ಲಿ, ಸಭ್ಯ ಸಾಹಿತ್ಯ ಹೊತ್ತುಕೊಂಡು ಬಂದ 'ಆದರ್ಶ ಗಂಡ ಹೆಂಡತಿ' ಅದ್ಭುತ ಯಶಸ್ಸು ದಾಖಲಿಸಿತ್ತು.

ಯಾಕೆಂದರೆ, ಅಲ್ಲಿ ಬರೆಯುತ್ತಿದ್ದ ಸಾಹಿತಿಗಳೆಲ್ಲ ಬಹುತೇಕ ವೈದ್ಯರೇ ಆಗಿದ್ದರು.

ಕರ್ನಾಟಕ ಸರ್ಕಾರದಲ್ಲಿ ಹೆಲ್ತ್ ಸೂಪರ್ ವೈಸರ್ ಆಗಿದ್ದಂತ ಶ್ರೀ ಎನ್. ವಿಶ್ವ ರೂಪಾಚಾರ್ (ಈಗ ದಿವಂಗತರಾಗಿದ್ದಾರೆ) ಅವರ ಮುಂದಾಳತ್ವದಲ್ಲಿ ಪ್ರಕಟಣೆ ಕಾಣುತ್ತಿತ್ತು. ಉಳಿದಂತೆ, ನಮ್ಮ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರ ಮಾರ್ಗದರ್ಶನ ಇದ್ದೇ ಇತ್ತು.



ನಮ್ಮ ಆ ಹೊಸ ಪ್ರಯತ್ನಕ್ಕೆ ದೇಶದಲ್ಲೇ ದೊಡ್ಡ ಹೆಸರು ಮಾಡಿದ್ದ ಮಾನಸಿಕ ರೋಗ ತಜ್ಞ ಡಾ. ಸಿ.ಆರ್. ಚಂದ್ರಶೇಖರ್, ಖ್ಯಾತ ಪ್ರಸೂತಿ ವೈದ್ಯೆ ಡಾ. ಹೆಚ್. ಗಿರಿಜಮ್ಮ, ಡಾ. ಸತ್ಯನಾರಾಯಣರಾವ್, ಡಾ. ವಸುಮತಿ ಎಸ್. ರಾವ್, ಡಾ. ಕಾಮಿನಿ ರಾವ್, ಡಾ. ಪದ್ಮಿನಿ ರಾವ್, ಡಾ. ಲೀಲಾವತಿ ದೇವದಾಸ್, ಡಾ.ವಸುಂದರಾ ಭೂಪತಿ, ಡಾ. ನಾ. ಸೋಮೇಶ್ವರ, ಡಾ. ಸಿ. ಅಶ್ವಥ್... ಮುಂತಾದ ಹಿರಿಯ ಹಾಗೂ ಅನುಭವಿ ವೈದ್ಯರು 'ಗಂಡ ಹೆಂಡತಿ' ಸಮಸ್ಯೆಗಳ ಕುರಿತಂತೆ ಲೇಖನ ಬರೆಯುತ್ತಿದ್ದರು.

ಸಮಸ್ಯೆ ಹಾಗೂ ರೋಗ ರುಜಿನ ಇದ್ದಂತ ದಂಪತಿಗಳು ಅದರ ವಿವರ ಬರೆದು ಕಳುಹಿಸಿದರೆ, ಅದಕ್ಕೆ ತಜ್ಞ ವೈದ್ಯರಿಂದ ಉತ್ತರ ಪ್ರಕಟಣೆ ಆಗುತ್ತಿತ್ತು. ಇದರಿಂದ ದಂಪತಿಗಳಿಗೆ ತುಂಬಾ ಸಹಾಯವಾಗುತ್ತಿತ್ತು. ದಂಪತಿಗಳಿಗೆ ಹಾಗೂ ವೈದ್ಯರ ನಡುವೆ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸಿದ ಪುಣ್ಯ 'ಆದರ್ಶ ಗಂಡ ಹೆಂಡತಿ' ಪತ್ರಿಕೆಗೆ... ಮತ್ತು ಅದರಲ್ಲಿ ಅರೋಗ್ಯ ಮಾಹಿತಿ ಬರೆದ ವೈದ್ಯ ಸಾಹಿತಿಗಳಿಗೆ ಸಲ್ಲಬೇಕು.

ನಮ್ಮ ಸಂಪಾದಕರು 'ಪೊಲೀಸ್ ನ್ಯೂಸ್' ಸಹಯೋಗದಲ್ಲಿ ಆಗಾಗ ಸಮಾಜ ಮುಖಿ ಕಾರ್ಯಕ್ರಮ ಏರ್ಪಡಿಸುತ್ತಿದ್ದ ಹಾಗೆಯೇ, ಗಂಡ ಹೆಂಡತಿ ಮ್ಯಾಗಜಿನ್ ಸಹಯೋಗದಲ್ಲೂ ಸಭೆ ಸಮಾರಂಭ ಏರ್ಪಡಿಸಿ ಆದರ್ಶ ದಂಪತಿಗಳಿಗೆ ಹಾಗೂ ವೈದ್ಯ ಸಾಹಿತಿಗಳಿಗೆ ಗೌರವ ಸಲ್ಲಿಸುತ್ತಿದ್ದರು. ಇದು ಅದೇ ಹಿನ್ನಲೆಯಲ್ಲಿ ಕನ್ನಡ ವೈದ್ಯ ಸಾಹಿತ್ಯ ಪರಿಷತ್ ಸಹಯೋಗದಲ್ಲಿ

☞ 3

# ಹಿಂದೂಗಳ ಹೃದಯ ವೈಶಾಲ್ಯತೆ ಇತರರಿಗೆ ಅರ್ಥವಾಗುವುದೆಂತು....



ಸಂಪಾದಕ
**ಎಂ. ರಾಹುಲ್**


ಮಹಾನ್ ಮಾನವತಾವಾದಿ ಕುವೆಂಪು ಅವರ ಜನ್ಮ ದಿನದ ಸವಿನೆನಪಿನ ಹಿನ್ನಲೆಯಲ್ಲಿ ಒಂದು ವಿಚಾರವನ್ನ ನಿಮ್ಮೊಡನೆ ಹಂಚಿಕೊಳ್ಳಬೇಕು ಅನ್ನಿಸುತ್ತಿದೆ..... ಪಾಕಿಸ್ತಾನ, ಬಾಂಗ್ಲಾ ದೇಶ, ಅಷ್ಟೇ ಏಕೆ, ಭಾರತವನ್ನು ಒರತುಪಡಿಸಿ ವಿಶ್ವದ ಯಾವ ಮೂಲೆಯಲ್ಲೂ ಅಲ್ಪ ಸಂಖ್ಯಾತರು ಬಹು ಸಂಖ್ಯಾತರನ್ನು ಕೊಂದ ನಿದರ್ಶನವಿಲ್ಲ.

ಅದೇ ರೀತಿ, ಯಾವ ದೇಶದಲ್ಲೂ ಅಲ್ಪ ಸಂಖ್ಯಾತರ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿದ್ದು ಇಲ್ಲವೇ ಇಲ್ಲಾ. ಅಲ್ಪಸಂಖ್ಯಾತ ಧರ್ಮದವನು ಬಹು ಸಂಖ್ಯಾತ ಧರ್ಮದ ಹೆಣ್ಣನ್ನು ಮದುವೆ ಆಗುವುದಿರಲಿ, ಧೈರ್ಯ ಸಹ ಮಾಡಿದ್ದಿಲ್ಲ... ಅಲ್ಪ ಸಂಖ್ಯಾತ ಧರ್ಮದ ಹೆಣ್ಣನ್ನು ಮದುವೆ ಆದ ಬಹು ಸಂಖ್ಯಾತ ಧರ್ಮದ ಯುವಕನನ್ನು ಕೊಂದದ್ದು ಇಲ್ಲವೇ ಇಲ್ಲಾ. ಆದರೇ, ಭಾರತದಲ್ಲಿ ಬಹು ಸಂಖ್ಯಾತ ಧರ್ಮದ ಹೆಣ್ಣನ್ನು ಅಲ್ಪ ಸಂಖ್ಯಾತ ಹಾಡ ಹಗಲೇ ಕೊಲ್ಲುತ್ತಾನೆ! ಆತನಿಗೆ ಹಲವಾರು ವರ್ಷ ಆದರೂ ಕೋರ್ಟ್ ವಿಚಾರಣೆ ನಡೆಯುವುದೇ ಇಲ್ಲಾ!


ಇನ್ನು ಶಿಕ್ಷೆ ಆಗುವುದೆಲ್ಲಿ??! ಮುಸ್ಲಿಮರಿಗೇ ಷರಿಯತ್ ಎಂಬ ಸಿವಿಲ್ ಇಸ್ಲಾಮಿಕ್ ಕಾನೂನು ಬೇಕು, ಆದರೇ ಅವರಿಗೆ ಇಸ್ಲಾಮಿಕ್ ಕ್ರಿಮಿನಲ್ ಕಾನೂನು ಮಾತ್ರ ಬೇಡ! ಯಾವುದೊ ಒಂದು ಪಾಳು ಬಿದ್ದ ಮಸೀದಿಯಲ್ಲಿ ಯಾರೋ ಮುಟ್ಠಾಳರು ಬೀಡಿ ಸೇದಿ ಎಣ್ಣೆ ಹೊಡೆದು ಮೂಳೆ ಬಿಸಾಕಿ ಬಂದ್ರೆ, ಇಡೀ ದೇಶಕ್ಕೆ ಕೊಳ್ಳಿ ಇಟ್ಟು ಸಾವಿರಾರು ಬಹುಸಂಖ್ಯಾತರನ್ನು ಕೊಲ್ಲುತ್ತಾರೆ!

ಇಂತಹ ಉದ್ಧಟತನ ಭಾರತ ದೇಶ ಬಿಟ್ಟು ಬೇರೆ ಯಾವುದಾದರು ದೇಶದ ಅಲ್ಪ ಸಂಖ್ಯಾತರಲ್ಲಿ ಬರಲು ಸಾಧ್ಯವೇ? ನೆರೆಯ ದೇಶ ಇರಲಿ, ನಮ್ಮ ನಮ್ಮ ನೆರೆ ಹೊರೆಯಲ್ಲೇ ಯಾವುದಾದರು ದೇವರ ವಿಗ್ರಹ ಒಡೆದು ಹಾಕಿದರೂ, ಇಲ್ಲೊಂದು ಊರಿನಲ್ಲೂ ದೊಡ್ಡ ಪ್ರಶ್ನೆ ಏಳುವುದಿಲ್ಲ! ಬಹು ಸಂಖ್ಯಾತರ ಸಾಮಾನ್ಯ ಜನರಿರಲಿ, ಒಬ್ಬ ಶಾಸಕನ ಮನೆಗೆ ಅಲ್ಪ ಸಂಖ್ಯಾತರು ಬೆಂಕಿ ಇಟ್ಟು ಅಟ್ಟಹಾಸ ಮೆರೆದ ಒಂದು ನಿದರ್ಶನ ಪಾಕಿಸ್ತಾನ ಬಾಂಗ್ಲಾ ದೇಶ ಇರಲಿ, ವಿಶ್ವದ ಬೇರಾವ ದೇಶದಲ್ಲಾದರೂ ತೋರಿಸಲಿ. ಇಂತಹ ಶವದಷ್ಟು ತಾಳ್ಮೆಯನ್ನು ಭಾರತದ ಬಹುಸಂಖ್ಯಾತ ಹಿಂದೂಗಳು ಬಿಟ್ಟರೆ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಇಂತಹ ದೇವರಂಥ ಹಿಂದೂಗಳನ್ನು ಭಾರತದ ಪ್ರತಿಯೊಬ್ಬ ಮುಸಲ್ಮಾನ ದೇವರಂತೆ ಪೂಜಿಸಿ ಗೌರವಿಸಬೇಕಿತ್ತು.

ಆದರೆ ಇಲ್ಲಿ ನಡೆಯುತ್ತಿರುವುದೇನು? ಮತ ದಾನ ಸಹಿತ ಯಾವುದರಲ್ಲೂ ಸಮಾನ ಹಕ್ಕು, ಜೀವಜೀವನ ನೀಡದ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಅಲ್ಪ ಸಂಖ್ಯಾತರು ಸಣ್ಣ ದನಿ ಎತ್ತದಿದ್ದರೂ, ಅಲ್ಲಿ ಹೆಣ್ಣು ಮಕ್ಕಳ ಮಾನ, ಗಂಡು ಮಕ್ಕಳ ಪ್ರಾಣ ನಿತ್ಯ ಹರಣವಾಗುತ್ತಿದೆ. ಅಂಥದರಲ್ಲಿ ಭಾರತ ನೆಲದ ಸಹಿಷ್ಣುತೆಯನ್ನು ಈ ಕೆಳ ಮಟ್ಟದಲ್ಲಿ ಯೋಚಿಸುತ್ತಿದ್ದಾರೆ ಎಂದರೆ, ಎಂಥ ಪೈಶಾಚಿಕ ಮನಸ್ಥಿತಿಯನ್ನು ಬೆಳೆಸಿಕೊಂಡಿದ್ದಾರೆ ಇಲ್ಲಿನ ಕೆಲ ಮತಾಂಧ ಮುಸ್ಲಿಮರು ಅಂತ ಬಹಳ ಅಸಹ್ಯವಾಗುತ್ತೆ...



ಗಾಂಧಿ ನಿಜಕ್ಕೂ ಹಿಂದೂಗಳ ಪಾಲಿಗೆ ಖಳ ನಾಯಕರಾಗಲು ಇಂತಹ ತಿಳಿಗೇಡಿ ಮುಸ್ಲಿಮರೆ ಕಾರಣ. ಇಂದು ಜಾತ್ಯತೀತ ಅಂದರೆ ಎಲ್ಲ ಧರ್ಮಗಳನ್ನು ತೂರಿ ಎಸೆದು, ಮಾನವತೆ ಅಪ್ಪಿ ನಡೆಯುವುದು ಅಂತ ಬಹು ಸಂಖ್ಯಾತ ಜನ ಭಾವಿಸಿ ದೇಶ ಕಟ್ಟುವ ಕೆಲಸ ಮಾಡಿದರೆ, ಈ ಅಲ್ಪ ಸಂಖ್ಯಾತರು ತಮ್ಮ ಪಟ್ಟ ಭದ್ರ ಹಿತಾಸಕ್ತಿ ಬೆಳೆಸಿಕೊಳ್ಳಲು ಯೋಚಿಸುತ್ತಿದ್ದಾರೆ. ಇದರಿಂದ ಭಾರತದ ಜಾತ್ಯತೀತ ವ್ಯವಸ್ಥೆ ಕುಲಗೆಟ್ಟು ಹೋಗಿದೆ. ಹಿಂದೂ ಮಹಾ ಸಾಗರದಂತೆಯೇ ಸಾಗರದಷ್ಟು ಅಮೂಲ್ಯ ನೂರಾರು ಧರ್ಮ ಮತ್ತು ಅಧ್ಯಾತ್ಮ ತತ್ವ ಸಿದ್ಧಾಂತ ಇದ್ದರೂ, ಅದನ್ನೆಲ್ಲ ಮೂಲೆಗೆ ಎಸೆದು, ಧರ್ಮಕ್ಕಿಂತ ಮನುಷ್ಯತ್ವ ಮುಖ್ಯ ಅಂತ ಬಹು ಸಂಖ್ಯಾತ ಹಿಂದೂಗಳು ಗಾಂಧಿ ತತ್ವ ಅನುಸರಿಸಿದರು. ಆದರೇ, ಸಾಗರದಂಥ ಹಿಂದೂ ಧರ್ಮದ ಮುಂದೆ ಸಣ್ಣ ತೊರೆಯಷ್ಟು ಇಲ್ಲದ ಧರ್ಮದವರಿಗಾಗಿ, ತಮ್ಮ ಧರ್ಮವನ್ನೇ ಲೇವಡಿ ಮಾಡಿಕೊಂಡು, ಹಿಂದೂ ಧರ್ಮದಲ್ಲಿರುವ ಮೇಲೂ ಕೀಳು ಜಾತಿ ವಾದ ಕೀಳಲು ಪ್ರಯತ್ನಿಸಿದರು!



ಇದಕ್ಕಾಗಿ ಜೀವ ಕೊಟ್ಟವರು ಇದ್ದಾರೆ. ಆದರೇ ಅಲ್ಪ ಸಂಖ್ಯಾತರಲ್ಲಿ ಇದ್ಯಾವ ಕ್ರಾಂತಿಕಾರಕವಿರಲಿ, ಕನಿಷ್ಠ ಮಾನವತಾವಾದವು ಹುಟ್ಟಲಿಲ್ಲ. ಜಾತ್ಯತೀತ ತತ್ವ ಬಹುಸಂಖ್ಯಾತರಿಗೆ ಅಂತ ಅಲ್ಪ ಸಂಖ್ಯಾತರು ಅಂದುಕೊಂಡು ಬಿಟ್ಟರೇನೋ? ಹೀಗಾಗಿ, ಅವರಲ್ಲಿ ಒಬ್ಬೇ ಒಬ್ಬ ಧರ್ಮ ಧಿಕ್ಕರಿಸಿ ಮಾತಾಡುವುದಿರಲಿ, ಎಲ್ಲ ಧರ್ಮ ಒಂದೇ, ಎಲ್ಲ ದೇವರು ಒಂದೇ ಅನ್ನುವ ಧೈರ್ಯ ಸಹ ಒಬ್ಬನಿಗೂ ಬರಲಿಲ್ಲ. ಇದು ಭಾರತದ ಜಾತ್ಯತೀತ ವ್ಯವಸ್ಥೆ ಮೇಲೇ ದುಷ್ಟಪರಿಣಾಮ ಬೀರುತ್ತಿದೆ ಎಂಬ ಯೋಚನೆಯು ಭಾರತದ ಜಾತ್ಯತೀತ ಬಹುಸಂಖ್ಯಾತರಿಗೆ ಬರದೇ, ಸತ್ತು ಬಿದ್ದ ಎಡ ಪಂಥವನ್ನು ಅಪ್ಪಿಕೊಂಡು ನಡೆದರು. ಇಂದು ಅಂಥ ಗಟ್ಟಿ ಜಾತ್ಯತೀತರು ಗಾಂಧಿಯಂತೆ ಖಳ ನಾಯಕರಂತೆ ಗೋಚರಿಸುತ್ತಿದ್ದಾರೆ.

ಇದು ಈ ದೇಶದ ಜಾತ್ಯತೀತ ಪರಂಪರೆಯ ದುರಂತ. ಕೊನೆಯದಾಗಿ: ಗಾಂಧಿಯನ್ನು ಕೊಂದಿದ್ದು ಹಿಂದೂ ಮತಾಂಧರಾದರೆ, ಗಾಂಧಿ ತತ್ವ ವಿಚಾರಧಾರೆಗಳನ್ನು ಕೊಂದಿದ್ದು ಮುಸ್ಲಿಂ ಮತಾಂಧರು. ಈ ಮತಾಂಧತೆ ಅಳಿಯದೆ ಈ ದೇಶ ಉದ್ಧಾರ ಆಗುವುದೂ ಇಲ್ಲಾ, ನೆಮ್ಮದಿಯಾಗಿ ಇರುವುದೂ ಇಲ್ಲಾ... ಏನಂತೀರಿ...

ಅಂದಹಾಗೆ,2026 ಆಗಮನಕ್ಕೆ ಕ್ಷಣಗಣನೆ ಶುರುವಾಗಿದೆ.ಹೊಸ ವರ್ಷ ಆಚರಣೆಗೆ ಬೆಂಗಳೂರುಮಹಾ ನಗರಿ ಸಜ್ಜಾಗಿದೆ.ದುರಂತವೇನು ಅಂದ್ರೆ, ಡ್ರಗ್ಸ್ ಘಾಟು ಹೆವಿ ಅನ್ನುವಷ್ಟು ಹೆಚ್ಚಾಗಿದೆ. ಇಷ್ಟು ವರ್ಷ ಬೇರೆಡೆಯಿಂದ ಇಲ್ಲಿಗೆ ಬರ್ತಾ ಇತ್ತು. ಈಗ ಇಲ್ಲಿಯೇ ಡ್ರಗ್ಸ್ ಫ್ಯಾಕ್ಟರಿ ಶುರುವಾಗಿವೆ ಅನ್ನೋ ವಾರ್ತೆ ಇದೆ! ಇದೆಲ್ಲಾ ಏನ್ರೀ? ಕರ್ನಾಟಕ ಪೊಲೀಸ್ ಅಂದ್ರೆ ಇಡೀ ದೇಶಕ್ಕೆ ಮಾದರಿ ಎನ್ನುತ್ತಾರೆ. ಹಾಗಾದ್ರೆ ಈಗ ಪೊಲೀಸ್ ವ್ಯವಸ್ಥೆ ಏನಾಗಿದೆ?

ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅತ್ಯಂತ ಧಕ್ಷ ಅಧಿಕಾರಿಗಳು. ಇಂಥ ಅಃ ಕಾರಿಕೆಳಗೆ ಕೆಲಸ ಮಾಡ್ತಿರೋ ಮಂದಿ ಭ್ರಷ್ಟ ರಾಗಿದ್ದಾರೆಯೇ? ಛೇ... ಸಣ್ಣವರು ಮಾಡುವ ನಿರ್ಲಕ್ಷದಿಂದ ದೊಡ್ಡವರ ಹೆಸರಿಗೆ ಕಳಂಕ! ಇಲ್ಲಿ ಬರೀ ಪೊಲೀಸ್ ವ್ಯವಸ್ಥೆ ಯನ್ನ ದೂರಿ ಪ್ರಯೋಜನವಿಲ್ಲ. ನಮ್ಮ ನಾಗರಿಕರು ಹುಷಾರಾಗಿರಬೇಕು. ಡ್ರಗ್ಸ್ ಕಪಿಮುಷ್ಟಿಯಿಂದ ನಿಮ್ಮ ಮಕ್ಕಳನ್ನು ನೀವೇ ರಕ್ಷಿಸಬೇಕು. ಎಲ್ಲಿ ಡ್ರಗ್ಸ್ ಹಂಚುತ್ತಾರೋ... ಅಲ್ಲಿನ ಪೊಲೀಸರಿಗೆ ತಕ್ಷಣ ಮಾಹಿತಿ ಕೊಡಿ. ಎಲ್ಲಾ ಕಡೆ ಭ್ರಷ್ಟರೆ ಇರುವುದಿಲ್ಲ ಎಂಬುದು ನೆನಪಿರಲಿ... ಎನಿವೇ ಹ್ಯಾಪಿ ನ್ಯೂ ಇಯರ್ ಟು ಆಲ್..... ಸರ್ವರಿಗೂ ಹೊಸ ವರ್ಷದ ಶುಭಾಶಯಗಳು...

**-ಸಂ.**

2 ☞

ನಡೆದಿದ್ದಂತ ಒಂದು ಕಾರ್ಯಕ್ರಮ. ನಮ್ಮ ಸಂಪಾದಕರ ತವರೂರು ಕನಕಪುರ ತಾಲೂಕಿನ ಸಂತೆ ಕೋಡಿಹಳ್ಳಿಯಲ್ಲಿ ನಡೆದಿತ್ತು.

ನಮ್ಮ ಕಾರ್ಯ ಕ್ಷೇತ್ರ, ಬೆಂಗಳೂರೇ ಆದರೂ ನಮ್ಮ ಸಂಪಾದಕರು ಬೇರೆ ಬೇರೆ ಜಿಲ್ಲೆ,ತಾಲ್ಲೂಕು ಕೇಂದ್ರಗಳಲ್ಲಿ ಇಂಥ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು. ಕಾರಣ, ಆಯಾ ಪ್ರದೇಶ ವ್ಯಾಪ್ತಿಯಲ್ಲಿನ ದಂಪತಿಗಳಿಗೆ ತೊಂದರೆ ಆಗಬಾರದು ಅನ್ನೋದು. ಇಂಥ ವಿಶಾಲ ಹೃದಯದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರನ್ನು ಸಾಹಿತ್ಯ ವಲಯ ಅಪಾರವಾಗಿ ಕೊಂಡಾಡುತ್ತಿತ್ತು.

ಆದರೆ ಹೊಗಳಿಕೆ ಅಥವಾ ತೆಗಳಿಕೆ ಏನೇ ಬಂದರೂ ಹಿಗ್ಗುವುದಾಗಲಿ ಕುಗ್ಗುವುದಾಗಲಿ ಅವರಿಗೆ ರೂಢಿಯೇ ಇರಲಿಲ್ಲ. ತಾನಾಯಿತು ತನ್ನ ಕೆಲಸ ವಾಯಿತು... ಕಾಯಕವೇ ಕೈಲಾಸ... ಅಷ್ಟೇ ಅವರಿಗೆ ಗೊತ್ತಿದ್ದದ್ದು... ಬಹುಷಃ ಆ ಕಾರಣದಿಂದಲೇ ಇರಬೇಕು, ಅವರು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿತ್ತು.

ಅಂದು ಕನಕಪುರ ತಾಲೂಕಿನ ಸಂತೆ ಕೋಡಿಹಳ್ಳಿಯಲ್ಲಿ ಆದರ್ಶ ಗಂಡ ಹೆಂಡತಿ ಮತ್ತು ಕನ್ನಡ ವೈದ್ಯ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಅರೋಗ್ಯ ವಿಚಾರ ವಿನಿಮಯ ಶಿಬಿರ ಏರ್ಪಡಿಸಿದ್ದಾಗ, ಡಾ. ಸಿ.ಆರ್. ಚಂದ್ರಶೇಖರ ಸೇರಿದಂತೆ ಇನ್ನೂ ಹಲವಾರು ವೈದ್ಯರು ಆಗಮಿಸಿದ್ದರು. ನಮ್ಮ ಸಂಪಾದಕರ ಮೆಚ್ಚಿನ ಗೆಳೆಯ, 'ಕನ್ನಡ ಪ್ರಭ'ದ ಹಿರಿಯ ವರದಿಗಾರ ಜಗಳೂರು ಲಕ್ಷ್ಮಣ ರಾಯರು ಕಾರ್ಯಕ್ರಮ ನಿರೂಪಣೆ ಜವಾಬ್ದಾರಿ ವಹಿಸಿದ್ದರು. ಇನ್ನೊಂದು ಗಮನಿಯ ಸಂಗತಿ ಏನೆಂದರೆ, ನಮ್ಮ ಸಂಪಾದಕರು ತಾವು ಏನೇ ಕಾರ್ಯಕ್ರಮ ನಡೆಸಿದರೂ ಅದಕ್ಕೆ ತಮ್ಮ ಬರಹಗಾರರ ಬಳಗ ಹಾಗೂ ತಮ್ಮ ಕುಟುಂಬ ಸದಸ್ಯರನ್ನೆಲ್ಲ ಕರೆದೊಯ್ಯುತ್ತಿದ್ದರು. ಅಲ್ಲಿ ಎಲ್ಲಾ ವಿದ್ವಾಂಸರ ಪರಿಚಯ ಮಾಡಿಸುತ್ತಿದ್ದರು. ನಿಜಕ್ಕೂ ಇದು ಅವರ ದೊಡ್ಡ ಗುಣವೇ ಆಗಿತ್ತು. ನೀವು ಇಲ್ಲಿರೋ ಒಂದು ಫೋಟೋದಲ್ಲಿ ಸಂಪಾದಕರ ಸುಪುತ್ರರನ್ನು ಕಾಣಬಹುದು. ಅಷ್ಟು ಸಣ್ಣ ವಯಸ್ಸಿನಲ್ಲೇ ತಂದೆಯವರ ಸಾಹಸ ಕಾರ್ಯಗಳನ್ನು ನೋಡಿ ಬೆಳೆದಿದ್ದರಿಂದಲೇ ಇವತ್ತು ದೊಡ್ಡವರು ದಿವಂಗತರಾದ ಬಳಿಕವೂ ಸಂಸ್ಥೆಯನ್ನು ಇಷ್ಟು ಚೆನ್ನಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ, ನಮ್ಮ ಈಗಿನ ಸಂಪಾದಕರಾದ ಶ್ರೀ ಎಂ. ರಾಹುಲ್ ಮಲ್ಲಿಕಾರ್ಜುನಯ್ಯನವರು... ಒಂದಂತೂ ಸತ್ಯ.







ಓದುಗರು ಹಾಗೂ ಬರಹಗಾರರ ಬೆಂಬಲ ನಮಗೆ ಅಪಾರವಾಗಿ ದೊರೆಯಿತು. ಇದು ಎಲ್ಲರಿಗೂ ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಆಯಾ ವ್ಯಕ್ತಿಗಳ ನಡೆ ನುಡಿ ಹಾಗೂ ಶಿಸ್ತು ನೋಡಿಯೇ ದೇವರು ಹಾಗೂ ಮಾನವರು ಒಲಿಯುವುದು. ಈ ವಿಚಾರದಲ್ಲಿ ನಮ್ಮ ದೊಡ್ಡ ಯಜಮಾನರು ದೇವಮಾನವರೇ...







# ಮೈಸೂರಿನಲ್ಲಿ ಮೂವರನ್ನು ಬಲಿ ಪಡೆದ ಸ್ಫೋಟ... ಅನುಮಾನ ಏಕೆ?

**ಹೊಸ ವರ್ಷಾಚರಣೆಯ ಸಂಭ್ರಮದಲ್ಲಿದ್ದ ಮೈಸೂರಿನ ಜನರಿಗೆ ಕ್ರಿಸ್ ಮಸ್ (ಡಿ.25) ದಿನದಂದು ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ನಡೆದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಬೆಚ್ಚಿಬೀಳುವಂತೆ ಮಾಡಿದೆ. ಈ ಸ್ಫೋಟ ಮೂವರನ್ನು ಬಲಿ ಪಡೆದು ಇನ್ನಿಬ್ಬರನ್ನು ಗಾಯಗೊಳಿಸಿ ಆಸ್ಪತ್ರೆಗೆ ಸೇರಿಸಿದೆ. ಆದರೆ ಈ ಘಟನೆಯಿಂದ ಜನರು ಆತಂಕಕ್ಕೀಡಾಗಿದ್ದಾರೆ. ಒಂದು ವೇಳೆ ಜನನಿಬಿಡ ಸ್ಥಳದಲ್ಲಿ ಸಂಭವಿಸಿದ್ದರೆ ಇನ್ನೆಷ್ಟು ಮಂದಿ ಬಲಿಯಾಗುತ್ತಿದ್ದರೋ? ಆದರೂ ಮೂವರ ಸಾವಾಗಿದೆ. ಅದಕ್ಕೆ ನ್ಯಾಯ ಬೇಕೆಂದರೆ ಘಟನೆ ಹೇಗಾಯಿತು ಸ್ಫೋಟಕ್ಕೆ ಕಾರಣಗಳೇನು? ಎಂಬುದು ಬಹಿರಂಗಗೊಳ್ಳಬೇಕಾಗಿದೆ.**

**ಮೈಸೂರು**

✍ಬಿ.ಎಂ. ಲವಕುಮಾರ್

ಈಗಾಗಲೇ ಮೈಸೂರಿನತ್ತ ಪ್ರವಾಸಿಗರು ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ. ಅವತ್ತು ಡಿ.25ರಂದು ಅದೇ ರೀತಿ ಜನ ಅರಮನೆ, ದಸರಾ ವಸ್ತುಪ್ರದರ್ಶನ, ಸೇರಿದಂತೆ ಹಲವೆಡೆ ಜಮಾಯಿಸಿದ್ದರು. ರಾತ್ರಿ 8.30ರ ಸಮಯದಲ್ಲಿ ಅರಮನೆ ಬಳಿಯ ಜಯಮಾರ್ತಾಂಡ ದ್ವಾರದ ಬಳಿ ನಿಂತು ಜನ ಅರಮನೆಯ ವಿದ್ಯುದ್ದೀಪದ ಅಲಂಕಾರವನ್ನು ವೀಕ್ಷಿಸುತ್ತಿದ್ದರು. ಕೆಲವರು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಇಲ್ಲಿ ಒಂದಷ್ಟು ಮಂದಿ ನೆರೆದಿದ್ದರು. ಎದುರಿನ ರಸ್ತೆಯಲ್ಲಿ ವಾಹನ ಸಂಚಾರವೂ ಜೋರಾಗಿಯೇ ಇತ್ತು. ಇದೇ ವೇಳೆ ಅಲ್ಲಿಗೆ ತನ್ನ ಸೈಕಲ್‌ನಲ್ಲಿ ಹೀಲಿಯಂ ಗ್ಯಾಸ್ ಸಿಲಿಂಡರ್ ಇಟ್ಟುಕೊಂಡು ಬೆಲೂನಿಗೆ ಅದನ್ನು ತುಂಬಿಸಿ ಮಾರಾಟ ಮಾಡುತ್ತಾ ಉತ್ತರಪ್ರದೇಶ ಮೂಲದ ಸಲೀಂ (40) ಎಂಬಾತ ಬಂದಿದ್ದನು. ಕೆಲವರು ಬೆಲೂನು ಕೊಳ್ಳುತ್ತಿದ್ದರೆ ಮತ್ತೆ ಕೆಲವರು ಆಸುಪಾಸಿನಲ್ಲಿ ತಮ್ಮ ಪಾಡಿಗೆ ತಾವಿದ್ದರೆ, ಮತ್ತೆ ಕೆಲವರು ಅದೇ ಮಾರ್ಗದಲ್ಲಿ ಹಾದು ಹೋಗುತ್ತಿದ್ದರು.



ಮೃತಪಟ್ಟ ಮಂಜುಳಾ ಹಾಗೂ ಲಕ್ಷ್ಮಿ

ಹೀಗಿರುವಾಗಲೇ ಕಿವಿ ಸಿಡಿದು ಹೋಗುವಂತಹ ಶಬ್ದವೊಂದು ಕೇಳಿ ಬಂದಿತ್ತು ಏನಾಗುತ್ತಿದೆ ಎಂದು ನೋಡುವಷ್ಟರಲ್ಲಿ ಸೈಕಲ್‌ನಲ್ಲಿ ಬೆಲೂನು ಮಾರುತ್ತಿದ್ದ ಸಲೀಂನ ದೇಹ ಛಿದ್ರವಾಗಿದ್ದರೆ, ಸಿಲಿಂಡರ್ ಸಿಡಿದು ಅವಶೇಷಗಳು ಹಾರಿ ಮುಂದೆ ನಡೆದುಕೊಂಡು ಹೋಗುತ್ತಿದ್ದವರಿಗೆ ಬಡಿದಿತ್ತು. ಪರಿಣಾಮ ನಂಜನಗೂಡಿನ ಚಾಮಲಾಪುರ ಬೀದಿಯ ನಿವಾಸಿ ಮಂಜುಳಾ (28), ಬೆಂಗಳೂರಿನ ಲಕ್ಷ್ಮೀ, ಕೊಲ್ಕತ್ತಾದ ಶಾಹೀನ್ ಶಬ್ಬೀರ್ ಹಾಗೂ ರಾಣೆಬೆನ್ನೂರಿನ ಕೊಟ್ರೇಶ್ ಅವರು ಗಾಯಗೊಂಡಿದ್ದರು. ಅದರಲ್ಲೂ ಲಕ್ಷ್ಮಿ ಮತ್ತು ಮಂಜುಳಾ ಗಂಭೀರ ಗಾಯಗೊಂಡಿದ್ದರು. ತಕ್ಷಣವೇ ಸ್ಥಳಕ್ಕೆ ಬಂದ ಪೊಲೀಸರು ಗಾಯಾಳುಗಳನ್ನು ಸಮೀಪದ ಕೆ.ಆರ್. ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಿದ್ದಲ್ಲದೆ, ಸ್ಥಳವನ್ನು ಸುತ್ತುವರೆದು ಸಾರ್ವಜನಿಕರು ಇತ್ತ ಬರದಂತೆ ಬ್ಯಾರಿಕೇಡ್ ಹಾಕಿ ಪರಿಶೀಲನೆ ಆರಂಭಿಸಿದರು. ಅಲ್ಲದೆ, ಆ ಮಾರ್ಗವನ್ನು ಬಂದ್ ಮಾಡಿ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿದರು.



ಸಲೀಂ

ಮೈಸೂರು ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್, ಡಿಸಿಪಿ ಸುಂದರ್ ರಾಜ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ಮಾಹಿತಿಯನ್ನು ಕಲೆ ಹಾಕಿದಲ್ಲದೆ, ಕೆ.ಆರ್. ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು. ಸತ್ತವನು ಯಾರು ಎಂಬುದನ್ನು ಗುರುತಿಸುವ ಕೆಲಸವೂ ನಡೆಯಿತು. ಅತ್ತ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದವರ ನಾಲ್ವರ ಪೈಕಿ ಮಹಿಳೆಯರಾದ ಲಕ್ಷ್ಮೀ ಮತ್ತು ಮಂಜುಳಾ ಇಬ್ಬರು ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ(ಡಿ.26) ರಂದು ಮೃತಪಟ್ಟಿದ್ದಾರೆ. ಉಳಿದಂತೆ ಕೊಲ್ಕತ್ತಾದ ಶಾಹೀನ್ ಶಬ್ಬೀರ್ ಹಾಗೂ ರಾಣೆಬೆನ್ನೂರಿನ ಕೊಟ್ರೇಶ್ ಅವರಿಗೆ ಚಿಕಿತ್ಸೆ ಮುಂದುವರೆದಿದೆ.

ಉತ್ತರ ಪ್ರದೇಶದ ಕನೋಜ್ ಜಿಲ್ಲೆ ತೊಫಿಯ

☞15

## ಸುತ್ತಲೂ ಅನುಮಾನಗಳು ಏಕೆ?

ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಗುರುವಾರ ರಾತ್ರಿ ಎಂಟೂವರೆ ಗಂಟೆ ವೇಳೆಯಲ್ಲಿ ಸಂಭವಿಸಿದ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣದ ಸುತ್ತ ಅನುಮಾನಗಳು ಹುಟ್ಟಿಕೊಂಡಿವೆ. ಸ್ಫೋಟದಲ್ಲಿ ಸಾವನ್ನಪ್ಪಿದ ಬೆಲೂನು ಮಾರುತ್ತಿದ್ದ ವ್ಯಕ್ತಿ ಉತ್ತರ ಪ್ರದೇಶದ ಸಲೀಂ(39) ಎನ್ನುವುದು ಗೊತ್ತಾದ ಮೇಲೆ ಈತ ಏಕೆ ಇಲ್ಲಿಗೆ ಬಂದ ನಿಜವಾಗಿಯೂ ಬೆಲೂನು ಮಾರಲೆಂದೇ ಬಂದನೇ ಅಥವಾ ಇನ್ನೇನಾದರೂ ಇದೆಯಾ ಎಂಬ ಅನುಮಾನಗಳು ಹುಟ್ಟಿಕೊಂಡಿರುವುದರಿಂದ ತನಿಖೆಗಳು ಬಹು ಆಯಾಮಗಳಲ್ಲಿ ನಡೆಯುತ್ತಿವೆ.

ಇನ್ನು ಬೆಲೂನು ಮಾರಲು ಬಂದು ಸಿಲಿಂಡರ್ ಸ್ಫೋಟದಿಂದ ಸಾವನ್ನಪ್ಪಿದ ಘಟನೆ ಆಕಸ್ಮಿಕವೋ? ಅಥವಾ ಇದರ ಹಿಂದೆ ಇನ್ನೇನಾದರೂ ನಿಗೂಢತೆ ಅಡಗಿದೆಯಾ? ಎಂಬ ಬಗ್ಗೆಯೂ ನೋಡಬೇಕಾಗುತ್ತದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸುವ ಉದ್ದೇಶದಿಂದ ಎನ್ ಐಎ ಇದಕ್ಕೆ ಎಂಟ್ರಿ ಕೊಟ್ಟಿದೆ. ಮೃತ ಸಲೀಂ ಉತ್ತರ ಪ್ರದೇಶದಿಂದ ಬಂದಿದ್ದು ಈತನೊಂದಿಗೆ ಇನ್ನು ಕೆಲವರಿದ್ದರು ಅವರೆಲ್ಲರೂ ಸ್ಫೋಟದ ಬಳಿಕ ನಾಪತ್ತೆಯಾಗಿದ್ದಾರೆ. ಈ ಪೈಕಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಸಲೀಂ ಕಳೆದ ಹದಿನೈದು ದಿನಗಳ ಹಿಂದೆ ಮೈಸೂರಿಗೆ ಬಂದಿದ್ದು ಮೈಸೂರು ನಗರದ ಲಷ್ಕರ್ ಮೊಹಲ್ಲಾದ ಶರೀಫ್ ಲಾಡ್ಜ್ ನಲ್ಲಿ ವಾಸ್ತವ್ಯ ಹೂಡಿದ್ದರು. ಅಲ್ಲಿದ್ದು ಕೊಂಡು ಸೈಕಲ್ ಮೂಲಕ ಮೈಸೂರು ಅರಮನೆ ಸುತ್ತಮುತ್ತ ಹೀಲಿಯಂ ಗ್ಯಾಸ್ ತುಂಬಿ ಬೆಲೂನನ್ನು ಮಾರಾಟ ಮಾಡುತ್ತಿದ್ದರು ಎನ್ನಲಾಗಿದೆ. ಆದರೆ ಕ್ರಿಸ್ ಮಸ್ ದಿನವಾದ ಗುರುವಾರ ಕೇವಲ ಸಲೀಂ ಮಾತ್ರ ಮಾರಾಟ ಮಾಡಲು ಬಂದಿದ್ದನು. ಉಳಿದಂತೆ ಯಾರೂ ಬಂದಿರಲಿಲ್ಲ. ನಿಜವಾಗಿಯೂ ಬೆಲೂನ್ ಮಾರಲು ಬಂದಿದ್ದರೇ? ಅವರಿಗೆ ಸೈಕಲ್ ಮತ್ತು ಹೀಲಿಯಂ ಗ್ಯಾಸ್ ಸಿಲಿಂಡರ್ ಒದಗಿಸಿದ್ದು ಯಾರು? ಎಲ್ಲಿಂದ ಅವರು ಖರೀದಿ ಮಾಡಿದ್ದರು. ಇವರ ಕುರಿತಂತೆ ವಾಸ್ತವ್ಯ ಹೂಡಿದ್ದ ಲಾಡ್ಜ್ ನಲ್ಲಿ ಏನೇನು ದಾಖಲೆಗಳಿವೆ? ಎಂಬಿತ್ಯಾದಿ ವಿವರಗಳನ್ನು ಪೊಲೀಸರು ಕಲೆ ಹಾಕಿದ್ದು ಜತೆಗೆ ಇರುತ್ತಿದ್ದ ಇಬ್ಬರನ್ನು ಈ ನಿಟ್ಟಿನಲ್ಲಿ ವಶಕ್ಕೆ ಪಡೆದು ವಿಚಾರಣೆ ಮಾಡುತ್ತಿದ್ದಾರೆ.

ಸಲೀಂನ ಚಲನವಲನಗಳು ಸ್ಥಳದಲ್ಲಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿಲ್ಲ ಘಟನಾ ಸ್ಥಳದಲ್ಲಿ ಹೈಟೆಕ್ ಸಿಸಿ ಕ್ಯಾಮರಾ ಇದ್ದರೂ ಅದರಲ್ಲಿ ಸಂಪೂರ್ಣ ದೃಶ್ಯ ಸೆರೆಯಾಗಿಲ್ಲ. ಈ ಸ್ಫೋಟ ಆಕಸ್ಮಿಕವೇ ಆಗಿದ್ದರೂ ಪೊಲೀಸರು ತನಿಖೆಯನ್ನು ವಿವಿಧ ಆಯಾಮಗಳಲ್ಲಿ ಮಾಡಲೇಬೇಕಾಗಿದೆ. ಸಂಪೂರ್ಣ ತನಿಖೆಯ ಬಳಿಕವೇ ಇದಕ್ಕೊಂದು ತಾರ್ಕಿಕ ಅಂತ್ಯ ಸಿಗಬೇಕಾಗಿದೆ. ಈಗಾಗಲೇ ಅಲ್ಲಲ್ಲಿ ಹುಸಿಬಾಂಬ್ ಕರೆಗಳು ಸೇರಿದಂತೆ ಹಲವು ರೀತಿಯ ಬೆದರಿಕೆಗಳು ಬರುತ್ತಿರುವುದರಿಂದ ಮತ್ತು ವರ್ಷಾಂತ್ಯದ ವೇಳೆಯಲ್ಲಿ ಮೈಸೂರಿನ ಕಡೆಗೆ ಸಾಗರೋಪಾದಿಯಲ್ಲಿ ಪ್ರವಾಸಿಗರು ಹರಿದು ಬರುವುದರಿಂದ ಪ್ರವಾಸಿಗರು ಸೇರಿದಂತೆ ಮೈಸೂರಿನ ಜನತೆಯಲ್ಲಿ ಆವರಿಸಿರುವ ಸಂಶಯದ ಕಾರ್ಮೋಡವನ್ನು ಸರಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕಾಗಿದೆ.

ಈ ಸ್ಫೋಟದ ಸುತ್ತಲೂ ಅನುಮಾನಗಳಂತು ಹರಿದಾಡುತ್ತಲೇ ಇದೆ ಏಕೆಂದರೆ ದೆಹಲಿ ಸ್ಫೋಟ ಮತ್ತು ಆ ನಂತರದ ತನಿಖೆಯಲ್ಲಿ ತಿಳಿದು ಬಂದ ರಹಸ್ಯಗಳು ನಮ್ಮ ಕಣ್ಣಮುಂದೆಯೇ ಇದೆ. ಆದ್ದರಿಂದ ಇದನ್ನು ಬೆಲೂನು ಮಾರುವಾಗ ಆದ ಆಕಸ್ಮಿಕ ಘಟನೆ ಎಂದು ತಳ್ಳಿ ಹಾಕಲಾಗದು. ತಜ್ಞರ ಅಭಿಪ್ರಾಯದ ಪ್ರಕಾರ ಹೀಲಿಯಂ ಸ್ಫೋಟಗೊಳ್ಳುವುದು ಅಪರೂಪ ಹೀಗಿದ್ದರೂ ಸ್ಫೋಟವಾಗಿದೆ ಎಂದರೆ ಇದರ ಬಗ್ಗೆಯೂ ತನಿಖೆಯಾಗಬೇಕಾಗಿದೆ

ಮೃತ ಸಲೀಂ ಉತ್ತರಪ್ರದೇಶದಿಂದ ಸಹೋದರರೊಂದಿಗೆ ಬಂದು ಮೈಸೂರಿನ ಲಾಡ್ಜ್ ನಲ್ಲಿದ್ದ ಎನ್ನಲಾಗಿದೆ. ಲಾಡ್ಜ್ ನವರು ದೂರದಿಂದ ಬಂದವರಿಗೆ ಯಾವ ದಾಖಲೆಗಳ ಮೇಲೆ ವಾಸ್ತವ್ಯಕ್ಕೆ ಅವಕಾಶ ನೀಡುತ್ತಾರೆ ಎಂಬುದು ಮುಖ್ಯವಾಗುತ್ತದೆ. ಸ್ಥಳೀಯರು ಹೇಳುವ ಪ್ರಕಾರ ಈ ವ್ಯಾಪ್ತಿಯಲ್ಲಿ ತಿನಿಸುಗಳ ಮಾರಾಟ ನಡೆಯುತ್ತದೆಯಾದರೂ ಬೆಲೂನ್ ಮಾರಾಟ ಮಾಡುವುದು ಅಪರೂಪ. ಆದರೆ ಸಲೀಂ ಮಾರಾಟ ಮಾಡುತ್ತಿದ್ದ ಸಿಲಿಂಡರ್ ಸ್ಫೋಟ ಆಗಿದ್ದು ಹೇಗೆ? ಆತ ಅಲ್ಲಿಗೆ ಬಂದ ದಿನವೇ ಸ್ಫೋಟವಾಗಿದೆ. ಆದ್ದರಿಂದ ಅನುಮಾನ ಹುಟ್ಟಿಕೊಳ್ಳುತ್ತಿದೆ. ಅದು ಏನೇ ಇರಲಿ.. ತನಿಖೆ ನಡೆದು ನೈಜಾಂಶ ಹೊರಬರುವ ತನಕ ಅನುಮಾನಗಳು ಪ್ರತಿಯೊಬ್ಬರ ತಲೆಯಲ್ಲಿ ಗಿರಕಿ ಹೊಡೆಯುತ್ತಲೇ ಇರುತ್ತವೆ.

# ನಪುಂಸಕರೇ ಯಾರೂ ಮದುವೆ ಆಗಬೇಡಿ.... ಒಂದು ಹೆಣ್ಣಿನ ಜೀವನ ಹಾಳು ಮಾಡಬೇಡಿ....



**ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ 26 ವರ್ಷದ ಗಾನವಿ ಎಂಬ ನವ ವಿವಾಹಿತೆ ಆತ್ಮಹತ್ಯೆ ಮಾಡಿಕೊಂಡ ಘಟನೆ ನಿಮಗೆ ಗೊತ್ತಿರಬೇಕು. ಕಟ್ಕೊಂಡ ಗಂಡ ಷಂಡ(?) ಅಂತ ಖಚಿತವಾದ ಕೂಡಲೇ ಆಕೆ ನೇಣಿಗೆ ಕೊರಳೊಡ್ಡಿ ಪ್ರಾಣ ಬಿಟ್ಟಿದ್ದಾಳೆ ಅನ್ನೋ ಮಾತಿದೆ! ಆದರೆ ಗಾನವಿ ಕುಟುಂಬ ವರದಕ್ಷಿಣೆ ಕಿರುಕುಳ ಆರೋಪ ಮಾಡಿದೆ... ಈ ಕೇಸ್ ಯಾವಾಗ ಪೊಲೀಸ್ ಠಾಣೆ ತಲುಪಿ ಎಫ್‌ಐಆರ್ ಹರಿದು, ಎಲ್ಲಾ ಟಿವಿ ಚಾನೆಲ್‌ಗಳಲ್ಲಿ ಸುದ್ದಿ ಭಿತ್ತರವಾಯಿತೋ, ಆವಾಗಲೇ ಷಂಡ(?) ಗಂಡನೂ, ಈ ಮೋಸದ ಮದುವೆ ಮಾಡಿದ್ದ ಅವನಮ್ಮನೂ ಮನೆ ಬಿಟ್ಟು ಎಸ್ಕೇಪ್ ಆಗಿ ದೂರದ ನಾಗಪುರದಲ್ಲಿ ಚಿಕ್ಕ ಮಗನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ!! ಆದರೆ, ನೇಣು ಜೀರಿಕೊಂಡಿದ್ದ ಮಗ ಸತ್ತು ಹೋಗಿದ್ದು, ಮಮ್ಮಿ ಅರೆ ಜೀವವಾಗಿ ಆಸ್ಪತ್ರೆ ಸೇರಿಕೊಂಡಿದ್ದಾಳೆಂದು ಗೊತ್ತಾಗಿದೆ!**



**ಬೆಂಗಳೂರು**

ಹೆಚ್.ಕೆ. ಮಹದೇವ್

ಕಳೆದ ಅಕ್ಟೋಬರ್ 29ರಂದು ಸೂರಜ್ ಜತೆ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಆದರೆ, ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಮದುವೆಯಾಗಿ ಒಂದೂವರೆ ತಿಂಗಳಿಗೇ ನವವಧು ಗಾನವಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಗಂಡ ಸೂರಜ್ ಹಾಗೂ ಕುಟುಂಬಸ್ಥರನ್ನು ಬಂಧಿಸಬೇಕು ಎಂದು ಮೃತ ಗಾನವಿ ಪೋಷಕರು ಆಗ್ರಹಿಸಿದ್ದರು. 40 ಲಕ್ಷ ಖರ್ಚು ಮಾಡಿ ಅದ್ಧೂರಿಯಾಗಿ ಮದುವೆ ಮಾಡಿ ಕೊಟ್ಟಿದ್ದರೂ ವರದಕ್ಷಿಣೆಗಾಗಿ ಗಾನವಿಗೆ ಕಿರುಕುಳ ನೀಡಲಾಗಿದೆ. ಇಲ್ಲಿ ಕಿಸಿಯಲಾರದೆ ಶ್ರೀಲಂಕಾಕ್ಕೆ ಹನಿಮೂನ್ ಗೆ ತೆರಳಿದ್ದ ಆಸಾಮಿ, ಅದನ್ನು ಅರ್ಧಕ್ಕೆ ಮೊಟಕುಗೊಳಿಸಿ ಬಂದಿದ್ದಾನೆ ಎಂದು ಯುವತಿಯ ದೊಡ್ಡಮ್ಮ ಆರೋಪಿಸಿದ್ದರು!






ಮೃತ ಗಾನವಿಯ ತಾಯಿ

ಗಾನವಿ ಕಳೆದ ಅಕ್ಟೋಬರ್ 29ರಂದು ರಾಮಮೂರ್ತಿ ನಗರದ ಸೂರಜ್ ಜತೆ ವೈವಾಹಿಕ ಜೀವನಕ್ಕೆ ಕಾಲಿಟ್ಟು, ಪ್ಯಾಲೆಸ್ ಗ್ರೌಂಡ್‌ನಲ್ಲಿ 50 ಲಕ್ಷ ಖರ್ಚು ಮಾಡಿ ಅದ್ಧೂರಿಯಾಗಿ ರಿಸೆಪ್ಷನ್ ಮಾಡಿಕೊಂಡಿದ್ದರು. ಹತ್ತು ದಿನಗಳ ಹಿಂದೆ ಶ್ರೀಲಂಕಾಗೆ ಹನಿಮೂನ್ ಗೆಂದು ಹೋಗಿದ್ದವರು ಅಲ್ಲಿ ಕಚ್ಚಾಡಿಕೊಂಡು ಅರ್ಧಕ್ಕೆ ವಾಪಸ್ಸಾಗಿದ್ದರು! ಸೂರಜ್ ಗೆ ಸಾಮಾನು ಏಳದೆ, ಸ್ವಲ್ಪ ಸಮಸ್ಯೆ ಇದೆ, ಇದೀಗ ಆಪರೇಷನ್ ಕೂಡ ಆಗಿದೆ, ನಿಧಾನಕ್ಕೆ ಸರಿ ಹೋಗುತ್ತದೆ ಅಂತ ನವವಧು ಗಾನವಿಗೆ ದಡಿಯ ಸೂರಜ್ ಸಮರ್ಥನೆ ಕೊಟ್ಟಿದ್ದಾನಂತೆ! ಇದರಿಂದ ನೊಂದು ಬೆಂದು ತನ್ನ ಬದುಕು ಹಾಳಾಗಿ ಹೋಯ್ತು ಎಂದು ಕೊರಗಿದ್ದ ಗಾನವಿ ಇದೀಗ ನೇಣಿಗೆ ಹಾಕಿಕೊಳ್ಳಲು ಯುವತಿ ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ!

ಗಾನವಿ ಕುಟುಂಬದವರು ರೊಚ್ಚಿಗೆದ್ದು ಕೈಲಾಗದ ಗಂಡ ಸೂರಜ್, ಆತನ ಸೋದರ ಸಂಜಯ್ ಹಾಗೂ ತಾಯಿ ಜಯಂತಿಯನ್ನು ತಕ್ಷಣವೇ ಬಂಧಿಸಬೇಕು ಎಂದು ಆಸ್ಪತ್ರೆ ಬಳಿ ಕುಟುಂಬಸ್ಥರು, ಸಂಬಂಧಿಕರು ಪ್ರತಿಭಟನೆ ನಡೆಸಿ ಆಗ್ರಹಿಸಿದ್ದರು.



ತಾಯಿಯೊಂದಿಗೆ ಸೂರಜ್

ಈ ಬಗ್ಗೆ ಗಾನವಿಯ ದೊಡ್ಡಮ್ಮ ಮಾತನಾಡಿದ್ದು, ಒಳ್ಳೆಯ ಸಂಬಂಧ ಎಂದು ನಾನೇ

☞ 10

## ಗಾನವಿ ಅಂಥವರು ಅದೆಷ್ಟಿದ್ದಾರೋ...

ನವವಿವಾಹಿತೆ ಗಾನವಿ ಸಾಯುವ ಅಗತ್ಯವಿರಲಿಲ್ಲ. ಆಕೆ ತರಾತುರಿಯ ನಿರ್ಧಾರ ತೆಗೆದುಕೊಳ್ಳಲು ಕಾರಣ ಇದೇ ಸಮಾಜ ಮತ್ತು ಆಕೆಯ ಸುತ್ತಮುತ್ತಲಿನ ಪ್ರಪಂಚ. ಮದುವೆಯೊಂದೇ ಸಂತೋಷವಾಗಿರುವುದಕ್ಕೆ ಕಾರಣವಲ್ಲ. ಮದುವೆ ಅಗತ್ಯವೂ ಅಲ್ಲ. ಅನಿವಾರ್ಯವೂ ಅಲ್ಲ. ಒಂದು ಮದುವೆ ಕೊನೆಗೊಂಡರೇನಂತೆ? ಬೇಕೆನಿಸಿದಲ್ಲಿ ಮತ್ತೊಂದು ಮದುವೆ ಆಗಬಹುದು, ಅದೂ ಮುರಿದು ಬಿದ್ದರೆ ಇಷ್ಟವಾದವರು ಸಿಕ್ಕರೆ ಮತ್ತೆ ಆಗಬಹುದು ಎಂದು ಅವಳಿಗೆ ಯಾರೂ ಹೇಳಿಕೊಟ್ಟಿಲ್ಲ. ಮದುವೆಯ ಗೋಜಲೇ ಬೇಡ ಎಂದು ನೌಕರಿ ಮಾಡ್ತಾ, ಪ್ರಪಂಚವನ್ನು ನೋಡ್ತಾ ಅರ್ಥಪೂರ್ಣ ಬದುಕನ್ನು ನಡೆಸುವ ಹೆಣ್ಮಕ್ಕಳ ಪರಿಚಯ ಮಾಡಿದರೂ ಗಾನವಿ ಇಂದು ಬದುಕುಳಿಯುತ್ತಿದ್ದಳು।

ಆಕೆಯದು ಈಗಷ್ಟೇ ಹೊಸ ಪ್ರಪಂಚಕ್ಕೆ ತೆರೆದುಕೊಳ್ಳಲು ಮುಂದಾಗುತ್ತಿದ್ದ ಮುಗ್ಧ ಮನಸ್ಸು. ಬದುಕಿದ್ದರೆ ನಿಜವಾದ ಪ್ರಪಂಚದ ಪರಿಚಯವಾಗುತ್ತಿತ್ತು, ಜೀವನವೆಂಬ ಕಲ್ಲುಮುಳ್ಳಿನ ದಾರಿಯಲ್ಲಿ ನಡೆಯುವ ಅವಕಾಶ ಆಕೆಗೆ ಸಿಕ್ಕಿದ್ದರೆ 'ಅಯ್ಯೋ ಇಷ್ಟೇನಾ ಬದುಕು' ಎಂದು ನಕ್ಕು ಬಿಡುತ್ತಿದ್ದಳಾಕೆ. ಆದರೆ ಗಾನವಿಗೆ ಆ ಅವಕಾಶ ಧಕ್ಕಲಿಲ್ಲ. ಯಾಕೆಂದರೆ ನಾವು ಯಾರೂ ವಾಸ್ತವ ಏನು ಎಂಬುದನ್ನು ಆಕೆಗೆ ಹೇಳಿ ಕೊಟ್ಟಿಲ್ಲ. ದೈಹಿಕ ಸುಖ ಕೊಡದಿದ್ದರೂ ಪರವಾಗಿಲ್ಲ, ನನ್ನನ್ನು ಪ್ರೀತಿ ಮಾಡಿದರೆ ಸಾಕಿತ್ತು ಎಂದು ಗಾನವಿ ತನ್ನ ತಾಯಿಯ ಮುಂದೆ ಅಲವತ್ತುಕೊಂಡಿದ್ದು ಇಂಥ ಬಾಲೀಶ ವಿಚಾರಗಳಾಚೆಗೆ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಮುಗ್ಧ ಮನಸ್ಸುಗಳ ಅಸಹಾಯಕ ಪರಿಸ್ಥಿತಿಯ ವಿವರ ನೀಡುತ್ತದೆ.

ತಾಯಿ ಏನು ಹೇಳಿರಬಹುದು? ಆತ ಗಂಡಸು ಆಗದಿದ್ದರೆ ಅವನ ಜೊತೆ ಇರುವ ಅಗತ್ಯವಿಲ್ಲ, ಎಂದೇ? ಪ್ರೀತಿಯಿಂದ ಹೊಟ್ಟೆ ತುಂಬುವುದಿಲ್ಲವೆಂದೇ? ವರದಕ್ಷಿಣೆಯ ಕಿರುಕುಳ ಕೊಟ್ಟಲ್ಲಿ ತಕ್ಷಣ ಮತ್ತೆಂದೂ ಆ ಮನೆ ತುಳಿಯಕೂಡದು, ನೀನು ಮುಂದಕ್ಕೆ ಓದು ನೌಕರಿ ಮಾಡು ಎಂದೇ? ಆಕೆಗೆ ಡಿಪ್ರೆಶನ್ ಏನಾದರೂ ಇತ್ತೇ? ಇತ್ಯಾದಿ ಹೀಗೆ ಏನೆಲ್ಲಾ ಹೇಳಿದರೂ /ಕಾರಣ ಏನೇ ಇದ್ದರೂ / ವಿಚಾರ ಬೇರೆಯೇ ಇದ್ದರೂ / ಗಾನವಿ ಆತ್ಮಹತ್ಯೆಗೆ ಮುಂದಾಗುತ್ತಾಳೆ ಎಂದರೆ ನಾವು ಗಾನವಿಯಂಥ ಮುಗ್ಧ ಹೆಣ್ಣುಮಕ್ಕಳಿಗೆ ಬದುಕಿನ ಮಹತ್ವವನ್ನು, ಆತ್ಮಹತ್ಯೆ ಮಹಾಪಾಪ ಎಂದು ಹೇಳಿ ಕೊಟ್ಟಿಲ್ಲ ಎನ್ನುವುದು ಸತ್ಯ.

ಅರಮನೆ ಮೈದಾನಗಳಲ್ಲಿ ನಡೆಯುವ ಬೀಗರ ಊಟ ಚೆನ್ನಾಗಿ ಆಗಬೇಕು ಎಂಬುದು ಹೆತ್ತವರಿಗೆ ಮಹತ್ವವಾಗುವಷ್ಟು ಮಕ್ಕಳ ಮನಸ್ಸಿನೊಳಗೆ ಇಣುಕಿ ನೋಡುವ ಅವರಲ್ಲಾಗುತ್ತಿರುವ ತುಮುಲಗಳನ್ನು ಅರ್ಥಮಾಡಿಕೊಳ್ಳುವಷ್ಟು ಸಮಯ ಇರುವುದಿಲ್ಲ. 'ದಿಲ್ ಧಡಕ್ ನೆ ದೋ' ಸಿನೇಮಾದಲ್ಲೊಂದು ಪ್ರಸಂಗ ಬರುತ್ತದೆ. ಜಿನನಗೆ ಮಾನವ್‌ನಿಂದ ಡೈವೋರ್ಸ್ ಬೇಕು ಎಂದು ಮಗಳು ಕೇಳುತ್ತಾಳೆ. ಆಕೆಯ ತಂದೆ 'ಈ ಕುಟುಂಬದಲ್ಲಿ ಯಾರದ್ದೂ ಡಿವೋರ್ಸ್ ಆಗಿಲ್ಲ. ಇನ್ನೂ ಮುಂದೆಯೂ ಆಗುವುದಿಲ್ಲ' ಎಂದು ಘರ್ಜಿಸುತ್ತಾರೆ. ಆಕೆಯ ಅತ್ತೆ 'ಯಾಕೆ ನನ್ನ ಮಗ ನಿನಗೆ ಶಾಪಿಂಗ್ ಕರ್ಕೊಂಡು ಹೋಗ್ತಾ ಇಲ್ವಾ ?' ಎಂದು ಪ್ರಶ್ನಿಸುತ್ತಾಳೆ. ಸ್ವಂತ ಅಮ್ಮ 'ನಿನಗೆ ತಲೆ ಕೆಟ್ಟಿದೆಯಾ?' ಎನ್ನುತ್ತಾರೆ. ಅಸಂಬದ್ಧ ಪ್ರಶ್ನೆಗಳಿಗೆ ಮಗಳು ನಡುಗುತ್ತಾಳೆ. ತನಗೇನು ಬೇಕು ಎಂಬುದನ್ನು ಅರ್ಥಮಾಡಿಕೊಳ್ಳದ ತಂದೆ ತಾಯಿಯನ್ನೊಮ್ಮೆ ಕರುಣೆಯಿಂದ ಒಮ್ಮೆ ನೋಡಿ ಅಲ್ಲಿಂದ ಎದ್ದು ಹೋಗುತ್ತಾಳೆ.

ಲಡಾಕ್ ಪ್ರವಾಸದಲ್ಲಿದ್ದಾಗ ಚಿಕ್ಕಮಗಳೂರಿನ ಬೈಕರ್ ಒಬ್ಬರನ್ನು ನಾನು ಭೇಟಿ ಆಗಿದ್ದೆ. ಸುಮ್ಮನೆ ಮಾತನಾಡ್ತಾ ಆಕೆಯ ಟ್ರೆಕ್ಕಿಂಗ್ ಅನುಭವಗಳನ್ನು, ಬೇರೆ ಬೇರೆ ದೇಶ, ಪ್ರದೇಶಗಳ ಭೇಟಿಯ ಅನುಭವಗಳನ್ನು ಕೇಳುತ್ತಿದ್ದೆ. ಆಕೆ ಎತ್ತರವಾಗಿದ್ದಳು ಮತ್ತು ತುಂಬಾ ಸಣ್ಣಕ್ಕೆ ಇದ್ದಳು. ಆರೋಗ್ಯಪೂರ್ಣ, ಗಟ್ಟಿಮುಟ್ಟಾದ ಯುವತಿ. ಆಕೆಯ ಮದುವೆ ಬಹಳ ದಿನ ಇರಲಿಲ್ಲವಂತೆ. ತಲೆಕೆಡಿಸಿಕೊಳ್ಳದೇ, ಕಣ್ಣೀರು ಸುರಿಸದೆ, ಒದಗಿ ಬಂದ ಸ್ವಾತಂತ್ರ್ಯವನ್ನು ಅತ್ಯಂತ ಸೂಕ್ತವಾಗಿ ಬಳಸಿಕೊಳ್ಳಲು ಮುಂದಾಗಿದ್ದಕ್ಕೆ ಮನೆಯಲ್ಲಿ ಸಿಕ್ಕ ಎಲ್ಲರ ಪ್ರೀತಿ ಪ್ರೋತ್ಸಾಹ ಎನ್ನುತ್ತಾಳೆ. ಆಕೆ ಸ್ವತಹ ಒಬ್ಬ ಜಿಮ್ ಟ್ರೇನರ್. ವರ್ಷದ ಹೆಚ್ಚಿನ ಸಮಯ ಬೈಕಿನಲ್ಲಿರುತ್ತಾಳೆ. ಲಡಾಕ್ ಆಕೆಯ ಅಚ್ಚುಮೆಚ್ಚಿನ ಸ್ಥಳ. ಬೈಕ್ ಓಡಿಸಿ ಸುಸ್ತಾದಾಗ ಮಾರ್ಗಮಧ್ಯ ಯಾವುದಾದರೂ ಲಾರಿ ಬಸ್ಸು ಸಿಕ್ಕರೆ ಬೈಕ್ ಮೇಲಕ್ಕತ್ತಿಸಿ ತಾನು ಬರುತ್ತಾಳೆ.

ಬಸ್, ಲಾರಿ ಚಾಲಕರು ಆಕೆಯನ್ನು ಗೌರವದಿಂದ ಕಾಣುತ್ತಾರೆ. ಹೀಗೆ ಆಕೆಯ ಅನುಭವವನ್ನು, ಆಸಕ್ತಿದಾಯಕ ಕಥೆಗಳನ್ನು ನನ್ನ ಕಡೆ ಹಂಚಿಕೊಂಡಾಗ ಆಕೆಯ ಕಣ್ಣಲ್ಲಿ ಏನೋ ಸಾಧಿಸಿದ ಅನುಭವ. ಆಕೆನ ಭೇಟಿಯಾಗಿ ಖುಶಿಯಾಗಿತ್ತು. ಗಾನವಿಯ ಆತ್ಮಹತ್ಯೆ ಮತ್ತು ಅದಾದ ನಂತರ ಕೇಳಿ ಬಂದ ಪ್ರತಿಕ್ರಿಯೆಗಳನ್ನು ನೋಡಿದಾಗ ಈ ಘಟನೆಗಳು ನೆನಪಾದವು.

ಮದುವೆ, ವಿಚ್ಛೇದನ ಎಂಬುದು ಎಷ್ಟೋ ಮಂದಿಗೆ ಬಿಜಿನೆಸ್ ಕೂಡ. ದುಡ್ಡಿನ ಆಸೆಗೆ ಗಂಡ , ಅತ್ತೆ ಮಾವಂದಿರನ್ನು ಪ್ರಪಾತಕ್ಕೆ ತಳ್ಳುವ, ಹೆಂಡತಿಯರಿಂದ ಪೀಡನೆಗೊಳಗಾದ ಶೋಷಣೆಗೊಳಪಟ್ಟ ವಿಚ್ಛೇದಿತ ಗಂಡಂದಿರ ಸಂಘಟನೆಗಳೂ ಇವೆ. ಇಂಥ ಎಲ್ಲವನ್ನೂ ಅರ್ಥಮಾಡಿಕೊಳ್ಳಲು ಗಾನವಿಗೆ ಸಮಯ ಬೇಕಿತ್ತು. ಹಗ್ಗಕ್ಕೆ ಕೊರಳೊಡ್ಡುವುದು ತಪ್ಪು ಎಂಬುದು ಒಂದು ಕ್ಷಣ ಅರ್ಥವಾಗಿ ಎಚ್ಚೆತ್ತುಕೊಂಡಿದ್ದರೂ ಸಾಕಿತ್ತು. ಆಕೆಗೆ ಬದುಕುಳಿಯುವ, ಜೀವನ ಅರ್ಥಮಾಡಿಕೊಳ್ಳಲು ಒಂದು ಅವಕಾಶ ಸಿಗುತ್ತಿತ್ತು. ಅಂಥ ಶಿಕ್ಷಣ ಸಿಗುವುದಾದರೂ ಎಲ್ಲಿ??

ಇಂಥ ಅನೇಕ ಗಾನವಿಯರು ಅಲ್ಲೇಲ್ಲೋ ಇದ್ದಾರೆ. ನಮ್ಮ ಸುತ್ತಮುತ್ತ, ಒಳಗೊಳಗೆ ಕೊರಗುತ್ತ, ಇರಲಾಗದೆ, ಹೊರಬರಲಾಗದೆ??!

# ಕೊಲ್ಲೂರು ಮೂಕಾಂಬಿಕೆ ದೇಗುಲದ ಹೆಸರಿನಲ್ಲಿ ಆನ್‌ಲೈನ್ ವಂಚನೆ ರಾಜಸ್ಥಾನ ಮೂಲದ ಸೈಬರ್ ವಂಚಕ ನಾಸೀರ್ ಹುಸೇನ್ ಬಂಧನ





**ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಕೊಲ್ಲೂರು ಮೂಕಾಂಬಿಕೆ ನಾಡಿನ ಶಕ್ತಿ ದೇವತೆ. ಕರ್ನಾಟಕ-ಕೇರಳ-ತಮಿಳುನಾಡು ರಾಜ್ಯಗಳಲ್ಲಿ ಅಸಂಖ್ಯಾತ ಭಕ್ತರನ್ನು ಹೊಂದಿರುವ ರಾಜ್ಯದ ಮೂರನೇ ಶ್ರೀಮಂತ ದೇವಾಲಯ. ಇಂತಹ ಶಕ್ತಿ ಪೀಠದ ಹೆಸರಿನಲ್ಲಿ ರಾಜಸ್ಥಾನದ ತಿಜಾರಿ ಜಿಲ್ಲೆಯ 21 ವರ್ಷದ ಸೈಬರ್ ವಂಚಕ ನಾಸೀರ್ ಹುಸೇನ್ ನಕಲಿ ವೆಬ್‌ಸೈಟ್ ತೆರೆದು ಭಕ್ತರನ್ನು ಮಹಾವಂಚನೆ ಮಾಡುತ್ತಿದ್ದನು. ಕೊಲ್ಲೂರು ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಚಾಕಚಕ್ಯತೆಯಿಂದ ಸೈಬರ್ ವಂಚಕನನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.**

ಬೆಳಗಾವಿ
✍ಮನ್ನಾಪೂರ

ಕೊಲ್ಲೂರು ಮೂಕಾಂಬಿಕೆ ಕೇರಳ-ಕರ್ನಾಟಕ-ತಮಿಳುನಾಡು ಮತ್ತಿತರ ರಾಜ್ಯಗಳ ಅಸಂಖ್ಯಾತ ಭಕ್ತರ ಪಾಲಿನ ಪವಿತ್ರ ಶಕ್ತಿ ದೇವತೆ. ನೂರಾರು ವರ್ಷಗಳಿಂದಲೂ ಭಕ್ತರು ಶ್ರದ್ಧೆಯಿಂದ ಶಕ್ತಿ ದೇವತೆ ಮೂಕಾಂಬಿಕೆಗೆ ನಡೆದುಕೊಳ್ಳುತ್ತಾರೆ. ಇದೊಂದು ಅಸಂಖ್ಯಾತ ಭಕ್ತರ ಪಾಲಿಗೆ ಪವಿತ್ರವಾದ ಅನುಭವ. ಆದರೆ ಇಂದಿನ ಹೈಟೆಕ್ ಡಿಜಿಟಲ್ ಜಮಾನಾದಲ್ಲಿ 'ನಕಲಿ-ಅಸಲಿ' ಎಂಬುದು ಗೊತ್ತಾಗುವುದಿಲ್ಲ. ಗೊತ್ತಾಗುವಷ್ಟರಲ್ಲಿ ಎಲ್ಲವೂ ಮುಗಿದಿರುತ್ತದೆ. ಭಕ್ತಾದಿಗಳ ಶ್ರದ್ಧೆ ಮತ್ತು ನಂಬಿಕೆಯನ್ನೇ ಬಂಡವಾಳವಾಗಿರಿಸಿಕೊಂಡು ವಂಚಿಸುವ ಜಾಲಗಳು ಸದ್ದಿಲ್ಲದೇ ತಲೆ ಎತ್ತುತ್ತಲಿವೆ.

**ರಾಜಸ್ಥಾನದ ವಂಚಕ...**

ಕೊಲ್ಲೂರು ಮೂಕಾಂಬಿಕೆ ದೇವಿಯ ದೇವಸ್ಥಾನದ ಹೆಸರಿನಲ್ಲಿ ಅಸಲಿಯನ್ನು ನಿವಾಳಿಸುವಂತೆ ನಕಲಿ ವೆಬ್‌ಸೈಟ್ ಸೃಷ್ಟಿಸಲಾಗಿತ್ತು. ಈ ನಕಲಿ ವೆಬ್‌ಸೈಟ್ ಹಿಂದಿನ ಮಾಸ್ಟರ್ ಮೈಂಡ್ ರಾಜಸ್ಥಾನದ ಮೂಲದ ತಿಜಾರಿ ಜಿಲ್ಲೆಯ 21 ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದ ನಾಸೀರ್ ಹುಸೇನ್ ಎಂಬ ಸೈಬರ್ ವಂಚಕ. ಭಕ್ತರಿಂದ ಲಕ್ಷಾಂತರ ರೂಪಾಯಿಗಳನ್ನು ದೋಚಿದ ಅತ್ಯಾಧುನಿಕ ಆನ್‌ಲೈನ್ ವಂಚನೆಯ ಪ್ರಕರಣ ಇದಾಗಿದೆ. ಇಡೀ ವಂಚನೆಯ ಜಾಲದ ಹಿಂದೆ ಇದ್ದದ್ದು ಕೇವಲ ಒಬ್ಬ ತರುಣನೆಂದರೆ ನೀವು ನಂಬಲೇಬೇಕು. ದೂರದ ರಾಜಸ್ಥಾನದಲ್ಲಿ ಕುಳಿತು ಕರ್ನಾಟಕ-ಕೇರಳ, ತಮಿಳುನಾಡು ಭಕ್ತರನ್ನು ಗುರಿಯಾಗಿಟ್ಟುಕೊಂಡು ವಂಚನೆ ಎಸಗಿದ್ದಾನೆ. ಸೈಬರ್ ಕ್ರೈಂಗೆ ಯಾವುದೇ ಗಡಿ-ಭಾಷೆಯಿಲ್ಲ ಎನ್ನುವುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ. ನಿಜಕ್ಕೂ ಸೈಬರ್ ವಂಚಕ ನಾಸೀರ್ ಹುಸೇನ್ ಬಳಸಿದ ತಂತ್ರಜ್ಞಾನ ಅತ್ಯಂತ ಕುತಂತ್ರದಿಂದ ಕೂಡಿತ್ತು.



**ಭಕ್ತರನ್ನು ಯಾಮಾರಿಸುತ್ತಿದ್ದನು...**

ಕರ್ನಾಟಕ ರಾಜ್ಯ ಸರಕಾರದ 'ಕರ್ನಾಟಕ ಟೆಂಪಲ್ ಅಕೋಮೋಡೇಶನ್' ಎಂಬ ಅಧಿಕೃತ ವೆಬ್‌ಸೈಟ್ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ಒಂದನ್ನು ಕ್ರಿಯೆಟ್ ಮಾಡಿದ್ದ ಸೈಬರ್ ವಂಚಕ ನಾಸೀರ್, ಭಕ್ತರಿಂದ ಮುಂಗಡವಾಗಿ ರೂಮ್ ಬುಕ್ಕಿಂಗ್ ಮಾಡಿಸಿಕೊಂಡು ಹಣ ಪಡೆದು ಬಳಿಕ ನಕಲಿ ರಸೀದಿ ಭಕ್ತರಿಗೆ ನೀಡಿ ಯಾಮಾರಿಸುತ್ತಿದ್ದನು. ಭಕ್ತರು ರಸೀದಿಗಳನ್ನು ಹಿಡಿದುಕೊಂಡು ದೇವಸ್ಥಾನದ ಪ್ರಾಂಗಣ ಪ್ರವೇಶಿಸಿದಾಗ ಅವು ನಕಲಿ ರಸೀದಿ. ಅವರ ಹೆಸರಿನಲ್ಲಿ ಯಾವುದೇ ರೂಮ್‌ಗಳು ಬುಕ್ಕಿಂಗ್ ಆಗಿಲ್ಲವೆಂದು ತಿಳಿದು ಬಂದಾಗ ತಾವು ಮೋಸ ಹೋಗಿದ್ದೇವೆ ಎಂದು ಪರಿತಪಿಸುತ್ತಿದ್ದರು.

**ಸೈಬರ್ ದೂರು ದಾಖಲಿಸಿದರು...**

ಆನ್‌ಲೈನ್ ಮುಖಾಂತರ ನಕಲಿ ರಸೀದಿಗಳನ್ನು ಪಡೆದುಕೊಂಡವರ ಪಡಿಪಾಟಲು ಕಂಡು ದೇವಸ್ಥಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ ಶೆಟ್ಟಿ ತಕ್ಷಣ ಜಾಗೃತರಾದರು. 03-11-2025ರಂದು ಪ್ರಶಾಂತ ಶೆಟ್ಟಿ ಅವರು ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ನಕಲಿ ವೆಬ್‌ಸೈಟ್ ಮುಖಾಂತರ ಭಕ್ತಾದಿಗಳು ಮೋಸ ಹೋಗಿರುವ ಕುರಿತು ದೂರು ನೀಡಿದರು. ಕೊಲ್ಲೂರು ಮೂಕಾಂಬಿಕೆ ದೇವಾಲಯ ಮುಜರಾಯಿ ಇಲಾಖೆಗೆ ಒಳಪಟ್ಟ ದೇವಸ್ಥಾನಕ್ಕೆ ಸಂಬಂಧಿಸಿದ ಗಂಭೀರ ಮಾಹಿತಿ ತಂತ್ರಜ್ಞಾನ ವಂಚನೆ ಪ್ರಕರಣವಾದ ಕಾರಣ ಕುಂದಾಪೂರ ಉಪವಿಭಾಗದ ಡಿವೈಎಸ್ಪಿ ಹೆಚ್.ಡಿ. ಕುಲಕರ್ಣಿ ಅವರು ವಿಶೇಷವಾಗಿ ಆಸಕ್ತಿ ವಹಿಸಿದರು.

**ವಿಶೇಷ ತನಿಖಾ ತಂಡ ರಚನೆ...**

ಬೈಂದೂರು ವೃತ್ತದ ಸಿಪಿಐ ಶಿವಕುಮಾರ ವಿ. ಮತ್ತು ಕುಂದಾಪುರ ಗ್ರಾಮೀಣ ಸಿಪಿಐ ಸಂತೋಷ ಎ. ಕಾಯ್ಕಿಣಿ ಅವರ ನೇತೃತ್ವದಲ್ಲಿ ಕೊಲ್ಲೂರ ಠಾಣೆಯ




ಪಿಎಸ್ಐ ವಿನಯ ಎಂ. ಕೊರ್ಲಹಳ್ಳಿ, ಭೀಮಾಶಂಕರ ಸಿನ್ನೂರ, ನಾಗೇಂದ್ರ, ಗಂಗೊಳ್ಳಿ ಪೊಲೀಸ್ ಠಾಣೆಯ ರಾಘವೇಂದ್ರ, ಶೆಟ್ಟಿ ಹಾಗೂ ಕೃಷ್ಣ ದೇವಾಡಿಗರನ್ನು ಒಳಗೊಂಡಂತೆ ಒಂದು ವಿಶೇಷ ತನಿಖಾ ತಂಡ ರಚಿಸಿ ಸ್ವತಃ ಡಿವೈಎಸ್ಪಿ ಹೆಚ್.ಡಿ. ಕುಲಕರ್ಣಿ ನಿರ್ದೇಶನ ನೀಡಿ 'ಗೋ ಅಹೆಡ್' ಎಂದಿದ್ದರು.

**ಸೈಬರ್ ವಂಚಕ ನಾಸೀರ್ ಬಂಧನ...**

ಆರೋಪಿ ಛಾಪೆಯ ಕೆಳಗೆ ತೂರಿದ್ದರೆ ಕರ್ನಾಟಕ ಪೊಲೀಸರು ರಂಗೋಲಿ ಕೆಳಗೆ ನುಗ್ಗಿದ್ದರು. ಅಂದುಕೊಂಡಂತೆ ವಿಶೇಷ ತನಿಖಾ ತಂಡ ಹಗಲಿರುಳು ಖಚಿತವಾದ ಮಾಹಿತಿ ಆಧರಿಸಿ ಸೈಬರ್ ಕಳ್ಳನ ಅಡ್ಡೆಗೆ ನುಗ್ಗಲು ರೆಡಿ ಆಗಿತ್ತು. ದಿನಾಂಕ 19-12-2025ರಂದು ರಾಜಸ್ಥಾನ ರಾಜ್ಯದ ಆಲ್ವಾರ್ ಜಿಲ್ಲೆಯ ತಿಜಾರಾ ತಾಲ್ಲೂಕಿನ ದಾಖಾಪೂರಿ ಗ್ರಾಮಕ್ಕೆ ಎಂಟ್ರಿ ಕೊಟ್ಟ ವಿಶೇಷ ತನಿಖಾ ತಂಡ ಅಲ್ಲಿನ ಪೊಲೀಸರ ನೆರವಿನಿಂದ ಸೈಬರ್ ಕಳ್ಳ ನಾಸೀರ್ ಹುಸೇನ್‌ನನ್ನು ಬಲೆಗೆ ಕೆಡವಿತು. ಅದರಂತೆ ಆತ ತನ್ನ ವಂಚನೆಗೆ ಬಳಸಿದ ಲ್ಯಾಪ್‌ಟಾಪ್ ವಶಪಡಿಸಿಕೊಂಡು ಆರೋಪಿ ನಾಸೀರ್‌ನನ್ನು ತಮ್ಮ ವಶಕ್ಕೆ ತೆಗೆದುಕೊಂಡು ನೇರವಾಗಿ ಕೊಲ್ಲೂರು ಪೊಲೀಸ್ ಠಾಣೆಗೆ ಬಂದರು. ಆರೋಪಿಯನ್ನು ಬೈಂದೂರ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ನ್ಯಾಯಾಧೀಶರು ವಂಚಕನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ☯

## ಕ್ಯೂಆರ್ ಕೋಡ್ ಮತ್ತು ಫೋನ್‌ಪೇ...

ಭಕ್ತರು ದೇವಾಲಯದ ಅತಿಥಿ ಗೃಹದಲ್ಲಿ ಕೊಠಡಿಗಳನ್ನು ಕಾಯ್ದಿರಿಸಲು ಬಳಸುವ ಅಧಿಕೃತ ವೆಬ್‌ಸೈಟ್‌ನಂತೆ ಹೋಲುವ ನಕಲಿ ವೆಬ್‌ಸೈಟ್ ತೆರೆದರು... ಇದು ನಕಲಿ ಎಂದು ಗೊತ್ತಾಗದಂತೆ ನಿರ್ಮಿಸಲಾಗಿತ್ತು. ಮುಂಗಡ ಕೊಠಡಿಗಳ ಕಾಯ್ದಿರಿಸುವಿಕೆಯಲ್ಲಿ ಭಕ್ತಾದಿಗಳ ಹಣವನ್ನು ಗುಳುಂ ಮಾಡಲಾಗುತ್ತಿತ್ತು.

'ಕರ್ನಾಟಕ ಟೆಂಪಲ್ ಅಕೋಮೋಡೇಶನ್' ಎಂಬ ಹೆಸರಿನಲ್ಲಿ ಸೈಬರ್ ಕಳ್ಳ ಚಾಕಚಕ್ಯತೆಯಿಂದ ನಕಲಿ ವೆಬ್‌ಸೈಟ್ ನಿರ್ಮಿಸಿದ್ದು ಅದರಲ್ಲಿ ಕ್ಯೂಆರ್ ಕೋಡ್ ಮತ್ತು ಫೋನ್‌ಪೇ ಪಾವತಿ ಆಯ್ಕೆಗಳು ಸೇರಿಸಲಾಗಿತ್ತು. ವಾಟ್ಸಾಪ್ ಮೂಲಕ ಭಕ್ತರಿಗೆ ಇದರ ಲಿಂಕ್ ಕಳಿಸಿ ಯುಪಿಐ ಪೇಮೆಂಟ್ ಮಾಡಲು ಪ್ರೇರೇಪಿಸುತ್ತಿದ್ದನು. ಇದಕ್ಕೆ ಬದಲಾಗಿ ನಕಲಿ ರಸೀದಿಗಳನ್ನು ನೀಡುತ್ತಿದ್ದನು. ರಸೀದಿಗಳನ್ನು ಹಿಡಿದು ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಬಂದಾಗ ನೊಂದಣಿ ದಾಖಲೆ ಸಿಗದೇ ಸಂಕಷ್ಟಕ್ಕೆ ಈಡಾಗುತ್ತಿದ್ದರು. ದೇವಾಲಯದ ಲಲಿತಾಂಬಿಕಾ ಅತಿಥಿ ಗೃಹದಲ್ಲಿ ಕೊಠಡಿ ಕಾಯ್ದಿರಿಸುವ ಹೆಸರಿನಲ್ಲಿ ಈ ದಂಧೆ ನಡೆದಿರುವ ಶಂಕೆ ವ್ಯಕ್ತವಾಗುತ್ತಿದೆ.

ರಾಜ್ಯದ ಎ-ಗ್ರೇಡ್ ದೇವಾಲಯಗಳಿಗೆ ಸರ್ಕಾರದಿಂದಲೇ ಅಧಿಕೃತ ವೆಬ್‌ಸೈಟ್ ಇರುವುದು. ಈ ಸೈಟ್‌ನಲ್ಲಿ ಯಾವುದೇ ಕ್ಯೂಆರ್ ಕೋಡ್ ಪಾವತಿ ವ್ಯವಸ್ಥೆ ಇರುವುದಿಲ್ಲ. ಭಕ್ತರು ನಕಲಿ ಲಿಂಕ್‌ಗಳಿಗೆ ಮೊರೆ ಹೋಗದೆ ಅಧಿಕೃತ ಸರಕಾರಿ ಸೈಟ್‌ನಿಂದ ಮಾತ್ರ ಬುಕ್ಕಿಂಗ್ ಮಾಡಬೇಕು. ಈ ಹಿಂದೆ 2024 ಫೆಬ್ರವರಿಯಲ್ಲೂ ಕೂಡಾ ಇದೇ ರೀತಿ ವಂಚನೆಯಾಗಿತ್ತು. ಮೂಕಾಂಬಿಕಾ ದೇವಾಲಯಕ್ಕೆ ಸಂಬಂಧಿಸಿದ ಯಾವುದೇ ಆನ್‌ಲೈನ್ ಬುಕ್ಕಿಂಗ್ ಮಾಡುವಾಗ ಅಧಿಕೃತ ಸರಕಾರಿ ವೆಬ್‌ಸೈಟ್‌ನಿಂದ ಮಾತ್ರ ಸೇವೆ ಪಡೆಯಬೇಕೆಂದು ದೇವಸ್ಥಾನ ಮೂಲಗಳು ತಿಳಿಸಿವೆ. ☯

## ತಿಜಾರಿ ಜಿಲ್ಲೆ 'ಸೈಬರ್ ಕ್ರೈಂ'ನ ತವರೂರು...

ಇಂದು ಹೆಚ್ಚಾಗಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ನಡೆಸುವ ಸೈಬರ್ ವಂಚನೆ ಪತ್ತೆಯಾಗುವುದು ಅಪರೂಪ. ಒಂದು ವೇಳೆ ತಿಜಾರಿ ಎಂಬ ಜಿಲ್ಲೆ 'ಸೈಬರ್ ಕ್ರೈಂ'ನ ತವರೂರು ಎಂದರೆ ತಪ್ಪಾಗಲಾರದು. ಸೈಬರ್ ಕುಖ್ಯಾತರೇ ತುಂಬಿರುವ ತಿಜಾರಿ ಜಿಲ್ಲೆಗೆ ಹೋಗಿ ಆರೋಪಿಗಳನ್ನು ಹಿಡಿದು ತರುವುದು ಅಂತಹ ಸುಲಭದ ಮಾತಲ್ಲ. ಅಲ್ಲಿನ ಪೊಲೀಸರು ಕೂಡಾ ಸೈಬರ್ ಕಳ್ಳರ ಬಂಧನಕ್ಕೆ ಸಹಕರಿಸಲಾರರು. ಆದರೆ ಇದೊಂದು ಪ್ರತಿಷ್ಠಿತ ಧಾರ್ಮಿಕ ಕೇಂದ್ರದ ವಿಚಾರವಾದ ಕಾರಣ ಸ್ಥಳೀಯ ಪೊಲೀಸರಿಗೆ ಮನದಟ್ಟು ಮಾಡಿದ ಬೈಂದೂರು-ಕೊಲ್ಲೂರು ಪೊಲೀಸರು ಆರೋಪಿ ನಾಸೀರ್‌ನನ್ನು ಉಡುಪಿಗೆ ಕರೆತಂದರು. ಸರಕಾರಿ ಯೋಜನೆಗಳ ಹೆಸರಿನಲ್ಲಿ ವಂಚನೆ ಮಾಡುವ ಬಹಳಷ್ಟು ಜನರು ತಿಜಾರಿಯಲ್ಲಿದ್ದಾರೆ. ಅವರಿಂದಲೇ ಪ್ರೇರೇಪಣೆ ಪಡೆದುಕೊಂಡು ತಾನು ಈ ಕೃತ್ಯ ಎಸಗಿರುವುದಾಗಿ ಸೈಬರ್ ಕಳ್ಳ ನಾಸೀರ್ ಹುಸೇನ್ ಪೊಲೀಸರ ಮುಂದೆ ಬಾಯಿ ಬಿಟ್ಟಿದ್ದಾನೆ. ಇನ್ನು ಪದವಿ ಓದುತ್ತಿರುವ ನಾಸೀರ್ ವಿದ್ಯಾರ್ಥಿ ಹಂತದಲ್ಲಿಯೇ ಪೊಲೀಸ್ ರೆಕಾರ್ಡ್‌ನಲ್ಲಿ ದಾಖಲಾಗಿದ್ದಾನೆ. ☯

# ಅಪ್ರಾಪ್ತೆಯನ್ನು ಅಪಹರಿಸಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ ಸ್ವಯಂಘೋಷಿತ ಹಠ ಯೋಗಿ ಲೋಕೇಶ್ವರನಿಗೆ 35 ವರ್ಷ ಕಠಿಣ ಶಿಕ್ಷೆ!

**ಕೌಟುಂಬಿಕ ಸಮಸ್ಯೆ, ಅನಾರೋಗ್ಯದ ಹಿನ್ನೆಲೆಯಲ್ಲಿ ರಾಯಭಾಗ ತಾಲ್ಲೂಕಿನ ಮೇಕಳಿಯಲ್ಲಿದ್ದ ರಾಮ ಮಂದಿರದ ಹಲಾಲುಕೋರ, ಹಠಯೋಗಿ ಲೋಕೇಶ್ವರ ಸ್ವಾಮೀಜಿ ಬಳಿಗೆ ಕಳೆದ ಎರಡು ವರ್ಷಗಳಿಂದ ಅಪ್ರಾಪ್ತೆ ತರುಣಿ ಬರುತ್ತಿದ್ದಳು. ಅಪ್ರಾಪ್ತೆಯ ಮೇಲೆ ಕಾಮುಕ ಸ್ವಾಮಿಯ ಕಣ್ಣು ಬಿತ್ತು. ಅದೊಂದು ದಿನ 'ನಿನ್ನನ್ನು ಮನೆಗೆ ಬಿಡುತ್ತೇನೆಂದು' ಕಾರಿನಲ್ಲಿ ಅಪಹರಿಸಿ ಬಾಗಲಕೋಟ ಮತ್ತು ಮಂತ್ರಾಲಯದ ಲಾಡ್ಜ್‌ಗಳಲ್ಲಿ ಬಲವಂತವಾಗಿ ಅಪ್ರಾಪ್ತೆಯ ಮೇಲೆ ಅತ್ಯಾಚಾರಗೈದು ಆಕೆಯನ್ನು ಬಾಗಲಕೋಟ ಜಿಲ್ಲೆಯ ಮಹಾಲಿಂಗಪೂರದ ಬಸ್ ನಿಲ್ದಾಣದೊಳಗೆ ಬಿಟ್ಟು 'ಈ ವಿಷಯ ಯಾರಿಗೂ ಹೇಳಬಾರದು' ಎಂದು ಬೆದರಿಕೆ ಹಾಕಿದ್ದನು. ಇತ್ತೀಚಿಗೆ ಅಪ್ರಾಪ್ತೆ ಮೇಲಿನ ಅತ್ಯಾಚಾರ ಪ್ರಕರಣದ ವಿಚಾರಣೆಯನ್ನು ಬೆಳಗಾವಿಯ ವಿಶೇಷ ಶೀಘ್ರಗತಿ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಎಂ. ಪುಷ್ಪಲತಾ ನಡೆಸಿದ್ದಾರೆ. ಕಾಮುಕ ಸ್ವಾಮಿಯ ಅತ್ಯಾಚಾರ ಸಾಬೀತಾದ ಕಾರಣ ಆತನಿಗೆ 35 ವರ್ಷಗಳ ಕಠಿಣ ಶಿಕ್ಷೆ, ಒಂದು ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಮೂಡಲಗಿಯ ಸಿಪಿಐ ಶ್ರೀಶೈಲ ಬ್ಯಾಕೋಡ ಆರೋಪಿಯನ್ನು ಬಂಧಿಸಿ ಆತನ ಮೇಲೆ ದೋಷಾರೋಪಣೆ ಪತ್ರ ಸಲ್ಲಿಸಿದ್ದರು. ಸರಕಾರದ ಪರವಾಗಿ ಅಭಿಯೋಜಕ ಎಲ್.ವ್ಹಿ. ಪಾಟೀಲ ಸಮರ್ಥವಾಗಿ ವಾದ ಮಂಡಿಸಿದ್ದರು.**


ಅತ್ಯಾಚಾರಿ ಲೋಕೇಶ್ವರ ಸ್ವಾಮಿಗೆ 35 ವರ್ಷ ಶಿಕ್ಷೆ


ರಾಯಭಾಗ ತಾಲ್ಲೂಕು ಮೇಕಳಿಯಲ್ಲಿ ನಿರ್ಮಿಸಿದ್ದ ರಾಮ ಮಂದಿರ

**ಬೆಳಗಾವಿ**
✍ ಮನ್ನಾಪೂರ

ಕಲಬುರಗಿ ಜಿಲ್ಲೆಯ ಚಿತ್ತಾಪೂರ ಮೂಲದ ಮಹಾ ಚಾಲಾಕಿಯೊಬ್ಬನು ಲಕ್ಷಣವಾಗಿ ಗಡ್ಡ-ಮೀಸೆ ತಲೆಗೂದಲನ್ನು ಬೆಳೆಸಿಕೊಂಡು, ಕಾವಿ ಬಟ್ಟೆ ಉಟ್ಟುಕೊಂಡು ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಮೇಕಳಿ ಗ್ರಾಮಕ್ಕೆ ಕಳೆದ ಏಳೆಂಟು ವರ್ಷಗಳ ಹಿಂದೆ ಬಂದನು. ಆರಂಭದಲ್ಲಿ ತಾನು ಹಠಯೋಗಿ ಸನ್ಯಾಸಿ ಲೋಕೇಶ್ವರ ಎಂದು ಪರಿಚಯಿಸಿಕೊಂಡು ಊರಿನ ಜನರನ್ನು ತನ್ನ ಮಾತಿನ ಮೋಡಿಯಿಂದ ಬುಟ್ಟಿಗೆ ಹಾಕಿಕೊಂಡನು. 30 ವರ್ಷ ಪ್ರಾಯದ ಈತನನ್ನು ಊರ ಜನರೆಲ್ಲ ಬಹಳಷ್ಟು ನಂಬಿದ್ದರು. ಈತ ಭೂಮಿಗೆ ಬಂದ ಭಗವಂತನಿರಬೇಕೆಂದು ನಂಬಿ ಬಿಟ್ಟರು. ಊರವರ ನಂಬಿಕೆಯನ್ನೇ ಈತ ತನ್ನ ಬಂಡವಾಳವನ್ನಾಗಿ ಮಾಡಿಕೊಂಡು ಪುರಾಣ-ಪ್ರವಚನ ಮಾಡತೊಡಗಿದನು.

**ಅಕ್ರಮವಾಗಿ ರಾಮ ಮಂದಿರ ನಿರ್ಮಾಣ...**

ಮೇಕಳಿಗೆ ಬಂದ ಒಂದು ವರುಷದ ಅವಧಿಯಲ್ಲಿಯೇ ಮಹಾ ಹರಾಮಿ ಲೋಕೇಶ್ವರ ತನ್ನ ಅಸಲಿ ಬುದ್ಧಿ ತೋರಿಸಲು ಆರಂಭಿಸಿದನು. ಊರ ಹೊರಗಿದ್ದ ಸರಕಾರಿ ಗೈರಾಣ ಜಾಗದಲ್ಲಿ ಸುಮಾರು ಎಂಟು ಎಕರೆ ಜಾಗದ ಅನಧಿಕೃತ ಕಬ್ಜಾ ಮಾಡಿಕೊಂಡು ಭಕ್ತರಿಂದ ದೇಣಿಗೆ ಸ್ವೀಕರಿಸಿ ಅಲ್ಲಿ ಬೃಹತ್ ಪ್ರಮಾಣದ ಮಠವೊಂದನ್ನು ನಿರ್ಮಿಸಿ ಅದಕ್ಕೆ ರಾಮ ಮಂದಿರ ಎಂದು ಹೆಸರಿಟ್ಟುಕೊಂಡನು. ಇದಕ್ಕೆ ತಾಲ್ಲೂಕಾಡಳಿತದಿಂದ ಯಾವುದೇ ರೀತಿಯ ಅನುಮತಿ ಪಡೆದಿರಲಿಲ್ಲ. ದಿನಗಳು ಉರುಳಿದಂತೆ ಯಾಕೋ ಲೋಕೇಶ್ವರ ಸ್ವಾಮೀಜಿಯ ಅನೈತಿಕ ಚಟುವಟಿಕೆಗಳು ಮಠದಲ್ಲಿ ಎದ್ದು ಕಾಣತೊಡಗಿದವು. ಊರಿನವರು ಇದರ ಕುರಿತಾಗಿ ತಾಲ್ಲೂಕಾಡಳಿತ ಮತ್ತು ಪೊಲೀಸ್ ಇಲಾಖೆಯ ಗಮನಕ್ಕೂ ತಂದರೂ ಲೋಕೇಶ್ವರ ಸ್ವಾಮೀಜಿ ಅದನ್ನೆಲ್ಲಾ ಹೇಗೋ ಮ್ಯಾನೇಜ್ ಮಾಡಿಕೊಂಡು ಊರಿನವರಿಗೆ ಸಡ್ಡು ಹೊಡೆಯಲಾರಂಭಿಸಿದನು. ಅನೇಕ ಯೂಟ್ಯೂಬರ್‌ಗಳನ್ನು ಹಿಡಿದುಕೊಂಡು ಇನ್ನಿಲ್ಲದಂತೆ ಅಗ್ಗದ ಪ್ರಚಾರ ಪಡೆದುಕೊಂಡು ದಿನ ಬೆಳಗಾಗುವುದರಲ್ಲಿ ಮಹಾನ್ ಸ್ವಾಮೀಜಿಯಂತೆ ಪೋಸು ನೀಡತೊಡಗಿದನು. ಈತ ಮುಟ್ಟಿದರೆ ಸಾಕು ಅಸಾಧ್ಯವಾದ ರೋಗಗಳೆಲ್ಲ ಗುಣಮುಖವಾಗುತ್ತವೆ. ತಮ್ಮ ಸರ್ವ ಪಾಪ ಪರಿಹಾರವಾಗುತ್ತದೆ ಎಂದು ಮೂಢ ಜನತೆ ನಂಬಿದರು. ಈ ಸುದ್ದಿ ಸುತ್ತಲಿನ ಹತ್ತಾರು ಹಳ್ಳಿಗಳಿಗೆ ಹಬ್ಬಿ ಜನ ಹಗಲಿರುಳು ಎನ್ನದೇ ರಾಮ ಮಂದಿರಕ್ಕೆ ಬರತೊಡಗಿದರು.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎಸ್.ಎನ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

**ಮಟಕಾ ನಂಬರ್... ವಶೀಕರಣ...**

ದಿನಗಳು ಕಳೆದಂತೆ ಲೋಕೇಶ್ವರ ಸ್ವಾಮಿಯ ಡೊಂಗಿ ಪವಾಡಗಳು ಹುಟ್ಟಿಕೊಳ್ಳತೊಡಗಿದವು. ಮಟಕಾ ನಂಬರ್, ವಶೀಕರಣ... ನಿಧಿ ತೋರಿಸುವುದು ಹೀಗೆ ಅನೇಕ ಅನೈತಿಕ ಚಟುವಟಿಕೆಗಳು ರಾಮ ಮಂದಿರದಲ್ಲಿ ಹುಟ್ಟಿಕೊಂಡವು. ಪ್ರತಿ ಅಮಾವಾಸ್ಯೆ, ಹುಣ್ಣಿಮೆಯಂದೂ ಲೋಕೇಶ್ವರ ಸ್ವಾಮಿ ವಿಜೃಂಭಿಸತೊಡಗಿದನು. ಕೌಟುಂಬಿಕ ಮತ್ತು ಆರೋಗ್ಯ ಸಮಸ್ಯೆ ಇದ್ದವರು ರಾಮ ಮಂದಿರ ಮಠದಲ್ಲಿ ಸೇವೆ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆ ಎಂಬ ಪುಕಾರು ಹಬ್ಬಿಸಲಾಯಿತು. ಅದರಂತೆ ದೂರದೂರಿಂದ ಬಂದ ಜನ ಮಠದಲ್ಲಿ ಇರತೊಡಗಿದ್ದರು. 'ಗಂಡಸರು ಬಂದರೆ ನಿಮ್ಮ ಹೆಂಗಸರನ್ನು ಬಿಟ್ಟು ಹೋಗಬೇಕು ಅವರಿಗೆ ಒಳ್ಳೆಯದಾಗುತ್ತದೆ' ಎಂದು ಹೇಳಿ ಕಳಿಸಲಾಗುತ್ತಿತ್ತು.

**ಎರಡು ವರ್ಷದಿಂದ ಅಪ್ರಾಪ್ತೆ ಬರುತ್ತಿದ್ದಳು...**

ಕೇವಲ ಐದಾರು ವರ್ಷಗಳಲ್ಲಿ ಲೋಕೇಶ್ವರ ಸ್ವಾಮಿ ಯಾರಿಗೂ ಜಗ್ಗದೇ ಬಗ್ಗದೇ ಬೆಳೆದು ನಿಂತನು.


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಸಿಪಿಐ ಶ್ರೀಶೈಲ ಬ್ಯಾಕೋಡ


ಪಿಎಸ್ಐ ರಾಜು ಪೂಜೇರಿ

ಊರಿನವರ ವಿರೋಧವನ್ನು ಲೆಕ್ಕಿಸದೇ ಮಠದಲ್ಲಿ ಗೂಂಡಾ ಚಟುವಟಿಕೆಗಳು ಹೆಚ್ಚಾದವು. ಇದಕ್ಕಾಗಿ ಮಠದಲ್ಲಿ ಮಾರಕಾಸ್ತ್ರಗಳು ಸಂಗ್ರಹಗೊಂಡವು.

ತನ್ನ ಮನೆಯ ಕೌಟುಂಬಿಕ ಸಮಸ್ಯೆಗಳು, ಅನಾರೋಗ್ಯದ ಹಿನ್ನೆಲೆಯಲ್ಲಿ ಪಕ್ಕದ ಮೂಡಲಗಿ ತಾಲ್ಲೂಕಿನ ಪಿಯುಸಿ ಓದುತ್ತಿದ್ದ ಅಪ್ರಾಪ್ತೆ ತರುಣಿಯೊಬ್ಬಳು ತನ್ನ ತಂದೆ-ತಾಯಿಗಳೊಂದಿಗೆ ಮೇಕಳಿ ಲೋಕೇಶ್ವರ ಸ್ವಾಮೀಜಿಯ ಮಠಕ್ಕೆ ಬಂದು ತಿಂಗಳಲ್ಲಿ ಒಂದೆರಡು ದಿನವಿದ್ದು ಹೋಗುತ್ತಿದ್ದಳು. ಮೈ-ಕೈ ತುಂಬಿಕೊಂಡು ದುಂಡಾಗಿದ್ದ ಅಪ್ರಾಪ್ತೆ ಮೇಲೆ ಕಾಮುಕ, ಹಲಾಲುಕೋರ ಲೋಕೇಶ್ವರ ಸ್ವಾಮೀಜಿಯ ಕಣ್ಣು ಬಿತ್ತು. ಹೇಗಾದರೂ ಸರಿ ಅಪ್ರಾಪ್ತೆಯನ್ನು ಅನುಭವಿಸಲೇಬೇಕು ಎಂಬ ಕೆಟ್ಟ ಕಾಮ ಆತನಲ್ಲಿ ಬುಸುಗುಟ್ಟಿತು. ಇದಕ್ಕಾಗಿ ಸಮಯ ಸಂದರ್ಭಕ್ಕಾಗಿ ಲೋಕೇಶ್ವರ ಸ್ವಾಮೀಜಿ ಹೊಂಚು ಹಾಕತೊಡಗಿದ್ದನು.

**ಮನೆಗೆ ಬಿಡುತ್ತೇನೆಂದು ಅಪಹರಿಸಿದ...**

ಅಂದು ಮೇ 13ನೇ ತಾರೀಕು. ಮೇಕಳಿ ಮಠದಲ್ಲಿ ಉಳಿದುಕೊಂಡಿದ್ದ ಅಪ್ರಾಪ್ತೆ ತನ್ನ ಮನೆಗೆ ಹೊರಟಿದ್ದಳು. ಕಾಮುಕ ಲೋಕೇಶ್ವರ ಸ್ವಾಮೀಜಿ ಹಿಂದಿನಿಂದ ಕಾರಿನಲ್ಲಿ ಬಂದು 'ಹೇಗೋ ನಾನು ಆ ಕಡೆಗೆ ಹೊರಟಿದ್ದೇನೆ, ನಿನ್ನನ್ನು ಮನೆ ಕಡೆಗೆ ಬಿಡುತ್ತೇನೆ ಬಾ' ಎಂದು ಕಾರಿನಲ್ಲಿ ಹತ್ತಿಸಿಕೊಂಡು ಮನೆಯ ಹತ್ತಿರ ಬಿಡದೇ ಆಕೆಯನ್ನು ಬಲವಂತವಾಗಿ ಕರೆದೊಯ್ದನು. ಮೊದಲು

☞15

ಎ.ಆರ್.ಕೆ. ಎಂದರೆ ನೇರಾ, ನಿಷ್ಠೂರವಾಗಿ ಇದ್ದದ್ದನ್ನು ಇದ್ದ ಹಾಗೇ ಖಂಡ-ತುಂಡಾಗಿ ಮಾತನಾಡುವ ಖಡಕ್ ವ್ಯಕ್ತಿ, ಜೊತೆಗೆ ಒಳ್ಳೆಯ ವ್ಯಕ್ತಿತ್ವ ಇರುವ ಗುಣವಂತ ರಾಜಕಾರಣಿ, ರಾಜಕಾರಣ ನಿಮಗೇನು ಹೊಸತಲ್ಲ, ನಿಮ್ಮ ತಂದೆಯವರ ಕಾಲದಿಂದಲೂ ರಾಜಕಾರಣ ಮಾಡಿಕೊಂಡು ಬಂದವರು ನೀವು. ಆದರೆ ಎಂದೋ ಗತಿಸಿಹೋಗಿರುವ ಯಾವುದೋ ಹಳೆಯ ಘಟನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ದ್ವೇಷದ ರಾಜಕಾರಣ ಮಾಡುತ್ತಿದ್ದೀರಿ ಎಂಬ ಗಂಭೀರ ಆರೋಪಕ್ಕೆ ಗುರಿಯಾಗುತ್ತಿದ್ದೀರಿ. ಇದು ಒಳ್ಳೆಯ ಬೆಳವಣಿಗೆಯಲ್ಲ.

# ಬಣ ತಾರತಮ್ಯ ಬೇಡ ಶಾಸಕರೇ... ನಿಮ್ಮ ಗೆಲುವಿಗೆ ಎಲ್ಲರ ಶ್ರಮವೂ ಇದೆ...


ಎ.ಆರ್. ಕೃಷ್ಣಮೂರ್ತಿ

ಕೊಳ್ಳೇಗಾಲ
ಎಸ್. ಸ್ವಾಮಿ

ಸ್ವಾಭಿಮಾನಕ್ಕೆ ಇನ್ನೊಂದು ಹೆಸರೇ ಎ.ಆರ್. ಕೃಷ್ಣಮೂರ್ತಿ, ಆ ಹೆಸರನ್ನು ಹಾಳು ಮಾಡಿಕೊಳ್ಳಬೇಡಿ. ಎ.ಆರ್.ಕೆ. ಎಂದರೆ ನೇರಾ, ನಿಷ್ಠೂರವಾಗಿ ಇದ್ದದ್ದನ್ನು ಇದ್ದ ಹಾಗೇ ಖಂಡ-ತುಂಡಾಗಿ ಮಾತನಾಡುವ ಖಡಕ್ ವ್ಯಕ್ತಿ, ಜೊತೆಗೆ ಒಳ್ಳೆಯ ವ್ಯಕ್ತಿತ್ವ ಇರುವ ಗುಣವಂತ ರಾಜಕಾರಣಿ, ರಾಜಕಾರಣ ನಿಮಗೇನು ಹೊಸತಲ್ಲ, ನಿಮ್ಮ ತಂದೆಯವರ ಕಾಲದಿಂದಲೂ ರಾಜಕಾರಣ ಮಾಡಿಕೊಂಡು ಬಂದವರು ನೀವು. ಆದರೆ ಎಂದೋ ಗತಿಸಿಹೋಗಿರುವ ಯಾವುದೋ ಹಳೆಯ ಘಟನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ದ್ವೇಷದ ರಾಜಕಾರಣ ಮಾಡುತ್ತಿದ್ದೀರಿ ಎಂಬ ಗಂಭೀರ ಆರೋಪಕ್ಕೆ ಗುರಿಯಾಗುತ್ತಿದ್ದೀರಿ. ಇದು ಒಳ್ಳೆಯ ಬೆಳವಣಿಗೆಯಲ್ಲ.

ಜಿಲ್ಲೆಯಲ್ಲಿರುವುದು ನೀವೊಬ್ಬರೇ ನಾಯಕರು ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ಅದರಲ್ಲೂ ದಲಿತ ಜನಾಂಗದಲ್ಲಿ ನೀವೊಬ್ಬರೇ ಪ್ರಮುಖ ನಾಯಕರು ಎಂಬುದು ಸಹ ಗಮನದಲ್ಲಿರಲಿ, ಪ್ರಮುಖ ಮುಖಂಡರು, ಕಾರ್ಯಕರ್ತರನ್ನು ಹತ್ತಿರಕ್ಕೆ ತೆಗೆದುಕೊಳ್ಳಿ, ಶಾಸಕರೇ... ಕಳೆದ 19 ವರ್ಷಗಳಿಂದ ಸತತವಾಗಿ ಸೋಲುಂಡಿದ್ದ ನಿಮ್ಮನ್ನು 20 ವರ್ಷಗಳ ನಂತರ ಜನ ಬಹಳ ಉತ್ಸುಕತೆಯಿಂದ ಕೈ ಹಿಡಿದಿದ್ದಾರೆ ನಿಜ. ನೀವು ಸಹ ಬರೋಬ್ಬರಿ 1,08,363 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿ ಶಾಸಕರಾಗಿದ್ದೀರಿ. ಆದರೆ ನಿಮ್ಮ ಆ ಅಭೂತ ಪೂರ್ವ ಗೆಲುವಿಗೆ ಕಾರಣ ಕ್ಷೇತ್ರದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮುಖಂಡರು, ಕಾರ್ಯಕರ್ತರು ಎಂಬುದು ನೆನಪಿರಲಿ. ಆ ಮುಖಂಡರು, ಕಾರ್ಯಕರ್ತರುಗಳಲ್ಲಿ ನಿಮ್ಮ ಬೆಂಬಲಿಗರು, ಅನುಯಾಯಿಗಳು ಮಾತ್ರ ಇಲ್ಲ, ಆ ನಿಮ್ಮ ಈ ಅಭೂತ ಪೂರ್ವ ಗೆಲುವಿನ ಹಿಂದೆ ಮಾಜಿ ಸಂಸದ ದಿವಂಗತ ಆರ್. ಧೃವನಾರಾಯಣ್, ಮಾಜಿ ಶಾಸಕರಗಳಾದ ದಿವಂಗತ ಎಸ್. ಜಯಣ್ಣರವರ ಹಾಗೂ ಜಿ.ಎನ್ ನಂಜುಂಡಸ್ವಾಮಿಯವರ ಬೆಂಬಲಿಗರು, ಅನುಯಾಯಿಗಳ ಶ್ರಮವೂ ಇದೆ ಎಂಬುದು ಅಷ್ಟೇ ಸತ್ಯ, ಅವರು ಯಾರ ಅನುಯಾಯಿಗಳೇ ಆಗಿರಲಿ ನಿಮ್ಮದೇ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು.

2023ರ ಈ ನಿಮ್ಮ ಗೆಲುವಿಗೆ ಕೇವಲ ನಿಮ್ಮ ಬೆಂಬಲಿಗರು, ಅನುಯಾಯಿಗಳು ಮಾತ್ರ ಕಾರಣರಾಗಿದ್ದರೆ ನೀವು 2018 ರಲ್ಲಿ ಚುನಾವಣೆ ಎದುರಿಸಿದಾಗ ಪಡೆದುಕೊಂಡಿದ್ದಷ್ಟು ಮತಗಳಿಗಷ್ಟೆ ಸೀಮಿತವಾಗಬೇಕಿತ್ತು. ಆದರೆ 2018ರ ಚುನಾವಣೆಯಲ್ಲಿ ತಮ್ಮ ನಾಯಕನಿಗೆ ಟಿಕೇಟ್ ಸಿಗಲಿಲ್ಲ ಎಂಬುದಕ್ಕಷ್ಟೆ ಬೇಸರಗೊಂಡಿದ್ದ ಜಯಣ್ಣ ಬೆಂಬಲಿಗರು ನಿಮಗೆ ನಿಷ್ಠೆ ತೋರಿರಲಿಲ್ಲ ಅದು ಸಹಜ. ಅಂದು ಆ ಮುಖಂಡರುಗಳು, ಕಾರ್ಯಕರ್ತರು ಗೊತ್ತು ಗೊತ್ತಿಲ್ಲದ ಹಾಗೆ ತಪ್ಪು ಮಾಡಿರುತ್ತಾರೆ ಅದು ಅನಿವಾರ್ಯ ಅದನ್ನು ನೀವು ಬಹಿರಂಗವಾಗಿ ಎಲ್ಲಿಯೂ ಹೇಳಿ ಕೊಳ್ಳಬೇಡಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು ತುಂಬಾ ಒಳ್ಳೆಯದು ಯಾವುದೇ ಕ್ಷೇತ್ರದಲ್ಲಾದರು ತಮ್ಮ ತಮ್ಮ ಗಾಡ್‌ಫಾದರ್‌ಗಳಿಗೆ ನಿಷ್ಠೆಯಿಂದ ನಡೆದುಕೊಳ್ಳುವುದು ಧರ್ಮ. ಅದರಲ್ಲೂ ಪ್ರಮುಖವಾಗಿ ರಾಜಕಾರಣದಲ್ಲಿ ತಮ್ಮ ತಮ್ಮ ಗಾಡ್‌ಫಾದರ್‌ಗಳಿಗೆ, ನೆಚ್ಚಿನ ನಾಯಕರಿಗೆ ಕಾರ್ಯಕರ್ತರು, ಮುಖಂಡರು ನಿಷ್ಠೆಯಿಂದ ನಡೆದುಕೊಳ್ಳುವುದು ರಾಜಕೀಯ ಧರ್ಮ ಹಾಗಾಗಿ ಆ ನಿಷ್ಠೆಯನ್ನು ತೋರಲು ಹೋಗಿದ್ದಾರೆ, ಅದರಲ್ಲಿ ತಪ್ಪೇನಿದೆ.


ಧ್ರುವನಾರಾಯಣ್

ಆದರೆ 2023ರ ಚುನಾವಣೆಯಲ್ಲಿ ಅದನ್ನೆಲ್ಲಾ ಮರೆತು ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಬಹಳ ಉತ್ಸುಕತೆಯಿಂದ ನಿಮ್ಮ ಅಭೂತ ಪೂರ್ವ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದರಿಂದಲೇ ನಿಮ್ಮ 19 ವರ್ಷಗಳ ರಾಜಕೀಯ ವನವಾಸ ಅಂತ್ಯಗೊಂಡದ್ದು, ಬರೋಬ್ಬರಿ 1,08,363 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿ ಶಾಸಕರಾಗಲು ಸಾಧ್ಯವಾಯಿತು ಎಂಬುದು ಅತಿಶಯೋಕ್ತಿಯಲ್ಲ. ಬದಲಿಗೆ ನೀವು ಬರುವುಕ್ಕೂ ಮೊದಲೇ ಅವರಿಗೆ ಜಯಣ್ಣ ಅವರೇ ನಾಯಕರು, ಆದರೆ ಅವರ ನಾಯಕರು ಇಂದು ಅವರ ಕಣ್ಣ ಮುಂದೆ ಇಲ್ಲ ಹಾಗಾಗಿ ಅವರಿಗೆಲ್ಲ ನೀವೇ ಪರ್ಯಾಯ ನಾಯಕರು ನೀವು ಅವರ ಮೇಲೆ ದ್ವೇಷ ಕಾರಬಾರದು. ಏಕೆಂದರೆ ಅವರು ತಮ್ಮ ನಾಯಕರಿಲ್ಲ ಎಂದು ಪಕ್ಷ ತೊರೆದಿಲ್ಲ ಅಥವಾ ಇನ್ನೊಬ್ಬ ಪರ್ಯಾಯ ನಾಯಕರನ್ನು ಹುಡುಕಿಕೊಂಡು ಹೋಗಿಲ್ಲ, ಅವರೆಲ್ಲಾ ನಿಮನ್ನೆ ಹಿಂಬಾಲಿಸಿಕೊಂಡು ಬಂದಿದ್ದಾರೆ ಎಂದರೆ ನೀವು ಅವರಿಗೆ ವಿಶ್ವಾಸ ತೋರಬೇಕು, ಅವರಿಗೆ ಧೈರ್ಯ ತುಂಬಬೇಕು, ಪಕ್ಷ ಸಂಘಟನೆಗೆ ಅವರನ್ನು ಬಳಸಿಕೊಂಡು ನೀವು ಬೆಳೆದು ಅವರನ್ನು ಬೆಳೆಸಬೇಕು. ಈ ನಿಟ್ಟಿನಲ್ಲಿ ಅರ್ಥ ಮಾಡಿಕೊಂಡು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿ. ಈ ಜಿಲ್ಲೆ ಹಾಗೂ ರಾಜ್ಯದಲ್ಲಿ ನಿಮಗರಿವಿಲ್ಲದಂತೆ ಬಹಳ ಎತ್ತರಕ್ಕೆ ಬೆಳೆಯುತ್ತೀರಿ. ನೀವು ಸಚಿವರಾಗಬೇಕಾದವರು, ರಾಜಕೀಯವಾಗಿ ಉನ್ನತ ಸ್ಥಾನಕ್ಕೆ ಏರ ಬೇಕಾಗಿರುವವರು, ಇದರಿಂದ ಮುಂದೆ ಭಾರಿ ಸಂಕಷ್ಟ ಎದುರಿಸಬೇಕಾಗುತ್ತದೆ. ಒಂದು ಕಡೆ ಓಲೈಸಿದರೆ ಮತ್ತೊಂದು ಕಡೆ ಓಟು ಕಿತ್ತು ಹೋಗುತ್ತದೆ.


ಎಸ್. ಜಯಣ್ಣ

ಇಲ್ಲಿ ಅವರ ಬಗ್ಗೆ ಬೇಸರ ಮಾಡಿಕೊಳ್ಳುವಂತದ್ದು ಏನು ಇಲ್ಲ. ಏಕೆಂದರೆ ಸದ್ಯಕ್ಕೆ ಈ ಜಿಲ್ಲೆಯಲ್ಲಿ ಪ್ರಮುಖರು, ಹಿರಿಯರು, ಪ್ರಬಲ ನಾಯಕರೆಂದು ಇರುವವರು ನೀವೊಬ್ಬರೇ, ನಿಮ್ಮ ಈ ನಡೆಯಿಂದ ಕಾರ್ಯಕರ್ತರು ಹತಾಶರಾಗಿದ್ದಾರೆ. ಜಿಲ್ಲೆಯ ರಾಜಕಾರಣ ಎತ್ತ ಸಾಗುತ್ತಿದೆ ಎಂಬ ಆತಂಕಕ್ಕೊಳಗಾಗಿದ್ದಾರೆ. ಇದನ್ನು ಎಚ್ಚರಿಕೆಯಾಗಿ ಇಟ್ಟುಕೊಂಡು ರಾಜಕಾರಣ ಮಾಡಿಕೊಂಡು ಹೋಗುವುದು ತುಂಬಾ ಸೂಕ್ತ. ಏಕೆಂದರೆ ಸಾಕಷ್ಟು ಕಡೆ ನಿಮ್ಮನ್ನು ನಾವು ನೋಡುತ್ತಿದ್ದೇವೆ. ಯಾವುದೇ ಸಭೆ ಸಮಾರಂಭಗಳಿರಬಹುದು, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮಗಳಿರಬಹುದು ಕೆಲವೇ ಕೆಲವು ಮುಖಂಡರು ಮಾತ್ರ ಕಾಣಿಸಿಕೊಳ್ಳುತ್ತಿದ್ದಾರೆ ಪ್ರಮುಖವಾದ ಮುಂಚೂಣಿ ನಾಯಕರು (ಮತ ಹಾಕಿಸುವ) ಇಲ್ಲ. ನೀವು ಅತ್ಯಂತ ಕಿರಿಯರನ್ನು ಕಟ್ಟಿಕೊಂಡು ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದೀರಿ. ಒಂದು ಸ್ವಲ್ಪ ವ್ಯತ್ಯಾಸವಾದರೂ ಕಷ್ಟವೇ. ಇದು ಒಳ್ಳೆಯ ಬೆಳವಣಿಗೆಯಲ್ಲ, ಮುಂದೆ ಪಕ್ಷ ಸಂಘಟನೆಗೆ ಹಿನ್ನೆಡೆಯಾಗಬಹುದು, ಪ್ರಮುಖವಾಗಿ ಇವರುಗಳಿಂದ ನಿಮಗೆ ಯಾವುದೇ ಓಟುಗಳು ಬರುವುದಿಲ್ಲ, ಓಟು ಹಾಕಿಸುವವರೆ ಬೇರೆ ಇದ್ದಾರೆ. ದಯವಿಟ್ಟು ಅರ್ಹ ಮುಖಂಡರು ಹಾಗೂ ಕಾರ್ಯಕರ್ತರುಗಳಿಗೆ ಆದ್ಯತೆ ನೀಡಿ ಅಸಮರ್ಥರನ್ನು ಹತ್ತಿರಕ್ಕೆ ಬಿಟ್ಟುಕೊಂಡು ಸಮರ್ಥ ಮುಖಂಡರನ್ನು ದೂರ ಇಟ್ಟಿರೋದು ನಿಜಕ್ಕೂ ಒಳ್ಳೆಯ ಬೆಳವಣಿಗೆಯಲ್ಲ.

ಹೆಚ್.ಎಸ್. ಮಹದೇವ ಪ್ರಸಾದ್ ಆರ್. ಧೃವನಾರಾಯಣ್, ಎಸ್. ಜಯಣ್ಣರವರು ಇದ್ದರೆ ನಿಮಗೆ ಈ ಸಲಹೆ ನೀಡುತ್ತಿರಲಿಲ್ಲ. ಸದ್ಯಕ್ಕೆ ಜಿಲ್ಲೆಯಲ್ಲಿ ನೀವೊಬ್ಬರೇ ಈ (ದಲಿತ) ಜನಾಂಗದ ನಾಯಕರು ಎಂಬ ಹೆಸರು ತೆಗೆದುಕೊಳ್ಳುತ್ತಿರುವುದು. ದಯವಿಟ್ಟು ನೀವು ಇದನ್ನು ಯೋಚನೆ ಮಾಡಿಕೊಂಡು ಅಡಿಯಿಡಿ. ಇದನ್ನು ನಿರ್ಲಕ್ಷ್ಯ ಮಾಡಬೇಡಿ, ಇದರ ಬಗ್ಗೆ ತುಂಬಾ ಎಚ್ಚರಿಕೆ ವಹಿಸಬೇಕಾಗಿದೆ. ಇರುವಂತಹ ಅವಕಾಶವನ್ನು ಬಳಸಿಕೊಳ್ಳಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ ನಿಮ್ಮನ್ನು ಬಿಟ್ಟರೆ ಪರ್ಯಾಯ ನಾಯಕರಿಲ್ಲ ಅವರಿಗೂ ಅವರ ನಾಯಕರಿದ್ದರೆ ಅವರೇಕೆ ನಿಮ್ಮನ್ನು ಅವಲಂಬಿಸುತ್ತಿದ್ದರು?. ಹಾಗಾಗಿ ಅವರು ಸಹ ಅಂತಹದ್ದೇನು ತಪ್ಪು ಮಾಡಿಲ್ಲ ಅವರು ನಿಮ್ಮ ಪಕ್ಷದವರೇ ತಾನೆ?, ನಿಮ್ಮ ಪರವೇ ತಾನೆ? ಯಾರ ಬಳಿ ಹೋಗುತ್ತಾರೆ ಅವರು? ಒಟ್ಟನಲ್ಲಿ ಅವರೆಲ್ಲರೂ ಕಾಂಗ್ರೆಸ್ ಕಟ್ಟಾಳುಗಳೇ...! ಅಂದು ಅವರ ನಾಯಕರು ಯಾರೇ ಇರಬಹುದು ಆದರೆ ಪಕ್ಷ ನಿಮ್ಮದೇ ತಾನೆ? ನಿಮ್ಮನ್ನೇ ತಾನೇ ಅವರು ಅನುಸರಿಸುವುದು? ಅನಿವಾರ್ಯವಾಗಿ ಅವರು ಅಂದು ಅವರ ಕರ್ತವ್ಯ ಮಾಡಿದ್ದಾರೆ. ಅವರೇನು ನಿಮ್ಮನ್ನು ದ್ವೇಷ ಮಾಡುವಂತಹದ್ದೇನೂ ಇಲ್ಲ.


ಇದು ಹೀಗೆ ಮುಂದುವರೆದರೆ ಕಳೆದ 2018 ರ ಚುನಾವಣೆಯಲ್ಲಿ ಎದುರಿಸಿದ್ದ ವಿರೋಧವನ್ನೆ ಎದುರಿಸುವ ಸಂದರ್ಭ ಎದುರಾಗಲಿದೆ ಕಳೆದ ಚುನಾವಣೆಯಲ್ಲಿ ನಿಮ್ಮದೇ ಪಕ್ಷದವರು ನಿಮ್ಮನ್ನು ವಿರೋಧ ಮಾಡಿದರು ಎಂಬ ಕಾರಣ ಇಟ್ಟುಕೊಂಡಿದ್ದೀರಿ ಅಂದು ಅವರು ನಿಮ್ಮನ್ನು ವಿರೋಧ ಮಾಡಲು ಕಾರಣವಿತ್ತು. ಹಾಗೂ ಅಂತಹದ್ದೊಂದು ವಿರೋಧ ಅನಿವಾರ್ಯವಿತ್ತು. ಹೌದು ಅವರ ನಾಯಕರಿಗೆ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಅಂದು ಅವರು ಹಾಗೆ ನಡೆದುಕೊಂಡರು. ಆದರೆ ಅಂದು ನಿಮ್ಮನ್ನು ವಿರೋಧಿಸಿದ್ದವರೆ 2023ರ ಚುನಾವಣೆಯಲ್ಲಿ ಬಹಳ ನಿಷ್ಠೆಯಿಂದ ಶ್ರಮಪಟ್ಟು ದುಡಿದು ಯಾವುದೇ ಕಾರಣಕ್ಕೂ ಒಂದು ಓಟು ಸಹ ದಿಕ್ಕು ತಪ್ಪದಂತೆ ಎಚ್ಚರಿಕೆ ವಹಿಸಿ ಕೆಲಸ ಮಾಡಿದ್ದಾರೆ. ಇದರಿಂದಾಗಿ ಇಡೀ ರಾಜ್ಯದಲ್ಲಿ ನೀವು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲುವ ಹಾಗೆ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಎಲ್ಲಾ ಕಾರ್ಯಕರ್ತರು ಆ ಬಣ, ಈ ಬಣ, ಎಂಬ ತಾರತಮ್ಯವಿಲ್ಲದೆ ಎಲ್ಲರೂ ಒಟ್ಟಾಗಿ ಸೇರಿ ನಿಮ್ಮ ಪ್ರಚಂಡ ಗೆಲುವಿಗೆ ದುಡಿದಿದ್ದಾರೆ. ಅವರ ಶ್ರಮವನ್ನು ಮನದಲ್ಲಿಟ್ಟುಕೊಂಡು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕಾಗಿದೆ

ಶಾಸಕರೇ ನೀವು 2018 ರಲ್ಲಿ ಕೊಳ್ಳೇಗಾಲ ಕ್ಷೇತ್ರಕ್ಕೆ ಬಂದಾಗ ನಿಮ್ಮ ಸ್ವಂತ ಓಟು ಎಂಬುದು ಇಲ್ಲಿ ಇರಲಿಲ್ಲ ಎಂದು ತಿಳಿದುಕೊಳ್ಳಿ ಇಲ್ಲಿ ಎಲ್ಲವೂ ಜಯಣ್ಣರವರೆ ಎಂದು ಭಾವಿಸಿ. ನಿಮ್ಮನ್ನು ಜನ ಮತ್ತೆ ಆಶೀರ್ವದಿಸಿದ್ದಾರೆ ಎಂದರೆ ಅದು ಇಲ್ಲಿನ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರ, ಮುಖಂಡರ ಪ್ರಾಮಾಣಿಕ ಶ್ರಮ.

ನಿಮಗೆ ಬೇಕಾಗಿರುವುದು ಕೇವಲ ಅಧಿ ಕಾರಕ್ಕೆ, ಪ್ರಚಾರಕ್ಕೆ ಬರುವ ಕಾಟಚಾರದ ಕಾರ್ಯಕರ್ತರಲ್ಲ. ಜನರ ಮನಸ್ಸಿಗೆ ಹತ್ತಿರವಾಗಿರುವ, ಅವರ ನಾಡಿಮಿಡಿತ ಅರಿತು ಕಷ್ಟ ಸುಖಗಳಿಗೆ ಭಾಗಿಯಾಗುವ ಮುಖಂಡರು, ಕಾರ್ಯಕರ್ತರು ಬೇಕು ಪಕ್ಷ ಹಾಗೂ ನಾಯಕತ್ವಕ್ಕೆ ನಿಷ್ಠೆ ತೋರುವಂತಹ ಸ್ಥಳೀಯ ಮುಖಂಡರು, ಕಾರ್ಯಕರ್ತರು ಬೇಕು. ಅಂತಹ ವ್ಯಕ್ತಿತ್ವ ಇರುವ ಮುಖಂಡರು ಆ ಜನರ ನಡುವೆ ಕಾಣಿಸಿಕೊಂಡಾಗ ಅಲ್ಲಿನ ಜನರಿಗೂ ಖುಷಿ ಪಕ್ಷಕ್ಕೂ ಬಲ.

ದೇಶ ಕಟ್ಟಲು ಸೈನಿಕರು ಬೇಕು, ಅದೇ ರೀತಿ ಪಕ್ಷಕಟ್ಟಿ, ಅಧಿಕಾರ ಹಿಡಿಯಲು ರಾಜಕೀಯ ಪಕ್ಷಗಳಿಗೆ ಕಾರ್ಯಕರ್ತರು ಬೇಕೇ ಬೇಕು ಹಾಗೆಯೇ ಪ್ರತಿ ಕಾರ್ಯಕರ್ತನ ಮನಸ್ಸಿನಲ್ಲು ತನ್ನ ನಾಯಕನನ್ನು ಎತ್ತರಕ್ಕೆ ಬೆಳೆಸಿ ಅವನ ನೆರಳಿನಲ್ಲಿ ನಾನು ಬೆಳೆಯಬೇಕು ಎಂಬ ಆಸೆ ಇದ್ದೆ ಇರುತ್ತದೆ. ಯಾವುದೇ ನಾಯಕ ಶಾಸಕ, ಸಂಸದನಿಂದಿಡಿದು ಮಂತ್ರಿ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಆಗುವುದರ ಹಿಂದೆ ಒಬ್ಬ ಕಾರ್ಯಕರ್ತ, ಮುಖಂಡನ ಅವಿರತ ಶ್ರಮವಿದೆ. ಅವನಿಲ್ಲದಿದ್ದರೆ ಯಾವೊಬ್ಬ ನಾಯಕನೂ ಸಹ ಯಶಸ್ವಿಯಾಗಲಾರ ಯಾರು ಎಷ್ಟೇ ಎತ್ತರಕ್ಕೆ ಬೆಳೆದರು ಅವರ ಬೆಳವಣಿಗೆಯ ಹಿಂದೆ ನಿಷ್ಠಾವಂತ ಮುಖಂಡ, ಕಾರ್ಯಕರ್ತನ ದುಡಿಮೆ ಇರಲೇ ಬೇಕು. ಪಕ್ಷ ಹಾಗೂ ಸೈನ್ಯ ಕಟ್ಟಲು ಎಷ್ಟೇ ಕಾರ್ಯಕರ್ತರಿದ್ದರೂ ಸಾಲುವುದಿಲ್ಲ ಎಂಬುದು ನಿಮಗೂ ಗೊತ್ತು... ಅಲ್ಲವೇ...

ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಿಮ್ಮಿಂದ ಆಗಬೇಕಿದೆ, ಇದುವರೆಗೆ ನೀವು ಮಾಡಿರುವ ಕೆಲಸ ಏನೇನು ಅಲ್ಲ. ಹಾಗೆಯೇ ನಿಮ್ಮನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿ ಕ್ಷೇತ್ರದ ಮತದಾರರು ಇಂದು ಏನನ್ನು ನಿರೀಕ್ಷಿಸುತ್ತಿದ್ದಾರೆ, ಅವರಿಂದ ನಿಮಗೆ ಗೆಲುವು ತಂದುಕೊಟ್ಟ ನಿಷ್ಠಾವಂತ ಮುಖಂಡರು, ಕಾರ್ಯಕರ್ತರ ಪರಿಸ್ಥಿತಿ ಏನಾಗಿದೆ, ಮತ್ತೊಮ್ಮೆ ನಿಮ್ಮನ್ನು ಅವರು ಜನರ ಬಳಿಗೆ ಕರೆದು ಕೊಂಡು ಹೋಗಬೇಕಾದರೆ ಅವರಿಗೆ ನೀವು ಏನು ಮಾಡಬೇಕು ಎಂಬುದು ಮನಸ್ಸಿನಲ್ಲಿರಲಿ...


ಎನ್. ಮಹೇಶ್

## ಎನ್. ಮಹೇಶ್‌ರವರ ಹಾದಿಯಲ್ಲಿ ನೀವು ನಡೆದರೆ ಶಾಸಕರೆ?

ಮಾಜಿ ಶಾಸಕ ಎನ್.ಮಹೇಶ್ ರವರು ತಮ್ಮ ಗೆಲುವಿಗೆ ದುಡಿದ, 20 ವರ್ಷ ಕಷ್ಟ-ಸುಖ ದುಃಖ ದುಮ್ಮಾನಗಳಲ್ಲಿ ಭಾಗಿಯಾಗಿದ್ದ ಯಾವುದೇ ಒಬ್ಬನೇ ಒಬ್ಬ ನಿಷ್ಠಾವಂತ ಕಾರ್ಯಕರ್ತನನ್ನು ತಮ್ಮ ಅಧಿ ಕಾರದ ಅವಧಿಯಲ್ಲಿ ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಅವರ ಗೆಲುವಿಗೆ ತನು ಮನ ಧನ ಅರ್ಪಿಸಿಕೊಂಡು ದುಡಿದ ಕಾರ್ಯಕರ್ತರು, ಮುಖಂಡರೆಲ್ಲಾ ಇಂದು ನೆಲೆಯಿಲ್ಲದೇ ದಿಕ್ಕೆಟ್ಟು ನಿಂತಿದ್ದಾರೆ. ಅಂದು ತಾವು ನಂಬಿ ಹತ್ತಿರಕ್ಕೆ ಬಿಟ್ಟುಕೊಂಡಿದ್ದ ಕಾರ್ಯಕರ್ತರು, ಮುಖಂಡರು ಇಂದು ಜೊತೆಗಿಲ್ಲ. ಅದರ ಫಲ ಇಂದು ತಮ್ಮ ರಾಜಕೀಯ ನೆಲೆ ಅಸ್ಥಿರ ಗೊಳಿಸಿಕೊಂಡು ಸ್ವಕ್ಷೇತ್ರದಲ್ಲಿ ಮುಕ್ತವಾಗಿ ಕಾಣಿಸಿಕೊಳ್ಳಲಾಗದೆ ಪಕ್ಷದ ಸಂಘಟನೆ ನೆಪದಲ್ಲಿ ರಾಜ್ಯದ ಮೂಲೆ ಮೂಲೆ ಅಲೆಯುತ್ತಿದ್ದಾರೆ. ಅದಕ್ಕೆ ಕಾರಣ ಅವರು ಇದೇ ರೀತಿ ನಿಷ್ಠಾವಂತ ಕಾರ್ಯಕರ್ತರು, ಮುಖಂಡರನ್ನು ದೂರ ಇಟ್ಟಿದ್ದು. ಎನ್ ಮಹೇಶ್ ಗೆ ರಾಜಕೀಯ ನೆಲೆ ಕಲ್ಪಿಸಿದವರು ಕೊಳ್ಳೇಗಾಲ ಕ್ಷೇತ್ರದ ಜನತೆ. ಆದರೆ ಒಂದೇ ಸೋಲಿಗೆ ತನಗೆ ಶಕ್ತಿ ನೀಡಿದ ಕ್ಷೇತ್ರದ ಜನರನ್ನು ಮರೆತು ಇನ್ನಾರನ್ನೋ ಉದ್ಧಾರ ಮಾಡುತ್ತೇನೆ ಎಂದು ಹೊರಟಿರುವುದು ವಿಪರ್ಯಾಸವೇ ಸರಿ.. ಈ ಹಿಂದೆ ಅವರೇ ಹೇಳುತ್ತಿದ್ದ ಒಂದು ಗಾದೆಮಾತು ನೆನಪಿಗೆ ಬರುತ್ತಿದೆ. ದುಡಿದು ದನಿದು ಬಂದಿರುವ ಹಟ್ಟಿ ಹಸ ಹಲ್ಲು ಕಡಿಯುತ್ತಿದ್ದರೂ... ಪರ್ವತ್ ಬಸವನಿಗೆ ಹುಲ್ಲು ಹಾಕಿದರಂತೆ ಎಂಬಂತೆ ರಾಜಕೀಯ ಜನ್ಮ ನೀಡಿದ ಕ್ಷೇತ್ರದ ಜನರನ್ನು ಬಿಟ್ಟು ರಾಜ್ಯ ಸುತ್ತುತ್ತಿದ್ದಾರೆ. ನಾವು ಎಲ್ಲಿ ಕಳೆದು ಕೊಂಡಿದ್ದೇವೆಯೋ ಅಲ್ಲೆ ಹುಡುಕ ಬೇಕು, ಅದನ್ನು ಬಿಟ್ಟು ಇಲ್ಲಿ ಕಳೆದು ಕೊಂಡು ಅದೆಲ್ಲೋ ಹೋಗಿ ಹುಡುಕಿದರೆ ಸಿಗುತ್ತದೆಯೇ...



# ದಾಖಲೆ ತಿರುಚಿ 20 ಎಕರೆ ಭೂಮಿ ಕಬಳಿಸಿದರೆ ಸಚಿವ ಕೃಷ್ಣ ಬೈರೇಗೌಡ?!

ಕೆರೆ ಮತ್ತು ಸ್ಮಶಾನಕ್ಕೆ ಸೇರಿದ ಒಟ್ಟು 21ಎಕರೆ 16 ಗುಂಟೆ ಜಮೀನಿನ ದಾಖಲೆಗಳನ್ನು ತಿದ್ದಿ, ಖರಾಬು ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆ! 2001- 02ರಲ್ಲಿ ಈ ಕೃತ್ಯ ನಡೆದಿದ್ದು, ಕೃಷ್ಣಬೈರೇಗೌಡ ಮತ್ತು ಅವರ ಕುಟುಂಬದ ಹೆಸರಿಗೆ ಆಸ್ತಿ ಬರೆಸಲಾಗಿದೆ! ಕೋಲಾರ ಜಿಲ್ಲೆ ನರಸಾಪುರ ಹೋಬಳಿಯ ಗರುಡನಪಾಳ್ಯ ಗ್ರಾಮದಲ್ಲಿ ಕೆರೆ ಮತ್ತು ಸ್ಮಶಾನ ಭೂಮಿಯ ದಾಖಲೆಗಳನ್ನು ತಿರುಚಿ 20 ಎಕರೆಗೂ ಹೆಚ್ಚು ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡು ಅಕ್ರಮ ಎಸಗಿರೋ ಕಂದಾಯ ಸಚಿವ ಕೃಷ್ಣ ಭೈರೇಗೌಡ ಕೂಡಲೇ ರಾಜೀನಾಮೆ ಕೊಡಬೇಕೆಂದು ಬಿಜೆಪಿ ಅಗ್ರಹಿಸಿದೆ! ಈ ಅಕ್ರಮದ ವಿರುದ್ಧ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಬ್ಯಾಟರಾಯನಪುರ ವೃತ್ತದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಪೋಲಿಸರು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಕಾರರನ್ನು ಬಂಧಿಸಿ ಸಂಪಿಗೆಹಳ್ಳಿ ಸಹಾಯಕ ಪೊಲೀಸ್ ಠಾಣೆಯ ಮೈದಾನಕ್ಕೆ ಕರೆದೊಯ್ದು, ನಂತರ ಬಿಡುಗಡೆ ಮಾಡಲಾಯಿತು.



ಕಾಂಗ್ರೆಸ್‌ನಿಂದ ತಮ್ಮನ್ನು ತಾವು ಶುದ್ಧ ಮತ್ತು ಭ್ರಷ್ಟರಲ್ಲದ ರಾಜಕಾರಣಿ ಎಂದು ಕೃಷ್ಣ ಬೈರೇಗೌಡ ಅವರು ಬಿಂಬಿಸಿಕೊಳ್ಳುತ್ತಿದ್ದಾರೆ. ಆದರೆ, ಅವರ ಭೂಕಬಳಿಕೆ ಅಕ್ರಮ ಮುಡಾ ಹಗರಣಕ್ಕಿಂತ ದೊಡ್ಡ ಭ್ರಷ್ಟಾಚಾರವಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಏತನ್ಮಧ್ಯೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪರಿಷತ್‌ನ ಮುಖ್ಯ ಸಚೇತಕ ಎನ್. ರವಿಕುಮಾರ್ ಮತ್ತು ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶಗೌಡ ಅವರು ಬುಧವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿ ಪೂರಕ ದಾಖಲೆ ಬಿಡುಗಡೆ ಮಾಡಿದ್ದಾರೆ. ಈ ವೇಳೆ ಮಾತನಾಡಿದ ಛಲವಾದಿ ನಾರಾಯಣಸ್ವಾಮಿ ಅವರು, ನರಸಾಪುರ ಹೋಬಳಿ ಗರುಡನಪಾಳ್ಯ ಗ್ರಾಮದ 20 ಎಕರೆ 16 ಗುಂಟೆ (ಸರ್ವೇ ಸಂಖ್ಯೆ 46) ಜಮೀನು ಮೂಲ ದಾಖಲೆಯಲ್ಲಿ ಕೆರೆ ಎಂದು ನಮೂದಾಗಿದೆ. ಅದೇ ರೀತಿ ಸರ್ವೇ ಸಂಖ್ಯೆ 47 ರಲ್ಲಿ ಒಂದು ಎಕರೆ ಜಮೀನು ಮೂಲ ದಾಖಲೆಯ ಪ್ರಕಾರ ಸ್ಮಶಾನ ಎಂದು ನಮೂದಾಗಿದೆ.

ಆದರೆ, ಕೆರೆ ಮತ್ತು ಸ್ಮಶಾನಕ್ಕೆ ಸೇರಿದ ಒಟ್ಟು 21ಎಕರೆ 16 ಗುಂಟೆ ಜಮೀನಿನ ದಾಖಲೆಗಳನ್ನು ತಿದ್ದಿ, ಖರಾಬು ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆ. 2001-02 ರಲ್ಲಿ ಈ ಕೃತ್ಯ ನಡೆದಿದೆ. ಕೃಷ್ಣಬೈರೇಗೌಡ ಮತ್ತು ಅವರ ಕುಟುಂಬದ ಹೆಸರಿಗೆ ಬರೆಸಲಾಗಿದೆ. ಈಗಲೂ ಕೃಷ್ಣಬೈರೇಗೌಡ ಅವರ ಕುಟುಂಬದ ಹೆಸರಿನಲ್ಲಿಯೇ ಇದೆ. ಕಂದಾಯ ಕಾನೂನಿನ ಪ್ರಕಾರ, ಸರ್ಕಾರಿ ಜಮೀನು ಅದರಲ್ಲೂ ಕರೆ, ಸ್ಮಶಾನದ ಜಮೀನುಗಳನ್ನು ಯಾವುದೇ ವ್ಯಕ್ತಿಯ ಹೆಸರಿಗೆ ದಾಖಲೆ ಮಾಡಲು ಸಾಧ್ಯವಿಲ್ಲ.

ಈ ಜಮೀನಿನ ಮಾರುಕಟ್ಟೆ ಮೌಲ್ಯ ರೂ.100 ಕೋಟಿ ಮೀರುತ್ತದೆ. 1978ರ ಮೂಲ ದಾಖಲೆಗಳಲ್ಲಿ ಕೆರೆ, ಸ್ಮಶಾನ ಎಂದೇ ಇದೆ. ಕೆರೆ ಮತ್ತು ಸ್ಮಶಾನ ಜಮೀನು ದಾಖಲೆಗಳನ್ನು ಬದಲಾವಣೆ ಮಾಡಲು ಯಾವ ಅಧಿಕಾರಿಗೂ ಅಧಿಕಾರವಿಲ್ಲ. ಸಚಿವರು ಅಧಿಕಾರ ದುರ್ಬಳಕೆ ಮಾಡುವ ಮೂಲಕ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ.



ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಮಾತನಾಡಿ, ತಾವು ಪ್ರಾಮಾಣಿಕರು, ಶುದ್ಧಹಸ್ತರೆಂದು ಕೃಷ್ಣಬೈರೇಗೌಡ ಬಿಂಬಿಸಿಕೊಳ್ಳುತ್ತಾರೆ. ದಾಖಲೆಗಳನ್ನು ತಿದ್ದಿ ಸರ್ಕಾರಿ ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುವುದು ಅಕ್ಷಮ್ಯ ಅಪರಾಧ. ಇದು 'ಬೇಲಿಯೇ ಎದ್ದು ಹೊಲ ಮೇಯ್ದ' ಪ್ರಕರಣ! ಮುಖ್ಯಮಂತ್ರಿಗಳು ಈ ಭೂಹಗರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು. ಒಂದು ವೇಳೆ ಸರ್ಕಾರ ಈ ಕುರಿತು ಮೃದು ಧೋರಣೆ ತಾಳಿದರೆ ಕಾನೂನು ಹೋರಾಟದ ಜತೆಗೆ ಪ್ರಜಾಸತ್ತಾತ್ಮಕ ಹೋರಾಟ ನಡೆಸುತ್ತೇವೆಂದು ಎಚ್ಚರಿಸಿದ್ದಾರೆ.

'ಈ ಹಿಂದೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದಲ್ಲಿ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ಪತ್ನಿ 14 ನಿವೇಶನಗಳನ್ನು ವಾಪಸ್ ಮಾಡಿದ್ದರು. ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ 5 ಎಕರೆ ಜಮೀನನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಕುಟುಂಬದ ಒಡೆತನದ ಟ್ರಸ್ಟ್‌ಗೆ ಮಂಜೂರು ಮಾಡಿಸಿಕೊಂಡಿದ್ದರು. ಬಳಿಕ ಅದನ್ನು ಹಿಂತಿರುಗಿಸಿದರು. ಇದೀಗ ಮತ್ತೊಂದು ಹಗರಣ ಬಯಲಿಗೆ ಬಂದಿದೆ' ಎಂದು ಹೇಳಿದ್ದಾರೆ. ಇದು ನಿಜವೇ? ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಜಾರಿಯಲ್ಲಿದೆ. ಇನ್ನು ತನಿಖೆ ಮಾಡಿ ವರದಿ ನೀಡುವವರು ಯಾರು?!






## ನಮಗೆ ಬಂದಿರುವುದು ಪಿತ್ರಾರ್ಜಿತ ಆಸ್ತಿ -ಕೃಷ್ಣ ಬೈರೇಗೌಡ

ಆರೋಪ ಮಾಡಬೇಕು ಎಂಬ ಕಾರಣಕ್ಕೆ ಯಾವುದೇ ವಿಚಾರ ಇಲ್ಲದಿದ್ದರೂ ಹುಡುಕಿ ಆರೋಪ ಮಾಡಲಾಗುತ್ತಿದೆ. ಗರುಡನಪಾಳ್ಯದ ಭೂಮಿ ನನ್ನ ತಾತ ಅವರಿಂದ ಬಂದ ಪಿತ್ರಾರ್ಜಿತ ಆಸ್ತಿ. ನಮ್ಮ ತಾತನವರಿಂದ ನಮಗೆ ಆಸ್ತಿ ಬಂದಿದೆ. ಇಲ್ಲದಿರುವುದು ಹುಡುಕಿ ಆರೋಪ ಮಾಡುವುದು ಅವರ ಸಂಸ್ಕೃತಿ ಎಂದು ಭೂ ಕಬಳಿಕೆ ಆರೋಪ ಮಾಡುತ್ತಿರುವ ಬಿಜೆಪಿ ವಿರುದ್ಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕಿಡಿಕಾರಿದ್ದಾರೆ.

ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿರುವ ಅವರು, ಆರೋಪ ಮಾಡಬೇಕು ಎಂಬ ಕಾರಣಕ್ಕೆ ಯಾವುದೇ ವಿಚಾರ ಇಲ್ಲದಿದ್ದರೂ ಹುಡುಕಿ ಆರೋಪ ಮಾಡಲಾಗುತ್ತಿದೆ. ಗರುಡನಪಾಳ್ಯದ ಭೂಮಿ ನನ್ನ ತಾತ ಅವರಿಂದ ಬಂದ ಪಿತ್ರಾರ್ಜಿತ ಆಸ್ತಿ. ನಮ್ಮ ತಂದೆಯ ಮೂಲಕ ಭಾಗವಾಗಿ ನಮಗೆ ಬಂದಿದೆ. ಅದನ್ನು ಯಾವ ಮೂಲದಿಂದಲಾದರೂ ಪರಿಶೀಲಿಸಿಕೊಳ್ಳಲಿ. ಯಾವ ಕಾಲದಲ್ಲಿ ಏನೇನಾಗಿದೆ ಎಂಬುದನ್ನು ಪರೀಕ್ಷಿಸಲಿ ಎಂದು ಹೇಳಿದರು.

'ನಾನು ಸರ್ಕಾರದಲ್ಲಿ ಸಚಿವನಾಗಿದ್ದೇನೆ. ಇಲಾಖಾ ಅಥವಾ ಸರ್ಕಾರದ ತನಿಖೆ ನಡೆದರೆ ಪಕ್ಷಪಾತವಾಗುತ್ತದೆ ಎಂದಾದರೆ ಯಾವುದಾದರೂ ಸ್ವತಂತ್ರ ಸಂಸ್ಥೆ ಮೂಲಕ ತನಿಖೆ ನಡೆಸಲಿ. ಲೋಕಾಯುಕ್ತಕ್ಕೆ ನ್ಯಾಯಾಲಯಕ್ಕೆ ದೂರು ನೀಡಿ ತನಿಖೆ ಮಾಡಿಸಲಿ. ಈ ವಿಚಾರದಲ್ಲಿ ನನ್ನ ತಪ್ಪಿದೆ ಎಂದು ಸಾಬೀತಾದರೆ ನಾನು ತಲೆಬಾಗುತ್ತೇನೆ. ಪಿತ್ರಾರ್ಜಿತ ಆಸ್ತಿ ವಿಚಾರದಲ್ಲಿ ಕೆಸರೆರಚಾಟ ಮಾಡುವುದು ಸರಿಯಲ್ಲ. ಇಲ್ಲಸಲ್ಲದ ಆರೋಪ ಮಾಡುವುದನ್ನೇ ವೃತ್ತಿಯಾಗಿಸಿಕೊಂಡವರಷ್ಟೇ ಈ ರೀತಿ ಮಾಡುತ್ತಾರೆಂದು ತಿಳಿಸಿದರು. ಆದರೆ, ವಿಪಕ್ಷದವರು ಇದನ್ನು ಒಪ್ಪಲಿಲ್ಲ. ಒಟ್ಟಾರೆ, ಒಂದು ತನಿಖೆ ನಡೆದು ವರದಿ ಬರುವತನಕ ಕೃಷ್ಣ ಬೈರೇಗೌಡರಿಗೆ ಅಂಟಿರೋ ಕಳಂಕ ಹೋಗುವುದಿಲ್ಲ!

## ಕಾರವಾರ ಎಸ್ಪಿ ದೀಪನ್ ಎಂ.ಎನ್. ಅವರ ದಿಟ್ಟ ಕ್ರಮ

# ಮಹಾಭ್ರಷ್ಟ ಭಟ್ಕಳ ಗ್ರಾಮೀಣ ಸಿಪಿಐ ಮಂಜುನಾಥ ಲಿಂಗಾರೆಡ್ಡಿ ಮತ್ತು ಮುಖ್ಯಪೇದೆ ಅಶೋಕ ನಾಯ್ಕ್ ಸೇರಿದಂತೆ ಇಬ್ಬರು ಸಸ್ಪೆಂಡ್!

ಕರ್ತವ್ಯದಲ್ಲಿ ದಕ್ಷತೆ, ಪ್ರಾಮಾಣಿಕತೆ ಮೈಗೂಡಿಸಿಕೊಂಡು ಧಾಡಸಿತನ ಮತ್ತು ಚತುರತೆಯಿಂದ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬರುವುದಲ್ಲದೇ ಸಮಾಜಘಾತುಕರಿಗೆ ಭ್ರಷ್ಟರಿಗೆ ಕ್ರಿಮಿನಲ್‌ಗಳಿಗೆ ಸಿಂಹಸ್ವಪ್ನರಾಗಿ, ನೊಂದು ಬಂದವರಿಗೆ ಕಾನೂನಿನ ರಕ್ಷಣೆ ಒದಗಿಸುವುದು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿದೆ. ಆದರೆ ಇದಕ್ಕೆ ವ್ಯತಿರಿಕ್ತ ಎನ್ನುವಂತೆ ಕಾರವಾರ ಜಿಲ್ಲೆಯ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ಮಂಜುನಾಥ ಲಿಂಗಾರೆಡ್ಡಿ, ಮುಖ್ಯಪೇದೆ ಅಶೋಕ ನಾಯ್ಕ್ ಎಂಬಿಬ್ಬರು ಮಿತಿ ಮೀರಿದ ಭ್ರಷ್ಟಾಚಾರ, ಲಂಚಗುಳಿತನ, ಅಕ್ರಮ ದಂಧೆ, ಸಾರ್ವಜನಿಕರನ್ನು ಹಣಕ್ಕಾಗಿ ಹುರಿದು ಮುಕ್ಕಿ ದುರಾಚಾರದಿಂದ ಮೆರೆಯುತ್ತಿದ್ದರು. ಆದರೆ ಕಾರವಾರ ಜಿಲ್ಲೆಯ ಅತ್ಯಂತ ಖಡಕ್ ಎಸ್ಪಿ ದೀಪನ್ ಎಂ.ಎನ್. ಇಬ್ಬರು ಭ್ರಷ್ಟರ ಕುಂಡಲಿಗಳನ್ನು ಬಿಡಿಸಿ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ.


ಖಡಕ್ ಎಸ್ಪಿ ದೀಪನ್ ಎಂ.ಎನ್.

### ಮಹಾಭ್ರಷ್ಟ ಸಿಪಿಐ ಮಂಜುನಾಥ...

'ಹಣ ಗಳಿಸುವುದೇ ನನ್ನ ಉದ್ಯೋಗ' ಎಂಬ ಸ್ಲೋಗನ್‌ಗೆ ಅಂಟಿಕೊಂಡ ಈ ಮನುಷ್ಯ ಮಂಜುನಾಥ ಲಿಂಗಾರೆಡ್ಡಿ, ಸೇವೆಗೆ ಸೇರಿದಾಗಿನಿಂದ ಭ್ರಷ್ಟಾಚಾರ, ಲಂಚಗುಳಿತನ, ಸಮಾಜ ಘಾತುಕರೊಡನೆ ಕೈ ಜೋಡಿಸಿ ಅನೇಕ ಮುಗ್ಧ ಸಾರ್ವಜನಿಕರಿಗೆ ಇನ್ನಿಲ್ಲದ ತೊಂದರೆಗಳನ್ನು ಕೊಡುತ್ತಲೇ ಬೆಳೆದು ಬಂದ ಕಡುಭ್ರಷ್ಟ. ಗುಂಡು...

✍ ಮನ್ನಾಪೂರ

ತುಂಡು ಎಂದರೆ ಸಾಕು ಈತನಿಗೆ ಪಂಚ ಪ್ರಾಣ. ಕುಡಿದ ಮತ್ತಿನಲ್ಲೇ ವಾಹನ ಚಲಾಯಿಸುತ್ತ ಸಾರ್ವಜನಿಕರಿಗೆ ಸಿಕ್ಕಾಪಟ್ಟೆ ಆವಾಜ್ ಹಾಕುತ್ತ ಬಾಯಿಗೆ ಬಂದಂತೆ ಬೆದರಿಕಿಸುವ ಸಿಪಿಐ ಮಂಜುನಾಥ ಲಿಂಗಾರೆಡ್ಡಿ ಮೇಲೆ ಅನೇಕ ಗಂಭೀರವಾದ ಗುರುತರವಾದ ಆಪಾದನೆಗಳಿದ್ದರೂ ತನಗಿರುವ ಪ್ರಭಾವ ಬಳಸಿ ಬಚಾವ್ ಆಗಿದ್ದನೆಂದು ಹೇಳಲಾಗುತ್ತಿದೆ.

### ಭಟ್ಕಳ ಗ್ರಾಮೀಣ ಠಾಣೆಗೆ...

ಮಹಾಭ್ರಷ್ಟ ಅಧಿಕಾರಿ ಮಂಜುನಾಥ ಲಿಂಗಾರೆಡ್ಡಿ ಯಾವಾಗ ಕಾರವಾರ ಜಿಲ್ಲೆಯ ಬಂದರು ನಗರಿ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಗೆ ಸಿಪಿಐ ಎಂದು ಎಂಟ್ರಿ ಕೊಟ್ಟರೋ... ಅಲ್ಲಿಂದ ಇವರ ಪೊಗರು ಮತ್ತಷ್ಟು ಹೆಚ್ಚಾಯಿತು. ಭಟ್ಕಳ ನಗರ ಮತ್ತು ಗ್ರಾಮೀಣ ಪ್ರದೇಶದ ಬಹಳಷ್ಟು ಮುಸ್ಲಿಂ ಜನಾಂಗದವರು ದುಬಾಯಿ ಮತ್ತಿತರ ಗಲ್ಫ್ ರಾಷ್ಟ್ರಗಳ ಜತೆಗೆ ಉದ್ಯೋಗದ ದೃಷ್ಟಿಯಿಂದ ಸಂಪರ್ಕ ಹೊಂದಿದ್ದಾರೆ. ಇಲ್ಲಿನ ಜನರು ಆರ್ಥಿಕವಾಗಿ ಬಹಳಷ್ಟು ಸಬಲರು. ಹೀಗಾಗಿ ಸಿಪಿಐ ಮಂಜುನಾಥ ಲಿಂಗಾರೆಡ್ಡಿಯ ಭ್ರಷ್ಟಾಚಾರ ಮತ್ತು ಲಂಚಗುಳಿತನ ಮತ್ತಷ್ಟು ಹೆಚ್ಚಾಯಿತು. ಹೀಗಾಗಿ ಈತ ಅನೇಕ ಮುಗ್ಧ ಸಾರ್ವಜನಿಕರಿಗೆ ಬೆದರಿಕೆ ಹಾಗೂ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟ ಗಂಭೀರ ಆರೋಪಗಳು ಕೇಳಿ ಬರತೊಡಗಿದವು. ಭಟ್ಕಳ ಗ್ರಾಮೀಣ ಪರಿಸರದಲ್ಲಿ ಸಿಪಿಐ ಲಿಂಗಾರೆಡ್ಡಿಯ ಕೃಪಾಶೀರ್ವಾದಿಂದ ಸಾಕಷ್ಟು ಅಕ್ರಮ ದಂಧೆಗಳು ಎಗ್ಗಿಲ್ಲದೇ ನಡೆಯತೊಡಗಿದವು.

### ಮುಖ್ಯಪೇದೆ ಅಶೋಕ ನಾಯ್ಕ್ ಸಾಥ್...

ಭಟ್ಕಳ ಗ್ರಾಮೀಣ ಪರಿಸರದಲ್ಲಿ ಸಾಕಷ್ಟು ಸಮಾಜಘಾತುಕರು, ಕ್ರಿಮಿನಲ್‌ಗಳ ಸತತ ಸಂಪರ್ಕದಲ್ಲಿದ್ದ ಮುಖ್ಯಪೇದೆ ಅಶೋಕ್ ನಾಯ್ಕ್ ಎಂಬಾತ ಮಹಾಭ್ರಷ್ಟ ಸಿಪಿಐ ಮಂಜುನಾಥ ಲಿಂಗಾರೆಡ್ಡಿಯೊಂದಿಗೆ ಕೈ ಜೋಡಿಸಿ ಅಕ್ರಮಗಳಿಗೆ ಸಾಥ್ ನೀಡತೊಡಗಿದ್ದನು. ಹೀಗಾಗಿ ಸಿಪಿಐ ಮಂಜುನಾಥ ಲಿಂಗಾರೆಡ್ಡಿ ಮತ್ತಷ್ಟು ಬಲಿತುಗೊಂಡನು. ಭಟ್ಕಳ ಗ್ರಾಮೀಣ ಪರಿಸರದಲ್ಲಿ ಕ್ರಮವಾಗಿ ದನ ಸಾಗಾಟದಾರರೊಂದಿಗೆ ಕೈ ಜೋಡಿಸಿ ಹಣ ವಸೂಲಿಗೆ ಇಳಿದಿದ್ದ ದೂರುಗಳು ಸಾಕಷ್ಟಿದ್ದವು.


ಮಹಾಭ್ರಷ್ಟ ಸಿಪಿಐ ಮಂಜುನಾಥ

ದೃಢಪಟ್ಟ 'ಡ್ರಿಂಕ್ ಅಂಡ್ ಡ್ರೈವ್' ಸಿಪಿಐ ಮಂಜುನಾಥ ಲಿಂಗಾರೆಡ್ಡಿ ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿ ಹುದ್ದೆಯಲ್ಲಿದ್ದು, ಆದರೂ ಕೂಡಾ ಮೇಲಿಂದ ಮೇಲೆ ಕರ್ತವ್ಯದಲ್ಲಿ ಗುಂಡು ಹಾಕುತ್ತಿದ್ದ ದೂರುಗಳಿವೆ. ಕೆಲ ದಿನಗಳ ಹಿಂದಷ್ಟೇ ಕಂಠ ಪೂರ್ತಿ ಕುಡಿದು ವಾಹನವನ್ನು ಚಲಾಯಿಸುವಾಗ ಸಿಪಿಐ ವಿರುದ್ಧ 'ಡ್ರಿಂಕ್ ಅಂಡ್ ಡ್ರೈವ್' ಪ್ರಕರಣ ದಾಖಲಾಗಿತ್ತು. ಈ ಸಂಬಂಧ ನಡೆದ ಪ್ರಾಥಮಿಕ ತನಿಖೆಯಲ್ಲಿ ಗುಂಡು ಹಾಕಿದ್ದು ಮತ್ತು ವಾಹನ ಚಲಾಯಿಸಿದ್ದು ದೃಢಪಟ್ಟಿತ್ತು. 'ಡ್ರಿಂಕ್ ಅಂಡ್ ಡ್ರೈವ್' ಪ್ರಕರಣವನ್ನು ಜಿಲ್ಲಾ ಎಸ್ಪಿ ದೀಪನ್ ಎನ್.ಎಂ. ಗಂಭೀರವಾಗಿ ಪರಿಗಣಿಸಿದ್ದರು.


ಮಹಾಭ್ರಷ್ಟ ಮುಖ್ಯಪೇದೆ ಅಶೋಕ ನಾಯ್ಕ್

### ಹಣಕಾಸಿನ ಅಕ್ರಮ ಆರೋಪ...

ಸಿಪಿಐ ಮಂಜುನಾಥ ಲಿಂಗಾರೆಡ್ಡಿ ವಿರುದ್ಧ ಹಣಕಾಸಿನ ಅಕ್ರಮ ಆರೋಪಗಳ ದೂರುಗಳು ಬಹಳಷ್ಟಿವೆ. ಸಾರ್ವಜನಿಕರಿಂದ ವಸೂಲಿ ಮಾಡಿದ್ದ ದಂಡದ ಹಣವನ್ನು ಕೂಡಾ ತಮ್ಮ ಸ್ವಂತಕ್ಕೆ ಬಳಸಿಕೊಳ್ಳುವ ಪರಿಪಾಠವಿತ್ತು. 'ಡ್ರಿಂಕ್ ಅಂಡ್ ಡ್ರೈವ್' ಪ್ರಕರಣವೊಂದರಲ್ಲಿ ಸಾರ್ವಜನಿಕರಿಂದ ವಸೂಲಿ ಮಾಡಿದ್ದ 15 ಸಾವಿರ ರೂ. ದಂಡದ ಹಣವನ್ನು ನ್ಯಾಯಾಲಯಕ್ಕೆ ಪಾವತಿಸದೇ ಲಪಟಾಯಿಸಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. ಸಿಪಿಐ ಮಂಜುನಾಥನಿಗೆ ಹಲವಾರು ಬಾರಿ ಎಚ್ಚರಿಕೆ ನೀಡಿದ್ದರೂ ಕೂಡಾ ವರ್ತನೆ ತಿದ್ದಿಕೊಳ್ಳದ ಹಿನ್ನೆಲೆ ಜಿಲ್ಲಾ ಎಸ್ಪಿ ದೀಪನ್ ಎನ್.ಎಂ. ಅವರು ಸಿಪಿಐ ಮಂಜುನಾಥ ಲಿಂಗಾರೆಡ್ಡಿ ಮತ್ತು ಇವನೊಂದಿಗೆ ಸೇರಿಕೊಂಡು ತಾನು ಸಾಕಷ್ಟು ಭ್ರಷ್ಟಾಚಾರ ಮತ್ತು ಅಕ್ರಮ ಎಸಗಿದ ಮುಖ್ಯಪೇದೆ ಅಶೋಕ ನಾಯ್ಕ್‌ನನ್ನು ಕೂಡಾ ತಕ್ಷಣ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿದ್ದಾರೆ. ಈ ಘಟನೆ ಪೊಲೀಸ್ ಇಲಾಖೆಯೊಳಗೆ ಸಾಕಷ್ಟು ಸಂಚಲನ ಮೂಡಿಸಿದೆ.

### ಎಸ್ಪಿ ದೀಪನ್ ಖಡಕ್ ಎಚ್ಚರಿಕೆ...

ಕಾರವಾರ ಜಿಲ್ಲೆಯ ಎಸ್ಪಿ ದೀಪನ್ ಎಂ.ಎನ್. ಅವರು ಭ್ರಷ್ಟ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಚಳಿ ಮೂಡಿಸಿದ್ದಾರೆ. 'ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಲಂಚಗುಳಿತನ, ಕರ್ತವ್ಯ ಲೋಪಕ್ಕೆ ಅವಕಾಶವಿಲ್ಲ. ನ್ಯಾಯಾಲಯದ ಪ್ರಕ್ರಿಯೆಗಳಿಗೆ ಅಗೌರವ ತೋರುವುದು ಮತ್ತು ಸಾರ್ವಜನಿಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡುವುದು, ಅಕ್ರಮ ದಂಧೆಗಳಿಗೆ ಪ್ರೋತ್ಸಾಹ ನೀಡುವುದನ್ನು ಯಾವುದೇ ಕಾಲಕ್ಕೂ ಸಹಿಸುವುದಿಲ್ಲ. ತಪ್ಪು ಮಾಡಿದವರು ಎಷ್ಟೇ ದೊಡ್ಡ ಅಧಿಕಾರಿಗಳಾಗಲಿ ಕಠಿಣವಾದ ಕ್ರಮ ಅನಿವಾರ್ಯ' ಎಂದು ಎಸ್ಪಿ ಎಸ್ಪಿ ದೀಪನ್ ಎಂ.ಎನ್. ಈ ಮೂಲಕ ಇಡೀ ಕಾರವಾರ ಜಿಲ್ಲೆಯ ಪೊಲೀಸ್ ಸಿಬ್ಬಂದಿಗಳಿಗೆ ಎಚ್ಚರಿಕೆಯ ಸಂದೇಶ ನೀಡಿದ್ದಾರೆ.

☯

---

5 ☞

ಮದುವೆ ಮಾಡಿಸಲು ಮುಂದಾದೆ. ಅವರು ಹೇಳಿದಂತೆ ಅದ್ಧೂರಿಯಾಗಿ ರಿಸೆಪ್ಷನ್ ಮಾಡಿಕೊಟ್ಟೆವು. ವರದಕ್ಷಿಣೆ, ಒಡವೆಗಾಗಿ ಬೇಡಿಕೆ ಇಟ್ಟು ಚಿತ್ರಹಿಂಸೆ ನೀಡಿದ್ದಾರೆ. ಮದುವೆ ಆಗಿ ಒಂದೂವರೆ ತಿಂಗಳಾದರೂ ನಮ್ಮ ಹುಡುಗಿಯನ್ನು ಆತ ಟಚ್ ಕೂಡ ಮಾಡಿಲ್ಲ. ಶ್ರೀಲಂಕಾಗೆ ಹನಿಮೂನ್‌ಗೆ ಹೋಗಿ ಅರ್ಧದಲ್ಲೇ ಮೊಟಕುಗೊಳಿಸಿ ಬಂದಿದ್ದಾನೆ. ಗಾನವಿಯ ಪತಿ ನಪುಂಸಕ, ಅವನು ಗಂಡಸೇ ಅಲ್ಲ ಎಂದು ಆಕೆಗೆ ಫಸ್ಟ್ ನೈಟ್




ದಿನವೇ ಗೊತ್ತಾಗಿತ್ತು! ಆತನ ಸಮಸ್ಯೆ ಮುಚ್ಚಿಡಲು ಗಾನವಿಗೆ ವರದಕ್ಷಿಣೆ ಕಿರುಕುಳ ನೀಡಲಾಗಿದೆ, ಆದ್ದರಿಂದಲೇ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಿದ್ದರು!

ಗಾನವಿ ಚಿಕ್ಕಪ್ಪ ಕಾರ್ತಿಕ್ ಪ್ರತಿಕ್ರಿಯಿಸಿ, ಗಾನವಿ ಪತಿ ಸೂರಜ್, ಆತನ ತಾಯಿ ಜಯಂತಿ, ಅಣ್ಣ ಸಂಜಯ್ ವಿರುದ್ಧ ರಾಮಮೂರ್ತಿ ನಗರ ಠಾಣೆಗೆ ದೂರು ನೀಡಿದ್ದೇವೆ, ವರದಕ್ಷಿಣೆ ಕಿರುಕುಳ ಆರೋಪದಡಿ ರಾಮಮೂರ್ತಿನಗರ ನಗರ ಠಾಣೆಗೆ ದೂರು ನೀಡಲಾಗಿದೆ. ಮದುವೆ ಬಳಿಕ ಆಭರಣಕ್ಕಾಗಿ ಸಾಕಷ್ಟು ಕಿರುಕುಳ ನೀಡಿದ್ದಾರೆ. ಇನ್ನೋವಾ ಕಾರು ಯಾವಾಗ ಕೊಡ್ತಾರೆ ಅಂತ ಕಾಟ ಕೊಡುತ್ತಿದ್ದ. ಮದುವೆ ನಂತರ ಸಂಸಾರದ ಬಗ್ಗೆ ಆತನಿಗೆ ಆಸಕ್ತಿ ಇರಲಿಲ್ಲ. ಅದನ್ನು ಮುಚ್ಚಿಟ್ಟು ಮದುವೆ ಮಾಡಿಸಿದ್ದಾರೆ. ಪೊಲೀಸರು ದೂರು ತಗೊಂಡು ತನಿಖೆ ಮಾಡುತ್ತಿದ್ದಾರೆ. ಮೂವರ ಫೋನ್ ಸ್ವಿಚ್ ಆಫ್ ಆಗಿದೆ. ಅವರ ಮೇಲೆ ಕ್ರಮ ಆಗಬೇಕು ಎಂದು ಹೇಳಿದ್ದರು!! ಈಗ ನೋಡಿದ್ರೆ, ಗಾನವಿ ಗಂಡ ಅವಮಾನ ತಾಳಲಾರದೆ ಸುಸೈಡ್ ಮಾಡಿಕೊಂಡಿರೋ ಸುದ್ದಿ ಬಂದಿದೆ!!! ಮಗನೊಂದಿಗೆ ತಾನೂ ಆತ್ಮಹತ್ಯೆಗೆ ಯತ್ನಿಸಿ ವಿಫಲವಾಗಿರೋ ಅವನ ಮಮ್ಮಿ ಕೂಡ




ನಾಗಪುರದ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾಳಂತೆ.

ಇನ್ನೂ ಪೊಲೀಸರು ಯಾರನ್ನು ಅರೆಸ್ಟ್ ಮಾಡ್ತಾರೆ ಹೇಳಿ?! ಒಟ್ಟಾರೆ, ಇದೊಂದು ದಾರುಣ ಘಟನೆ.... ನಡೆಯಬಾರದಿತ್ತು. ಸೂರಜ್ ನಪುಂಸಕನಾಗಿದ್ರೆ, ಮದುವೆಯನ್ನೇ ಆಗಬಾರದಿತ್ತು! ತನ್ನ ಹುಳುಕು ಮುಚ್ಚಿಟ್ಟುಕೊಳ್ಳುವುದಕ್ಕಾಗಿ ಗಾನವಿಯನ್ನು ಮದುವೆಯಾಗಿ ಆಕೆಯ ಬದುಕನ್ನು ಸರ್ವನಾಶ ಮಾಡಿ, ಅವಮಾನ ತಾಳಲಾರದೆ ತಾನೂ ಸತ್ತಿದ್ದಾನೆ!!

☯

# ದಾರಿ ತಪ್ಪಿದ ಅಪ್ರಾಪ್ತ ಮಕ್ಕಳಿಗೆ ಮನೆಯ ಹಾದಿ ತೋರಿಸಿದ ಪೊಲೀಸರು



ಮೃತಪಟ್ಟ ಧನ್ಯಾಬಾಯಿ ಹಾಗೂ ಚೈತ್ರಾಬಾಯಿ

**ಯಾವುದೋ ಕಾರಣಕ್ಕಾಗಿ ಮನೆ ಬಿಟ್ಟು ಎಲ್ಲಿಗೆ ಹೋಗಬೇಕು ಎನ್ನುವುದು ಗೊತ್ತಾಗದೆ ದಾರಿ ತಪ್ಪಿ ದೆಹಲಿ, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಸುತ್ತಾಡುತ್ತಿದ್ದ ಐವರು ಅಪ್ರಾಪ್ತ ಮಕ್ಕಳನ್ನು ದಾರಿ ತಪ್ಪುವ ಮೊದಲೇ ರಕ್ಷಿಸಿ ಮನೆಗಳಿಗೆ ಸೇರಿಸುವಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ.**




ಧನ್ಯಬಾಯಿ ಹಾಗೂ ಚೈತ್ರಾಬಾಯಿರವರ ಶವಗಳು

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆಯಲ್ಲಿ ಕಳೆದ 15-20 ದಿನಗಳಿಂದ ಸರಣಿ ಎಂಬಂತೆ ಅಪ್ರಾಪ್ತ ಹೆಣ್ಣು ಮಕ್ಕಳ ನಾಪತ್ತೆ ಪ್ರಕರಣಗಳು ವರದಿಯಾಗುತ್ತಿದ್ದಂತೆ ಸಾರ್ವಜನಿಕ ಮತ್ತು ಪೋಷಕ ವರ್ಗದಲ್ಲಿ ಆತಂಕದ ಛಾಯೆ ಉಂಟು ಮಾಡಿದೆ. ಕಳೆದ ತಿಂಗಳು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಯಳಚೇಪಲ್ಲಿ ಗ್ರಾಮದ ವಾಸಿ ಈಶ್ವರ್‌ರಾವ್ ಮತ್ತು ಗಾಯಿತ್ರಿಬಾಯಿ ಅವರ ಮಗಳಾದ ಧನ್ಯಬಾಯಿ ಮತ್ತು ಇದೇ ಗ್ರಾಮದ ಬಾಬುರಾವ್, ಚಂದ್ರಾಬಾಯಿರವರ ಮಗಳಾದ ಚೈತ್ರಾಬಾಯಿ ಇಬ್ಬರು ಕಾಣೆಯಾಗಿದ್ದರು. ಮನೆಯಿಂದ ಶಾಲೆಗೆ ಹೋಗಿದ್ದ ಚೈತ್ರಾಬಾಯಿ ಮಧ್ಯಾಹ್ನ ಮನೆಗೆ ಹೋಗದೆ ಶಾಲೆ ಮುಗಿಸಿಕೊಂಡು ಮನೆಯಲ್ಲಿದ್ದ ಧನ್ಯಬಾಯಿರವರ ಮನೆಗೆ ತೆರಳಿದ್ದ ಚೈತ್ರಾಬಾಯಿ. ಶೌಚಾಲಯಕ್ಕೆ ಹೋಗಬೇಕು ನನ್ನ ಜೊತೆ ಚೈತ್ರಾಬಾಯಿಯನ್ನು ಕಳಿಸಿಕೊಡಿ ಎಂದು ಹಠಕ್ಕೆ ಬಿದ್ದು ತಾಯಿ ಗಾಯಿತ್ರಿಬಾಯಿ ಅವರಿಗೆ ಹೇಳಿ ಊರ ಹೊರಗೆ ಹೋಗಿದ್ದಾರೆ. ಆದರೆ ಮಧ್ಯಾಹ್ನ 3 ಗಂಟೆಯಾದರೂ ಎರಡು ಮನೆಗಳ ಪೋಷಕರು ಕಾದರು. ಮಕ್ಕಳು ಮನೆಗೆ ವಾಪಸ್ಸು ಬಾರದ ಕಾರಣ ಪರಿಚಿತರ ಮನೆಗಳಲ್ಲಿ ಹಾಗೂ ಊರ ಹೊರಗೆ ಹುಡುಕಾಡಿದ ನಂತರ ಮಕ್ಕಳು ನಾಪತ್ತೆಯಾಗಿರುವುದರಿಂದ ಗಾಬರಿಗೊಂಡ ಪೋಷಕರು ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ ಮಕ್ಕಳು ನಾಪತ್ತೆ ಪ್ರಕರಣವನ್ನು ದಾಖಲಿಸಿದರು.

ಕೂಡಲೇ ಎಚ್ಚೆತ್ತುಕೊಂಡ ಮುಳಬಾಗಿಲು ಗ್ರಾಮಾಂತರ ಠಾಣೆ ಪೊಲೀಸರು ಮಕ್ಕಳ ಭಾವಚಿತ್ರದೊಂದಿಗೆ ಸ್ವವಿವರವನ್ನು ಸಾಮಾಜಿಕ ಜಾಲತಾಣದ ಮೂಲಕ ಕಾಣೆಯಾದವರ ಪತ್ತೆಗೆ ಪೋಸ್ಟ್ ಹಾಕಿ ಪ್ರಚಾರವನ್ನು ಮಾಡಿದರು. ತಾಲ್ಲೂಕಿನ ಕುಪ್ಪಂಪಾಳ್ಯ ಗ್ರಾಮದ ವಾಸಿ ನಾರಾಯಣಪ್ಪ ಎಂಬುವವರು ಬೆಳಿಗ್ಗೆ ಸಮವಸ್ತ್ರದಲ್ಲಿ ಇರುವ ಇಬ್ಬರು ಹೆಣ್ಣು ಮಕ್ಕಳ ಶವಗಳು ತೇಲುತ್ತಿರುವುದನ್ನು ನೋಡಿದ ಜಮೀನಿನ ಮಾಲೀಕ ನಾರಾಯಣಪ್ಪನವರು ಮುಳಬಾಗಿಲು ಗ್ರಾಮಾಂತರ ಠಾಣೆಯ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾರೆ. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ಕಾಣೆಯಾಗಿದ್ದ ಯಳಚೇಪಲ್ಲಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಓದುತ್ತಿದ್ದ ಚೈತ್ರಬಾಯಿ ಮತ್ತು ಧನ್ಯಬಾಯಿರವರು ಎಂದು ತಿಳಿಯುತ್ತಿದ್ದಂತೆ ಈ ವಿಷಯವನ್ನು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಮಕ್ಕಳ ಪೋಷಕರಿಗೆ ತಿಳಿಸಿದ್ದಾರೆ. ಇಬ್ಬರು ಮಕ್ಕಳ ಪೋಷಕರು ಸ್ಥಳಕ್ಕೆ ಬಂದು ಬಾವಿಯಲ್ಲಿ ತೇಲುತ್ತಿದ್ದ ಮಕ್ಕಳ ಶವಗಳನ್ನು ನೋಡಿ ಇವರು ನಮ್ಮ ಮಕ್ಕಳೆಂದು ಗುರುತಿಸಿದ್ದಾರೆ. ಬಾವಿಯಲ್ಲಿ ಇಬ್ಬರು ಅಪ್ರಾಪ್ತ ಹೆಣ್ಣು ಮಕ್ಕಳ ಶವಗಳು ಪತ್ತೆಯಾಗಿರುವ ವಿಚಾರ ತಿಳಿಯುತ್ತಿದ್ದಂತೆ ಕೋಲಾರ ಎಸ್ಪಿ ಬಿ. ನಿಖಿಲ್, ಹೆಚ್ಚುವರಿ ಎಸ್ಪಿ ರವಿಶಂಕರ್ ಹಾಗೂ ಮುಳಬಾಗಿ ಗ್ರಾಮಾಂತರ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಸುರೇಶ್ ಮತ್ತು ಬೆರಳಚ್ಚು ತಜ್ಞರು, ಶ್ವಾನದಳದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಶವಗಳ ಮಹಜರ್ ನಡೆಸಿದ ನಂತರ ಮೃತದೇಹಗಳನ್ನು ಕೋಲಾರದ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಕಳುಹಿಸಿ ಕೊಡಲಾಯಿತು. ಈ ವೇಳೆ ಮಕ್ಕಳ ಮೃತದೇಹವನ್ನು ನೋಡಿದ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ವೇಳೆ ಮಾತನಾಡಿದ ಮೃತ ಧನ್ಯಬಾಯಿಯ ತಾಯಿ ಗಾಯಿತ್ರಿಬಾಯಿ ಮಗಳನ್ನು ಬಲವಂತವಾಗಿ ಚೈತ್ರಾಬಾಯಿ ಕರೆದುಕೊಂಡು ಹೋಗಿದ್ದು ಇಬ್ಬರು ಮಕ್ಕಳನ್ನು ಯಾರೋ ಕೊಲೆ ಮಾಡಿ ಬಾವಿಗೆ ಶವಗಳನ್ನು ಎಸೆದು ಹೋಗಿರಬೇಕೆಂದು ಅನುಮಾನ ವ್ಯಕ್ತಪಡಿಸಿದರು.



ಎಸ್ಪಿ ಬಿ. ನಿಖಿಲ್



ಎಎಸ್ಪಿ ರವಿಶಂಕರ್

### ಕೊಲೆಯೋ... ಆತ್ಮಹತ್ಯೆಯೋ...

ಬಾವಿಯಲ್ಲಿ ಇಬ್ಬರು ಅಪ್ರಾಪ್ತ ಬಾಲಕಿಯರ ಮೃತದೇಹಗಳು ಪತ್ತೆಯಾಗಿರುವ ಬಗ್ಗೆ ಹಲವು ಅನುಮಾನಗಳು ಪೋಷಕರು ಹಾಗೂ ಸಾರ್ವಜನಿಕರಲ್ಲಿ ಕಾಡುತ್ತಿದೆ. ಯಳಚೇಪಲ್ಲಿ ಗ್ರಾಮದಿಂದ ಮೃತದೇಹಗಳು ದೊರೆತಿರುವ ಕುಪ್ಪಂಪಾಳ್ಯ ಗ್ರಾಮಕ್ಕೂ ಮೂರು ಕಿ.ಮೀ. ಅಂತರವಿದೆ. ಶೌಚಾಲಯಕ್ಕೆಂದು ಇದುವರೆಗೂ ಇಬ್ಬರು ಅಷ್ಟು ದೂರದ ನಿರ್ಜನ ಪ್ರದೇಶಕ್ಕೆ ಹೋಗೇ ಇಲ್ಲ, ಇನ್ನು ಚೈತ್ರಾಬಾಯಿ ಮನೆಯಲ್ಲಿ ಶೌಚಾಲಯ ಇದೆ ಹಾಗೂ ಶಾಲೆಯಲ್ಲೂ ಶೌಚಾಲಯ ವ್ಯವಸ್ಥೆ ಇದೆ. ಹಾಗಾಗಿ ಶಾಲೆಯಿಂದ ಮಧ್ಯಾಹ್ನ ಮನೆಗೆ ಹೋಗಬೇಕಾಗಿದ್ದ ಚೈತ್ರಾಬಾಯಿ ಸೀದಾ ಧನ್ಯಾಬಾಯಿ ಮನೆಗೆ ಹೋಗಿ ಶೌಚಾಲಯಕ್ಕೆ ಎಂದು ಹೇಳಿ ಇಬ್ಬರೂ ಮನೆಯಿಂದ ಹೊರ ಹೋಗಿ, ಹೀಗೆ ಶವವಾಗಿ ಪತ್ತೆಯಾಗಿದ್ದಾರೆ. ಹಾಗಾಗಿ ಇಬ್ಬರು ಅಪ್ರಾಪ್ತ ಬಾಲಕಿಯರ ಸಾವಿನ ಹಿಂದೆ ಬೆಟ್ಟದಷ್ಟು ಅನುಮಾನಗಳು ಕಾಡುತ್ತಿದೆ.

ಈ ವಿಚಾರದ ಬಗ್ಗೆ ಎಸ್ಪಿ ಬಿ. ನಿಖಿಲ್‌ರವರು ಮಾತನಾಡಿ ಮೇಲ್ನೋಟಕ್ಕೆ ಸಾವಿನ ಬಗ್ಗೆ ನಿಗೂಢತೆ ಇದ್ದು ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಮತ್ತಷ್ಟು ವಿಚಾರಗಳು ತಿಳಿಯಲಿದೆ. ಇನ್ನು ಚೈತ್ರಾಬಾಯಿ ಮನೆಯಿಂದ ಹೊರಗೆ ಹೋಗುವಾಗ ಆಧಾರ್ ಕಾರ್ಡ್ ಸಹ ತೆಗೆದುಕೊಂಡು ಹೋಗಿದ್ದಾರೆ. ಹಿಂದಿನ ರಾತ್ರಿ ತಂದೆ ಬಾಬುರಾವ್‌ರವರು ಮಗಳಿಗೆ ಒಂದೂವರೆ ಸಾವಿರ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ. ಆದರೆ ಇದ್ಯಾವುದು ನಮಗೆ ಗೊತ್ತೇ ಇಲ್ಲ ಎಂದು ಚೈತ್ರಾಬಾಯಿಯ ಮನೆಯವರು ಹೇಳುತ್ತಿದ್ದಾರೆ. ಪ್ರಕರಣವನ್ನು ದಾಖಲಿಸಿಕೊಂಡಿರುವ ಮುಳಬಾಗಿಲು ಗ್ರಾಮಾಂತರ ಠಾಣೆ ಪೊಲೀಸರು ತನಿಖೆಯನ್ನು ಆರಂಭಿಸಿದ್ದಾರೆ. ಅಪ್ರಾಪ್ತ ಹೆಣ್ಣು ಮಕ್ಕಳ ಸಾವು ಕೊಲೆಯೋ ಅಥವಾ ಆತ್ಮಹತ್ಯೆಯೋ ಎನ್ನುವುದನ್ನು ಪತ್ತೆ ಮಾಡಬೇಕಿದೆ. ಆದರೆ ಶೌಚಾಲಯಕ್ಕೆ ಹೋಗಿ ಬರುವುದಾಗಿ ಪೋಷಕರಿಗೆ ಹೇಳಿ ತೆರಳಿದ್ದ ಮಕ್ಕಳಿಬ್ಬರು ಬಾವಿಯಲ್ಲಿ ಶವವಾಗಿ ಪತ್ತೆಯಾಗಿದ್ದು ಮಾತ್ರ ದುರಂತವೇ ಸರಿ.

### ಬಾಲಕಿಯರ ಸರಣಿ ನಾಪತ್ತೆ

ಇಬ್ಬರು ಅಪ್ರಾಪ್ತ ಮಕ್ಕಳ ಸಾವಿನ ಈ ದುರ್ಘಟನೆಯ ಕಹಿನೆನಪು ಮಾಸುವ ಮೊದಲೇ ಕೋಲಾರ ಜಿಲ್ಲೆಯ ಮಹಿಳಾ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಕಳೆದ ಕೆಲವು ದಿನಗಳಲ್ಲಿ ನಾಲ್ಕು ಅಪ್ರಾಪ್ತರು ಕಾಣೆಯಾಗಿರುವ ಪ್ರಕರಣಗಳು ಅತ್ಯಂತ ವೇಗವಾಗಿ ಮತ್ತು ಯಶಸ್ವಿಯಾಗಿ ಬಗೆಹರಿಸಿ ಸಾರ್ವಜನಿಕರು ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಪ್ರಕರಣ 1ರಲ್ಲಿ ಕೋಲಾರ ತಾಲ್ಲೂಕು ನರಸಾಪುರದ ನಿವಾಸಿ ನಿಸಾರ್ ಅಹಮ್ಮದ್‌ರವರ ಅಪ್ರಾಪ್ತ ಮಗಳು ಕಾಣೆಯಾಗಿದ್ದು ಮೊ.ಸಂ. 104/2025 ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು. ಬಾಲಕಿಯು ದೆಹಲಿಗೆ ರೈಲಿನಲ್ಲಿ ತೆರಳುತ್ತಿರುವ ಮಾಹಿತಿಯನ್ನು ಕಲೆ ಹಾಕಿದ ಪೊಲೀಸರು ತಕ್ಷಣ ಮಹಿಳಾ ಠಾಣೆಯ ಸಿಬ್ಬಂದಿ ವಿಮಾನದಲ್ಲಿ

☞ 14



ಮಕ್ಕಳ ಸಾವಿನ ಬಗ್ಗೆ ಚರ್ಚಿಸುತ್ತಿರುವ ಅಧಿಕಾರಿಗಳು



ಬಾವಿ ಮುಂದೆ ಸೇರಿರುವ ಪೋಷಕರು ಮತ್ತು ಗ್ರಾಮಸ್ಥರು



ನರಸಾಪುರದ ಬಾಲಕಿಯರನ್ನು ರಕ್ಷಿಸಿರುವ ಪೊಲೀಸರು

# ಸೌಜನ್ಯ ಫೈಲ್ಸ್



12

ನಿರೂಪಣೆ :

**ಮೋಹನ್ ಬೋಳಂಗಡಿ**

# ತಿರುಗಿ ಬಿದ್ದ ಸೌಜನ್ಯ ಪ್ರಕರಣದ ಮೊದಲ ಸಾಕ್ಷಿ!

ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವಿಚಾರಣೆ ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ಅಂದರೆ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯದಲ್ಲಿ 2016 ಅಕ್ಟೋಬರ್ 24ರಂದು ಆರಂಭವಾಯಿತು. ಘಟನೆ ನಡೆದು ಸರಿ ಸುಮಾರು 4 ವರ್ಷಗಳ ನಂತರ ವಿಚಾರಣೆ ಆರಂಭಗೊಂಡಿತ್ತು. ಸ್ಥಳೀಯ ಪೊಲೀಸರು, ಸಿಓಡಿ ಹಾಗೂ ಸಿಬಿಐ ಅಧಿಕಾರಿಗಳು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪ ಪಟ್ಟಿಯ ಆಧಾರದಲ್ಲಿ ವಿಚಾರಣೆ ಆರಂಭವಾಯಿತು. ಆರೋಪಿ ಸಂತೋಷ್‌ರಾವ್‌ನನ್ನು ಪರಪ್ಪನ ಅಗ್ರಹಾರ ಜೈಲಿನಿಂದ ಪೊಲೀಸ್ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಮಾನ್ಯ ಹೈಕೋರ್ಟ್ ಸಂತೋಷ್ ರಾವ್ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಈ ಪ್ರಕರಣದ ಪ್ರಮುಖ 16 ಸಾಕ್ಷಿದಾರರನ್ನು ವಿಚಾರಣೆಗೆ ಗುರಿಪಡಿಸಿದ ಬಳಿಕ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಬಹುದು ಎಂದು ಅಭಿಪ್ರಾಯ ಪಟ್ಟ ಹಿನ್ನೆಲೆಯಲ್ಲಿ ಸಂತೋಷ್‌ಪರ ವಕೀಲರಾದ ಮೋಹಿತ್ ಕುಮಾರ್ ಅವರು ನ್ಯಾಯಾಲಯದಲ್ಲಿ ಮನವಿ ಮಾಡಿ ಆರೋಪಿ ವಿರುದ್ಧ ದೋಷಾರೋಪ ಹೊರಿಸಿದ ಬಳಿಕ ನ್ಯಾಯಾಲಯ ವಿಚಾರಣೆಯನ್ನು ಕೈಗೆತ್ತಿಕೊಂಡಿತ್ತು. ಮತ್ತು ತನಿಖಾ ಸಂಸ್ಥೆಗಳು ಗುರುತಿಸಿದಂತಹ ಅತ್ಯಂತ ಪ್ರಮುಖವಾದಂತಹ 16 ಸಾಕ್ಷಿಗಳಿಗೆ ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಲಾಗಿತ್ತು. ಈ ಪೈಕಿ ಪ್ರಮುಖ ಸಾಕ್ಷಿಯೇ ಬೆಳ್ತಂಗಡಿ ತಾಲೂಕಿನ ಪಾಂಗಾಳದ ಸಿವಿಲ್ ಕಂಟ್ರಾಕ್ಟರ್ 49 ವರ್ಷ ಪ್ರಾಯದ ಪೊಣ್ಣೆಗೌಡ ಎಂಬವರ ಮಗ ಚಂದಪ್ಪ ಗೌಡ. ಇವರು ಸಂತ್ರಸ್ತ ಬಾಲಕಿ ಸೌಜನ್ಯಳ ತಂದೆ. ಇವರು ಈ ಪ್ರಕರಣದ ಪ್ರಮುಖ ಸಾಕ್ಷಿ.

ನ್ಯಾಯಾಲಯದ ಸಾಕ್ಷಿ ಕಟಕಟೆಯಲ್ಲಿ ನಿಂತ ಚಂದಪ್ಪ ಗೌಡರನ್ನು ಸಿಬಿಐ ಪರ ವಕೀಲ ಶಿವಾನಂದ ಪೆರ್ಲ ಅವರು ಮುಖ್ಯ ವಿಚಾರಣೆ ಆರಂಭಿಸಿದರು. ಸಾಕ್ಷಿ ಪ್ರಮಾಣ ಬೋಧಿಸಿದ ನಂತರ ಚಂದಪ್ಪ ಗೌಡರು ತನ್ನ ಹೇಳಿಕೆಯನ್ನು ದಾಖಲಿಸಿದರು. ಅವರ ಹೇಳಿಕೆ ಈ ರೀತಿಯಾಗಿ ಇದೆ. ನನ್ನ ಹೆಂಡತಿಯ ಹೆಸರು ಕುಸುಮಾವತಿ. ನಮಗೆ 5 ಜನ ಮಕ್ಕಳು. ಸೌಜನ್ಯ 2ನೇಯ ಮಗಳು. ದೊಡ್ಡ ಮಗಳ ಮದುವೆಯಾಗಿತ್ತು. ಉಳಿದವರು ಓದುತ್ತಿದ್ದಾರೆ. ಸೌಜನ್ಯ ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ 2ನೇ ವರ್ಷದ ಪಿಯುಸಿಯಲ್ಲಿ ಓದುತ್ತಿದ್ದಳು. ಮನೆಯಿಂದ ಬೆಳಿಗ್ಗೆ 7.30ರಿಂದ 8 ಗಂಟೆಯ ವೇಳೆಗೆ ಕಾಲೇಜಿಗೆ ಹೋಗುತ್ತಿದ್ದಳು. ಸಂಜೆ 4 ಗಂಟೆಯಿಂದ 5 ಗಂಟೆಯ ಮಧ್ಯೆ ಮನೆಗೆ ಬರುತ್ತಿದ್ದಳು.



ಸಂತೋಷ್ ರಾವ್

ದಿನಾಂಕ 9.10.2012ರಂದು ಬೆಳಿಗ್ಗೆ 8 ಗಂಟೆಗೆ ಕಾಲೇಜಿಗೆ ಹೋಗಲು ಮಣ್ಣಸಂಕ ಎಂಬಲ್ಲಿ ನಿಂತಿದ್ದಳು. ನಾನು ಧರ್ಮಸ್ಥಳ ರಸ್ತೆಯಲ್ಲಿ ಬರುತ್ತಿದ್ದಾಗ ಅವಳು ಅಲ್ಲಿ ನಿಂತಿದ್ದನ್ನು ನೋಡಿ ನನ್ನ ಜೀಪಿನಲ್ಲಿ ಆಕೆಯನ್ನು ಕಾಲೇಜಿಗೆ ಬಿಟ್ಟು ಬೆಳ್ತಂಗಡಿಗೆ ಹೋದೆ. ಆಕೆ ಮಧ್ಯಾಹ್ನಕ್ಕೆ ಕಾಲೇಜು ಬಿಡುತ್ತದೆ . ಮಧ್ಯಾಹ್ನ ಬರುತ್ತೇನೆ ಎಂದು ಹೇಳಿದಳು. ಆ ದಿನ ನನ್ನ ಬಾವ ವಿಠಲಗೌಡ ಅವರ ಮನೆಯಲ್ಲಿ ಹೊಸ ಅಕ್ಕಿ ಊಟ ಸಮಾರಂಭ ಇತ್ತು. ಆಕೆ ಅಲ್ಲಿಗೆ ಊಟಕ್ಕೆ ಬರುತ್ತೇನೆ ಎಂದು ಹೇಳಿದ್ದಳು. ಆದರೆ ಆಕೆ ಆ ದಿನ ಸಂಜೆ ಬರಲಿಲ್ಲ. ನಮ್ಮ ಸಂಬಂಧಿಕರಿಗೆ ನಾನು ಫೋನ್ ಮಾಡಿದೆ. ಈ ಪ್ರಕರಣದ ಮೂರನೇ ಸಾಕ್ಷಿ ವಿಠಲಗೌಡರಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಸಂಜೆ 4.15ರ ವೇಳೆಗೆ ವಿಠಲಗೌಡರು ಮನೆಯಿಂದ ನೇತ್ರಾವತಿ ಸ್ನಾನಘಟ್ಟಕ್ಕೆ ಬರುವಾಗ ಸೌಜನ್ಯ ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದಳು ಎಂದು ಅವರು ಹೇಳಿದರು. ಹಾಗೆ ವಿಶ್ ಮಾಡಿ ನಡೆದುಕೊಂಡು ಹೋದಳು ಎಂದು ಹೇಳಿದರು.



ಚಂದಪ್ಪ ಗೌಡ

ನಾವು ಸುಮಾರು 500 ಜನ ಊರಿನವರೆಲ್ಲ ಸೇರಿಕೊಂಡು ಮಣ್ಣಸಂಕದ ಬಳಿ ಹುಡುಕಿದೆವು. ಆ ದಿನ ರಾತ್ರಿ ಆಕೆ ಸಿಗಲಿಲ್ಲ. ನಾನು ಬೆಳ್ತಂಗಡಿ ಪೊಲೀಸ್ ಠಾಣೆಗೆ ಹೋಗಿ ವಿಷಯ ತಿಳಿಸಿದಾಗ ಅವರು ನಾಳೆ ಬನ್ನಿ, ಹುಡುಗಿಯ ಫೋಟೋ ತನ್ನಿ ಎಂದು ಹೇಳಿದರು. ನಂತರ ಪೊಲೀಸರು ನಮ್ಮ ಮನೆಗೆ ಬಂದು ಮನೆಯಲ್ಲಿ ಸೌಜನ್ಯಳ ಬಟ್ಟೆ, ಪುಸ್ತಕ ನೋಡಿದರು. ಮಾರನೇ ದಿನ ಬೆಳಿಗ್ಗೆ ಅಂದರೆ 10.10.2012ರಂದು ನಾವುಗಳು ಹುಡುಕಾಡಲು ಹೋದೆವು. ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ನಮಗೆ ಒಂದು ಶವ ಸಿಕ್ಕಿದೆ ಎಂದು ಮಾಹಿತಿ ಬಂತು. ನಂತರ ನಮ್ಮ ಸಂಬಂಧಿಕರು ಮಣ್ಣಸಂಕಕ್ಕೆ ಹೋಗಿ ಶವವನ್ನು ನೋಡಿ ಅದು ಸೌಜನ್ಯಳ ಶವ ಎಂದು ಗುರುತು ಹಚ್ಚಿದರು. ನನಗೆ ಗಾಬರಿಯಾಗಿ ನಾನು ಸ್ಥಳಕ್ಕೆ ಹೋಗಲಿಲ್ಲ. ನಂತರ ಶವವನ್ನು ಪೋಸ್ಟ್‌ಮಾರ್ಟಂಗೆ ತೆಗೆದುಕೊಂಡು ಹೋಗಿ ಪಂಚನಾಮೆ ಆದ ಬಳಿಕ ನಮ್ಮ ಮನೆಗೆ ಶವವನ್ನು ತಂದರು.



ಧೀರಜ್ ಜೈನ್



ಉದಯ್ ಜೈನ್



ಮಲ್ಲಿಕ್ ಜೈನ್

ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆ ಎಂದು ನಮಗೆ ತಿಳಿಯಿತು. ನನಗೆ ಬಂದ ಮಾಹಿತಿಯ ಪ್ರಕಾರ ಈ ಕೃತ್ಯ ಒಬ್ಬ ವ್ಯಕ್ತಿಯಿಂದ ನಡೆದಿಲ್ಲ ಮತ್ತು 3-4 ಜನರು ಅತ್ಯಾಚಾರ ಮಾಡಿ ಅಲ್ಲಿ ಹಾಕಿರಬಹುದು ಎಂದು ತಿಳಿಯಿತು. ಆಕೆಯ ಐಡಿ ಕಾರ್ಡಿನಿಂದ ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತು. ಆ ದಿನ ಸೌಜನ್ಯ ಕಾಲೇಜಿನ ಸಮವಸ್ತ್ರ ಧರಿಸಿದ್ದಳು. ಅದು ನೀಲಿ ಬಿಳಿ ಬಣ್ಣದ ಚೂಡಿದಾರ್ ಆಗಿತ್ತು. ನೀಲಿ ಬಣ್ಣದ ಶಾಲು ಧರಿಸಿದ್ದಳು. ಆಕೆ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ನನಗೆ ಆದಿನ ಮಲ್ಲಿಕ್‌ಜೈನ್, ಉದಯ್‌ಜೈನ್, ಧೀರಜ್ ಜೈನ್ ಅವರ ಮೇಲೆ ಸಂಶಯ ಇತ್ತು ಎಂದು ಹೇಳಿದೆ. ಸಾರ್ವಜನಿಕರು ನನಗೆ ಈ ವ್ಯಕ್ತಿಗಳ ಬಗ್ಗೆ ಸಂಶಯ ಇದೆ ಎಂದು ಸಂಶಯ ಮಾಡಿಸಿ ಎಂದು ಹೇಳಿದರು. ಸ್ಥಳೀಯ ಪೊಲೀಸರು ಸಿಐಡಿ ಮತ್ತು ಸಿಬಿಐ ಪೊಲೀಸರು ತನಿಖೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಆ ದಿನ ಸೌಜನ್ಯ ಧರಿಸಿದ್ದ ಬಟ್ಟೆ ಹರಿದಿತ್ತು. ಆ ದಿನ ಶವ ನಗ್ನ ಸ್ಥಿತಿಯಲ್ಲಿತ್ತು ಎಂದು ಗೊತ್ತಾಯಿತು. ನನ್ನ ತಮ್ಮ ಜಗದೀಶ್ ಈ ಬಗ್ಗೆ ದೂರನ್ನು ಕೊಟ್ಟಿರುತ್ತಾರೆ.


ನಾನು ಆರೋಪಿ ಸಂತೋಷ್‌ರಾವ್‌ನನ್ನು ಯಾವತ್ತೂ ಎಲ್ಲೂ ನೋಡಿಲ್ಲ. ನಾನು ಮಲ್ಲಿಕ್ ಜೈನ್, ಉದಯ್ ಜೈನ್, ಧೀರಜ್ ಜೈನ್ ಅವರ ಮೇಲೆ ಅನುಮಾನ ಇದೆ. ತನಿಖೆ ಮಾಡಿ ಎಂದು ಬೆಳ್ತಂಗಡಿ ಪೊಲೀಸರಿಗೆ ಹೇಳಿದ್ದೆ. ಆದರೆ ಅವರು ಆ ಮೂರು ಜನರ ಮೇಲೆ ಆರೋಪ ಸಾಬೀತಾಗಿಲ್ಲ ಎಂದು ಹೇಳಿದರು. ಆದರೆ ನನ್ನ ಪ್ರಕಾರ ಸಂತೋಷ್ ರಾವ್ ಒಬ್ಬನೇ ಈ ಕೃತ್ಯ ಮಾಡಿದ್ದಾನೆ ಎಂದು ಅನಿಸುತ್ತಿಲ್ಲ. ಉಳಿದವರ ಮೇಲೆ ಅನುಮಾನ ಇದೆ. ಆ ದಿನ ಮಧ್ಯಾಹ್ನ 1 ಗಂಟೆಗೆ ಆ ಮೂರು ಜನ ವ್ಯಕ್ತಿಗಳು 1ರಿಂದ 1.30 ಗಂಟೆಗೆ ಈ ಮಧ್ಯಾಹ್ನದ ಹೊತ್ತು ಇಲ್ಲಿ ಏನಾದರೂ ಮಾಡಲು ಕಷ್ಟ ಎಂದು ಅವರುಗಳು ಮಾತನಾಡಿಕೊಳ್ಳುತ್ತಿದ್ದರು ಎಂದು ವಿಠಲ ಗೌಡ ಅವರ ಅಕ್ಕ ಯಶೋಧ ಹೇಳಿದರು. ಆ ಕಾರಣ ನನಗೆ ಅವರ ಮೇಲೆ ಸಂಶಯ ಬಂತು. ಆ ದಿನ ಸೌಜನ್ಯ ಕಪ್ಪು ಬಣ್ಣದ ಕೊಡೆ ತೆಗೆದುಕೊಂಡು ಹೋಗಿದ್ದಳು. ಆ ಕೊಡೆ ಪತ್ತೆಯಾಗಿಲ್ಲ. ಆ ದಿನ ಮಳೆ ಬಂದಿತ್ತು. ಆಕೆಯ ಪುಸ್ತಕ ಬಟ್ಟೆ ಏನೂ ಒದ್ದೆಯಾಗಿರಲಿಲ್ಲ.

ಸಾಕ್ಷಿದಾರ ಚಂದಪ್ಪ ಗೌಡ ಅವರು ಮುಖ್ಯ ವಿಚಾರಣೆಯಲ್ಲಿ ಇಷ್ಟೆಲ್ಲ ಅಂಶಗಳನ್ನು ನ್ಯಾಯಾಲಯದ ಗಮನಕ್ಕೆ ತಂದ ಬಳಿಕ ಆರೋಪಿ ಸಂತೋಷ್‌ರಾವ್ ಪರ ವಕೀಲ ಮೋಹಿತ್ ಕುಮಾರ್ ಅವರು ಪಾಟೀ ಸವಾಲು ಹಾಕಿದರು. ಈ ಸಂದರ್ಭದಲ್ಲಿ ಚಂದಪ್ಪ ಗೌಡ ಅವರು ಉತ್ತರಿಸಿದ್ದು ಹೀಗೆ.

11ನೇ ತಾರೀಕಿನಂದು ಪೊಲೀಸರು ನಮ್ಮ ಮನೆಗೆ ಬಂದು ನಮ್ಮ ಮಗಳ ಒಳ ಉಡುಪುಗಳನ್ನು ತೆಗೆದುಕೊಂಡು ಹೋದರು ಎಂದರೆ ಸರಿ. ಅದನ್ನು ವಾಪಾಸ್ಸು ಕೊಟ್ಟಿಲ್ಲ ಎಂದರೆ ಸರಿ. 9ನೇ ತಾರೀಕಿನಿಂದ 11ನೇ ತಾರೀಕಿನವರೆಗೆ ಜೋರು ಮಳೆ ಇತ್ತು ಎಂದರೆ ಸರಿ. ಮಣ್ಣಸಂಕ ಬಸ್‌ಸ್ಟಾಪ್‌ನಿಂದ ನಮ್ಮ ಮನೆ 2 ಕಿ.ಮೀ. ದೂರ ಇದೆ. ಇಲ್ಲಿಗೆ ಅಂದಿನ ಹೇಳಿಕೆ ಪಾಟೀ ಸವಾಲು ಮುಗಿದಿತ್ತು. ಈ ವಿಚಾರಣೆ 50ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಶನ್ಸ್ ನ್ಯಾಯಾಧೀಶರಾದ ರೇಖಾ ಬಿ.ಎಸ್. ಅವರ ಮುಂದೆ ನಡೆದಿತ್ತು.



ಈ ವಿಚಾರಣೆಯ ಸಂದರ್ಭದಲ್ಲಿ ಪ್ರಮುಖ ಸಾಕ್ಷಿದಾರರಾದ ಚಂದಪ್ಪ ಗೌಡರು ಕೆಲವು ಅಂಶಗಳನ್ನು ನ್ಯಾಯಾಲಯದ ಗಮನಕ್ಕೆ ತಂದಿಲ್ಲ. ಕಾರಣ ಏನೆಂದರೆ ಪ್ರಾಸಿಕ್ಯೂಶನ್ ಪರ ವಕೀಲರಾದ ಶಿವಾನಂದ ಪೆರ್ಲ ಅವರು ಈ ಬಗ್ಗೆ ವಿಚಾರಣೆಗೆ ಗುರಿಪಡಿಸಿರಲಿಲ್ಲ. ಸೌಜನ್ಯ ಕಾಣೆಯಾದ ದಿನದಂದು ರಾತ್ರಿ ಚಂದಪ್ಪ ಗೌಡರು ತನ್ನ ಬಾವ ವಿಠಲ ಗೌಡ ಅವರೊಂದಿಗೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹೋಗಿ ಲಿಖಿತ ದೂರು ನೀಡಿದ್ದರು. ಈ ದೂರನ್ನು ಠಾಣೆಯಲ್ಲಿ ಪ್ರಭಾರದಲ್ಲಿದ್ದ ಹೆಡ್‌ಕಾನ್ಸ್‌ಟೇಬಲ್ ಐತು ನಾಯ್ಕ ಅವರು ಪಡೆದುಕೊಂಡಿದ್ದರು ಮತ್ತು ಸೌಜನ್ಯಳ 10 ಪ್ರತಿ ಭಾವಚಿತ್ರವನ್ನು ತರಲು ಹೇಳಿದ್ದರು. ತದನಂತರ ಮರುದಿನ ಚಂದಪ್ಪ ಗೌಡರು ಪೊಲೀಸ್ ಠಾಣೆಗೆ ಹೋಗುವ ಮುನ್ನ ಸ್ಟುಡಿಯೋಗೆ ಹೋಗಿದ್ದು ಸೌಜನ್ಯಳ ಭಾವಚಿತ್ರಕ್ಕಾಗಿ ಕೇಳಿದ್ದರು. ಆದರೆ ಆ ಸ್ಟುಡಿಯೋದಲ್ಲಿ ಭಾವಚಿತ್ರದ ಪ್ರತಿ ಸಿಗದೇ ಇದ್ದುದರಿಂದ ಕಾಲೇಜಿನಿಂದ ಆಕೆಯ ಭಾವಚಿತ್ರವನ್ನು ಪಡೆಯಲು ಕಾಲೇಜಿಗೆ ಬಂದಿದ್ದರು. ಆ ಸಂದರ್ಭದಲ್ಲಿ ಅವರಿಗೆ ಸೌಜನ್ಯ ಮೃತದೇಹ ಸಿಕ್ಕ ಮಾಹಿತಿ ಲಭಿಸಿತ್ತು. ಆದರೆ ಅವರು ಮೃತದೇಹ ನೋಡಲು ಹೋಗಿರಲಿಲ್ಲ. ಆದರೆ ಮೃತದೇಹ ಯಾವ ರೀತಿ ಇತ್ತು ಎಂಬುವುದನ್ನು ನ್ಯಾಯಾಲಯದ ಮುಂದೆ ವಿವರಿಸಿದ್ದರು. ಅವರು ತನಿಖಾ ಹಂತದಲ್ಲಿ ನೀಡಿದ್ದ ಹೇಳಿಕೆಗೆ ವ್ಯತಿರಿಕ್ತವಾಗಿ ಹೇಳಿಕೆ ನೀಡಿದ್ದರು ಅಲ್ಲದೇ ಇತರ ಮೂವರು ಯುವಕರಾದ ಧೀರಜ್ ಜೈನ್, ಮಲ್ಲಿಕ್ ಜೈನ್ ಮತ್ತು ಉದಯ್ ಜೈನ್ ಅವರ ಹೆಸರನ್ನು ಉಲ್ಲೇಖಿಸಿದ್ದರು. ಇದರಿಂದಾಗಿ ಅವರು ಪ್ರಾಸಿಕ್ಯೂಶನ್‌ಗೆ ವಿರುದ್ಧವಾಗಿ ಸಾಕ್ಷಿ ಹೇಳಿದ್ದಾರೆ ಎಂದು ಪರಿಗಣಿಸಿ ಅವರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಪ್ರಾಸಿಕ್ಯೂಶನ್ ವಕೀಲರು ಒಳಪಡಿಸಬೇಕಿತ್ತು. ಆದರೆ ಆ ಪ್ರಕ್ರಿಯೆ ನಡೆಯಲಿಲ್ಲ. ಮುಂದುವರಿದ ವಿಚಾರಣೆಯು ಮತ್ತಷ್ಟು ಕುತೂಹಲ ಕೆರಳಿಸಿತ್ತು.



ವಿಠಲಗೌಡ

ಮುಂದುವರಿಯುವುದು.....

# ಕೋಕಾ ಕಾಯ್ದೆಯ ಬಲೆಯಲ್ಲಿ ಸೈಫುದ್ದೀನ್ ಹಂತಕರು!

ಉಡುಪಿ

ಮೋಹನ್ ಬೋಳಂಗಡಿ


ಸೈಫುದ್ದೀನ್

ಕೃಷ್ಣನೂರು ಉಡುಪಿಯನ್ನು ಬೆಚ್ಚಿಬೀಳಿಸಿದ್ದ ಪ್ರಕರಣ ಅಂದರೆ ಅದು ಎಕೆಎಂಎಸ್ ಬಸ್ ಮಾಲೀಕ ಸೈಫುದ್ದೀನ್ ಹತ್ಯೆ. ಮಲ್ಪೆ ಪೊಲೀಸ್ ಠಾಣಾ ವ್ಯಾಪ್ತಿಯ ಕೊಡವೂರಿನ ಎಕೆ ಕಾಟೇಜ್‌ನಲ್ಲಿ ತನ್ನ ಜೊತೆಗಾರರಿಂದಲೇ ಹತ್ಯೆಗೀಡಾದ ನತದೃಷ್ಟ ಸೈಫುದ್ದೀನ್. ಸೆ.27ರಂದು ಬೆಳಿಗ್ಗೆ 10.30ರ ವೇಳೆಗೆ ಸೈಫುದ್ದೀನ್ ತನ್ನ ಜೊತೆ ಇದ್ದ ಫೈಸಲ್ ಖಾನ್ ಎಂಬಾತನೊಂದಿಗೆ ಕಾರಿನಲ್ಲಿ ಮಣಿಪಾಲದ ಮನೆಯಿಂದ ತನ್ನದೇ ಒಡೆತನದ ಎಕೆ ಕಾಟೇಜ್‌ಗೆ ಹೋಗಿದ್ದ. ಕಾರಿನಿಂದ ಇಳಿದು ಮನೆಯೊಳಗೆ ಹೋಗುತ್ತಿದ್ದಂತೆಯೇ ಅಲ್ಲಿಯೇ ಕಾದು ನಿಂತಿದ್ದ ಮೂವರು ಆತನ ಮೇಲೆ ಮಾರಕಾಸ್ತ್ರಗಳಿಂದ ಧಾಳಿ ನಡೆಸಿದ್ದರು. ಆತ ಅಲ್ಲಿಯೇ ಪ್ರಾಣ ಚೆಲ್ಲಿದ್ದ. ಘಟನೆ ನಡೆದು ಅರ್ಧ ಗಂಟೆಯಲ್ಲಿ ಹಂತಕರು ಮಲ್ಪೆಯ ಮನೆಯೊಂದರಲ್ಲಿ ಸ್ನಾನ ಮಾಡಿ ಬಟ್ಟೆ ಬದಲಿಸಿ ನೇರವಾಗಿ ಮಲ್ಪೆ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದರು. ಮಲ್ಪೆ ಇನ್ಸ್‌ಪೆಕ್ಟರ್ ರಾಮಚಂದ್ರ ನಾಯಕ್, ಡಿವೈಎಸ್ಪಿ ಡಿ.ಟಿ. ಪ್ರಭು, ಉಡುಪಿ ಜಿಲ್ಲಾ ಎಸ್ಪಿ ಹರಿರಾಂ ಶಂಕರ್ ಮತ್ತು ಇತರ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಸೋಕೋ ಟೀಮ್‌ನೊಂದಿಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುತ್ತಿದ್ದಂತೆಯೇ ಆರೋಪಿಗಳು ಪೊಲೀಸ್ ಠಾಣೆಗೆ ಹೋಗಿ ಶರಣಾದ ಮಾಹಿತಿ ಬಂದಿತ್ತು. ಆ ರೀತಿ ಶರಣಾದ ಆರೋಪಿಗಳೆಂದರೆ ಫೈಸಲ್‌ಖಾನ್, ಮಹಮ್ಮದ್ ಶರೀಫ್ ಕರಂಬಳ್ಳಿ, ಅಬ್ದುಲ್ ಶುಕೂರ್.


ಅಕ್ರಮ್

### ಹಳೇ ಆರೋಪಿಗಳು

ಫೈಸಲ್ ಖಾನ್ ಹತ್ಯೆಗೀಡಾದ ಸೈಫುದ್ದೀನ್‌ನೊಂದಿಗೆ ಇದ್ದವನು. ಆತನ ಟ್ರಾನ್ಸ್‌ಪೋರ್ಟ್ ಬಿಸಿನೆಸ್‌ನ ವ್ಯವಹಾರ ನೋಡಿಕೊಳ್ಳುತ್ತಿದ್ದವನು. ಉಳಿದಿಬ್ಬರಾದ ಮಹಮ್ಮದ್ ಶರೀಫ್ ಮತ್ತು ಅಬ್ದುಲ್ ಶುಕೂರ್ ಆತನ ಬಸ್ಸಿನಲ್ಲಿ ಕೆಲಸ ಮಾಡುತ್ತಿದ್ದವರು. ಈ ಇಬ್ಬರು ಈ ಹಿಂದೆ ಸೈಫುದ್ದೀನ್‌ನೊಂದಿಗೆ ಕೊಲೆ ಪ್ರಕರಣ ವೊಂದರಲ್ಲಿ ಭಾಗಿಯಾದವರು. ಉತ್ತರ ಪ್ರದೇಶ ಮೂಲದವನಾಗಿದ್ದು, ಮುಂಬೈನಲ್ಲಿ ಲೇಡಿಸ್ ಬಾರ್ ನಡೆಸುತ್ತಿದ್ದ ವಸಿಷ್ಟ ಸತ್ಯನಾರಾಯಣ ಯಾದವ್ ಎಂಬಾತನನ್ನು ಕೊಲೆಗೈದು ಹಿರಿಯಡ್ಕ ಪೊಲೀಸ್ ಠಾಣಾ ವ್ಯಾಪ್ತಿಯ ಪಾಳು ಬಾವಿಯೊಂದರಲ್ಲಿ ಹಾಕಿದ್ದ ಪ್ರಕರಣದಲ್ಲಿ ಜೈಲು ಸೇರಿದ್ದರು. ಸುಮಾರು ಮೂರು ವರ್ಷಗಳ ಕಾಲ ಜೈಲಲ್ಲಿದ್ದು, ಪ್ರಕರಣದಿಂದ ಆರೋಪ ಮುಕ್ತಗೊಂಡು ಬಿಡುಗಡೆಯಾಗಿ ಸೈಫುದ್ದೀನ್‌ನೊಂದಿಗೆ ಇದ್ದವರು. ಇಂತಹ ಹಿನ್ನೆಲೆಯ ಇವರಿಬ್ಬರು ಸೈಫುದ್ದೀನ್‌ನ ಬಸ್ ವ್ಯವಹಾರ ನೋಡಿಕೊಳ್ಳುತ್ತಿದ್ದ ಫೈಸಲ್ ಖಾನ್‌ನೊಂದಿಗೆ ಸೇರಿಕೊಂಡು ಸೈಫುದ್ದೀನ್‌ನನ್ನು ಹತ್ಯೆಗೈದು ಪೊಲೀಸರಿಗೆ ಶರಣಾಗಿದ್ದರು. ಅವರನ್ನು ವಿಚಾರಣೆಗೆ ಒಳಪಡಿಸಿದ ಸಂದರ್ಭದಲ್ಲಿ ಹತ್ಯೆಗೆ ಸಂಚು ರೂಪಿಸಿದ್ದು ಉಡುಪಿಯವನೇ ಆಗಿದ್ದು, ಮಧ್ಯಪ್ರಾಚ್ಯ ದೇಶದಲ್ಲಿ ಉದ್ಯೋಗ ಮಾಡಿಕೊಂಡಿದ್ದ ಅಕ್ರಮ್ ಎಂದು ಖಚಿತವಾಗಿತ್ತು. ಆತನನ್ನು ಬಂಧಿಸುವ ಸಲುವಾಗಿ ಈಗಾಗಲೇ ಲುಕೌಟ್ ನೋಟೀಸು ಜಾರಿಗೊಳಿಸಲಾಗಿದೆ. ಈ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಫೈಸಲ್‌ಖಾನ್‌ನ ಹೆಂಡತಿ ರಿದಾ ಶಬ್‌ನಮ್‌ಳನ್ನು ಬಂಧಿಸಲಾಗಿದೆ.


ಕೃತ್ಯ ನಡೆದ ಸ್ಥಳ

### ಕೋಕಾ ಕಾಯ್ದೆ


ಸೈಫುದ್ದೀನ್‌ನನ್ನು ಹಂತಕರು ಯೋಜಿತ ರೀತಿಯಲ್ಲಿ ಹತ್ಯೆ ಮಾಡಿದ್ದರು. ಸೈಫುದ್ದೀನ್ ಎರಡು ಕೊಲೆ ಪ್ರಕರಣಗಳು ಸೇರಿದಂತೆ 20ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದವನು. ಸುಮಾರು 50 ಬಸ್‌ಗಳನ್ನು ಕುಂದಾಪುರ ಮಂಗಳೂರು ರಸ್ತೆಯಲ್ಲಿ ಓಡಾಡಿಸುತ್ತಿದ್ದ. ಆತನ ಬಸ್‌ಗಳಿಗೆ ಬೇರೆ ಬಸ್‌ನವರು ತೊಂದರೆ ಮಾಡಿದರೆ ಸ್ವತಃ ಹೋಗಿ ಗಲಾಟೆ ಮಾಡುತ್ತಿದ್ದ. ತಾನು ಸಂಚರಿಸುತ್ತಿದ್ದ ಕಾರಿನಲ್ಲಿ ಸದಾ ಮಾರಕಾಯುಧಗಳನ್ನು ಇಟ್ಟುಕೊಂಡಿದ್ದ. ಉಡುಪಿ ನಗರ ಠಾಣೆಯಲ್ಲಿ ಈತನ ಮೇಲೆ ರೌಡಿ ಶೀಟ್ ಇತ್ತು. ಈತನನ್ನು ವ್ಯವಸ್ಥಿತ ರೀತಿಯಲ್ಲಿ ಸಂಚು ಹೂಡಿ ಆತನ ಮಣಿಪಾಲದ ಮನೆಯಿಂದ ಆತನದೇ ಕಾರಿನಲ್ಲಿ ಬರಹೇಳಿ ಆತನ ಮನೆಯಲ್ಲಿಯೇ ಕತ್ತಿಯಿಂದ ಕಡಿದು ಕೊಲೆ ಮಾಡಿದಂತಹ ಪ್ರಕರಣವು ಸಂಘಟಿತ ಅಪರಾಧ ಎನ್ನುವ ನೆಲೆಯಲ್ಲಿ ತನಿಖೆ ನಡೆಸುತ್ತಿರುವಂತಹ ಮಲ್ಪೆ ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಹರಿರಾಮ್ ಶಂಕರ್ ಅವರ ಸೂಚನೆಯಂತೆ ಕೋಕಾ ಕಾಯ್ದೆಯನ್ನು ಹೇರಿದ್ದಾರೆ. ಈ ಕಾಯ್ದೆಯನ್ವಯ ಪ್ರಕರಣದ ತನಿಖೆಗೆ 180 ದಿನಗಳ ಅವಕಾಶ ಇದೆ. ಈಗಾಗಲೇ ಮೂರು ತಿಂಗಳು ಕಳೆದಿದ್ದು ಇನ್ನೂ ಮೂರು ತಿಂಗಳ ಕಾಲಾವಕಾಶ ಪೊಲೀಸರಿಗೆ ಲಭ್ಯವಾದಂತಾಗಿದೆ.


ಸೈಫುದ್ದೀನ್‌ನನ್ನು ಕೊಲೆ ಮಾಡಿದ ಹಂತಕರು

### ಹಿರಿಯ ಅಧಿ ಕಾರಿಗಳಿಗೆ ದೂರು

ಸೈಫುದ್ದೀನ್ ಹತ್ಯಾ ಪ್ರಕರಣದಲ್ಲಿ ಪೊಲೀಸರು ಹಂತಕರೊಂದಿಗೆ ಶಾಮೀಲಾಗಿದ್ದಾರೆ. ಸರಿಯಾದ ರೀತಿಯಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುವ ರೀತಿಯಲ್ಲಿ ತನಿಖೆ ನಡೆಸುತ್ತಿಲ್ಲ ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಇಡೀ ಪ್ರಕರಣದ ಸಂಚುಕೋರ ಅಕ್ರಮ್‌ನನ್ನು ಗಡಿಪಾರು ಮಾಡಿಸುವಂತಹ ಪ್ರಕ್ರಿಯೆಯನ್ನು ಪೊಲೀಸರು ನಡೆಸುತ್ತಿಲ್ಲ. ಪೊಲೀಸರ ತನಿಖೆಯ ಪ್ರತಿಯೊಂದು ಚಲನವಲನಗಳು ಅಕ್ರಮ್‌ಗೆ ಗೊತ್ತಾಗುತ್ತಿದೆ ಎಂದು ಸೈಫುದ್ದೀನ್‌ನ ಸಹೋದರಿ ಸಾಯಿರಬಾನು ಅವರು ಜಿಲ್ಲಾ ಎಸ್ಪಿ, ಪಶ್ಚಿಮ ವಲಯದ ಐಜಿಪಿ, ಡಿಜಿಪಿ ಹಾಗೂ ರಾಜ್ಯ ಗೃಹ ಇಲಾಖೆಗೆ ದೂರು ನೀಡಿದ್ದರು. ಈ ದೂರನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಎಸ್ಪಿ ಹರಿರಾಮ್ ಶಂಕರ್ ಅವರು ಆರೋಪಿಗಳ ಮೇಲೆ ಕೋಕಾ ಕಾಯ್ದೆ ಹೇರುವ ಮೂಲಕ ಬಿಸಿ ಮುಟ್ಟಿಸಿದ್ದಾರೆ. ಕೋಕಾ ಕಾಯ್ದೆ ಕೊಲೆ ಪ್ರಕರಣಕ್ಕೆ ಅನ್ವಯವಾದರೆ ಆರೋಪಿಗಳಿಗೆ ಜಾಮೀನು ಸಿಗುವ ಸಾಧ್ಯತೆಗಳು ಅತ್ಯಂತ ವಿರಳ. ವಿದೇಶದಲ್ಲಿ ತಲಮರೆಸಿಕೊಂಡಿರುವ ಪ್ರಮುಖ ಆರೋಪಿ ಅಕ್ರಮ್‌ನನ್ನು ಗಡಿಪಾರು ಮಾಡಿಸಿಕೊಳ್ಳುವ ಬಗ್ಗೆ ಪ್ರಯತ್ನಗಳು ಮುಂದುವರಿದಿದೆ.





ರಿದಾ ಶಬ್‌ನಮ್

# ಲವ್‌ಸೆಕ್ಸ್ ದೋಖಾ; ಯುವತಿ ಜೊತೆ ಸಲುಗೆ ಬೆಳೆಸಿ 37 ಲಕ್ಷ ವಂಚನೆ!

ಪ್ರೀತಿ ಪ್ರೇಮಮದುವೆ ಹೆಸರಿನಲ್ಲಿ ಯುವತಿಯಿಂದ ಲಕ್ಷಲಕ್ಷ ಹಣ ಪಡೆದು ವಂಚಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಶುಭಾಂಶು ಶುಕ್ಲಾ ಬಂಧಿತ ಆರೋಪಿ. ಮೂಲತಃ ಹರಿಯಾಣ ರಾಜ್ಯದ ಮೂಲದ ಯುವಕ. ಈತ ಕಳೆದ ನಾಲ್ಕೈದು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದು, ಟಿ.ದಾಸರಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ಈತನ ಐಷೈ ಜೀವನಕ್ಕೆ





ಮನಸೋತ ಯುವತಿಯರು ವಂಚನೆ ಬಳಿಕ ಸತ್ಯ ಗೊತ್ತಾದ ಮೇಲೆ ಪೊಲೀಸ್ ಠಾಣಾ ಮೆಟ್ಟಿಲೇರಿದ್ದಾರೆ. ಆರೋಪಿಗೆ ಸೂಕ್ತ ಶಿಕ್ಷೆಗೆ ಆಗ್ರಹಿಸಿದ್ದಾರೆ. ಬಾಲಕಿಯೊಬ್ಬಳ ಜೊತೆ ಈತ ಸ್ನೇಹ ಬೆಳೆಸಿಕೊಂಡಿದ್ದ. ಆಕೆ ಮೂಲಕ ಕುಟುಂಬಸ್ಥರ ಪರಿಚಯವಾಗಿ ಮನೆಮಗನಂತೆ ನಾಟಕವಾಡಿದ್ದ. ನಂತರ ಬಾಲಕಿಯ ಸಹೋದರಿಯನ್ನು ಪ್ರೀತಿ ಬಲೆಯಲ್ಲಿ ಬೀಳಿಸಿ ಖಾಸಗಿ ಫ್ಲಾಟ್‌ನಲ್ಲಿರಿಸಿ ಲಿವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದ. ಯುವತಿ ಬಳಿ ಲಕ್ಷಲಕ್ಷ ಹಣ ಪಡೆದು ವಂಚನೆ ಕೂಡ ಮಾಡಿದ್ದಾನೆ.

ಈ ನಡುವೆ ಶುಭಾಂಶುಗೆ ಬೇರೆ ಮದುವೆಯಾಗಿದ್ದ ಬಗ್ಗೆ ಯುವತಿಗೆ ತಿಳಿಯತ್ತೆ. ಈ ವಿಚಾರವಾಗಿ ಪ್ರಶ್ನೆ ಮಾಡಿದ್ದಕ್ಕೆ, ಅವಳಿಗೆ ಡಿವೋರ್ಸ್ ಕೊಡುವ ನೆಪ ಹೇಳಿ, ಯುವತಿ ಬಳಿ ಹಣ ಪಡೆದು ಪ್ರತಿನಿತ್ಯ ಚಿತ್ರಹಿಂಸೆ ನೀಡುತ್ತಿದ್ದ. ಶುಭಾಂಶು ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲ್ಲಮ್ಮ ಗಂಡನನ್ನು ಮರ್ಡರ್ ಮಾಡಿದ್ದೇಕೆ?

ಶೀಲದ ಬಗ್ಗೆ ಶಂಕಿಸುತ್ತಿದ್ದ ಗಂಡನನ್ನು ಪತ್ನಿಯೇ ವೇಲ್‌ನಿಂದ ಕುತ್ತಿಗೆಗೆ ಬಿಗಿದು ಹತ್ಯೆ ಮಾಡಿದ ಘಟನೆ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕು ಹಲಗಣಿ ಸಮೀಪದ ತೋಟದಲ್ಲಿ ಸಂಭವಿಸಿದೆ.



ಕೊಲೆಗೀಡಾದ ಶಂಕಪ್ಪ ಕುರುಬರ

ಕೊಲೆಗೀಡಾದ ವ್ಯಕ್ತಿಯನ್ನು ಶಂಕಪ್ಪ ವಿಠಲ ಕುರುಬರ(32) ಎಂದು ಗುರತಿಸಲಾಗಿದೆ. ಆರೋಪಿ ಮಲ್ಲಮ್ಮಳನ್ನು ಬಂಧಿಸಲಾಗಿದ್ದು, ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಘಟನೆ ವಿವರ**

ಮೂಲತಃ ಸಂಗಾಪುರ ಗ್ರಾಮದ ಶಂಕಪ್ಪನ ಮದುವೆ ಮಮದಾಪುರದ ಮಲ್ಲಮ್ಮನೊಂದಿಗೆ ಆಗಿತ್ತು. ನಾಲ್ಕಾರು ವರ್ಷ ಗಂಡನೊಂದಿಗೆ ಸಂಸಾರ ಮಾಡಿದ್ದಳು. ಈ ದಂಪತಿಗೆ ಆರತಿ ಎಂಬ ಮಗಳಿದ್ದಾಳೆ. ಆದರೆ ಕೆಲವು ವರ್ಷಗಳ

**ವಿಜಯಪುರ**
**ರಾಜೀವ್ ಬೈರಿ**

ಹಿಂದೆ ಗಂಡನೊಂದಿಗೆ ಜಗಳ ಮಾಡಿ ತವರು ಮನೆಗೆ ಹೋಗಿದ್ದಳು.

ಎರಡು ತಿಂಗಳ ಹಿಂದೆ ಹಿರಿಯರು ಬುದ್ಧಿ ಹೇಳಿ ದಂಪತಿಯನ್ನು ಒಂದು ಮಾಡಿದ್ದರು. ಶಂಕಪ್ಪ ತನ್ನ ಸಂಬಂಧಿಕರಿಗೆ ಸೇರಿದ ಹಲಗಣಿ ಸಮೀಪದ ಜಮೀನಿನಲ್ಲಿ ತಗಡಿನ ಶೆಡ್ ಹಾಕಿಕೊಂಡು ಪತ್ನಿ ಹಾಗೂ ಮಗಳೊಂದಿಗೆ ವಾಸಿಸುತ್ತಿದ್ದ.

ಕೆಲವು ದಿನಗಳಿಂದ ಪತಿ ಪತ್ನಿಯ ನಡುವೆ ಜಗಳವಾಗಿತ್ತು. ಗಂಡ ತನ್ನ ಮೇಲೆ ಸಂಶಯ ಹೊಂದಿದ್ದಾನೆಂದು ಮಲ್ಲಮ್ಮ ಕೋಪಗೊಂಡಿದ್ದಳು. ದಿನಾಂಕ 12ರಂದು ರಾತ್ರಿ ಮಲಗಿರುವಾಗಿ ತನ್ನ ವೇಲ್‌ನಿಂದ ಗಂಡನ ಕುತ್ತಿಗೆಗೆ ಬಿಗಿದು ಹತ್ಯೆ ಮಾಡಿದ್ದಾಳೆ ಎನ್ನಲಾಗಿದೆ.

ಬೆಳಿಗ್ಗೆ ಆತನ ಸಹೋದರ ಮನೆಗೆ ಹೋಗಿ ನೋಡಿದಾಗ ಆತ ಹಾಸಿಗೆಯಲ್ಲಿ ಶವವಾಗಿ ಬಿದ್ದಿದ್ದು ಗಮನಕ್ಕೆ ಬಂದಿದೆ. ತಾಯಿ ತನ್ನ ತಂದೆಯನ್ನು ಹತ್ಯೆ ಮಾಡಿದ್ದನ್ನು ನೋಡಿರುವುದಾಗಿ ಮಗಳು ಆರತಿ ಹೇಳಿದ್ದಾಳೆ.

**ಎಸ್‌ಪಿ ಕಚೇರಿ ಎದುರು ಪ್ರತಿಭಟನೆ**

ಹಲಗಣಿ ತೋಟದಲ್ಲಿ ಕೊಲೆಯಾದ ಶಂಕಪ್ಪನ ಸಂಬಂಧಿಕರು ಹಾಗೂ ಅಡವಿ ಸಂಗಾಪುರದ ಗ್ರಾಮಸ್ಥರು ಸೋಮವಾರ ಜಿಲ್ಲಾ ಪೊಲೀಸ್ ಅಕ್ಷಕರ ಕಚೇರಿ ಎದುರು ಪ್ರತಿಭಟನೆ ನಡೆಸಿ ಈ ಪ್ರಕರಣದಲ್ಲಿ ಪತ್ನಿ ಮಲ್ಲಮ್ಮನೊಂದಿಗೆ ಇನ್ನೂ ನಾಲ್ವರು ಶಾಮೀಲಾಗಿದ್ದಾರೆ. ಅವರನ್ನು ಬಂಧಿಸಿ ನ್ಯಾಯ ದೊರಕಿಸಕೊಡಬೇಕೆಂದು ಪ್ರತಿಭಟನೆ ನಡೆಸಿದರು.



ಆರೋಪಿ ಮಲ್ಲಮ್ಮ

ಮಲ್ಲಮ್ಮ ಗ್ರಾಮದ ನಾಲ್ವರು ವ್ಯಕ್ತಿಗಳ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದಳು. ಅದನ್ನು ಪ್ರಶ್ನಿಸಿದ್ದಕ್ಕಾಗಿಯೇ ಅವರೊಂದಿಗೆ ಸೇರಿ ಗಂಡನ ಕೊಲೆ ಮಾಡಿದ್ದಾಳೆ. ಆ ಘಟನೆಯನ್ನು ನೋಡಿರುವ 8 ವರ್ಷದ ಮಗಳು ಆರತಿ ನೋಡಿದ್ದಾಳೆ.

ಕೊಲೆಯಾದ ದಿನ ಬಬಲೇಶ್ವರ ಪೊಲೀಸರು ಆಕೆಯೊಂದಿಗೆ ಇನ್ನೂ ನಾಲ್ವರನ್ನು ಠಾಣೆಗೆ ವಿಚಾರಣೆಗೆ ಕರೆಸಿದ್ದರು. ಯಾವ ಪ್ರಭಾವಕ್ಕೆ ಒಳಗಾಗಿಯೋ ಏನೋ ಆ ನಾಲ್ವರನ್ನು ಬಿಟ್ಟಿದ್ದಾರೆ. ಕೂಡಲೇ ಅವರನ್ನು ಬಂಧಿಸಿ ಕ್ರಮ ಕೈಗೊಳ್ಳುವಂತೆ ಮೃತ ಶಂಕಪ್ಪನ ತಾಯಿ ನಿಂಬೆವ್ವ ವಿಠಲ ಕುರುಬರ ಹಾಗೂ ಗ್ರಾಮಸ್ಥರು ಜಿಲ್ಲಾ ಪೊಲೀಸ್ ಅಕ್ಷಕರಿಗೆ ಮನವಿ ಸಲ್ಲಿಸಿದ್ದಾರೆ.





# ದಾರಿ ತಪ್ಪಿದ ಅಪ್ರಾಪ್ತ ಮಕ್ಕಳಿಗೆ ಮನೆಯ ಹಾದಿ ತೋರಿಸಿದ ಪೊಲೀಸರು

11 ☞

ದೆಹಲಿಗೆ ತೆರಳಿ ಮೀರತ್‌ಗೆ ಕ್ಯಾಬ್ ಮೂಲಕ ಹೋಗಿ ಎರಡು ಗಂಟೆಗಳ ಕಾಲ ರೈಲಿನ ಪ್ರತಿಯೊಂದು ಭೋಗಿಯನ್ನು ಶೋಧಿಸಿ ಬಾಲಕಿಯನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸಿದರು.

ಪ್ರಕರಣ 2 ಮತ್ತು 3ರಲ್ಲಿ ಶಾಲೆಗೆಂದು ಹೋದ ಇಬ್ಬರು ಬಾಲಕಿಯರು ನಾಪತ್ತೆ ಕೋಲಾರ ತಾಲ್ಲೂಕು ನರಸಾಪುರ ಗ್ರಾಮದ ಶರಣ್ಯ ಮತ್ತು ದೇವಿ ಎನ್ನುವವರು ನರಸಾಪುರದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದು ಶಾಲೆಗೆಂದು ಹೋದವರು ಶಾಲೆಗೂ ಹೋಗದೆ ಕಣ್ಮರೆಯಾಗಿದ್ದರು. ಸಂಜೆ ಮನೆಗೆ ಬಾರದ ಮಕ್ಕಳಿಗಾಗಿ ಹುಡುಕಾಡಿದ ಪೋಷಕರು ಕೋಲಾರ ಮಹಿಳಾ ಪೊಲೀಸ್ ಟಾಣೆಯಲ್ಲಿ ದೂರು ನೀಡಿದರು. ಠಾಣೆಯಲ್ಲಿ ಮೊ.ಸಂ. 109/2025 ಮತ್ತು 110/2025 ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು ಕಾರ್ಯ ಪ್ರವೃತ್ತರಾದರು. ಬಾಲಕಿಯರಲ್ಲಿ ಒಬ್ಬರ ಬಳಿ ಮೊಬೈಲ್ ಫೋನ್ ಇದ್ದುದರ ಸ್ಥಳದ ಸಂಪರ್ಕವನ್ನು ಸಾಧಿಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಸಹಕಾರದಿಂದ ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಇಬ್ಬರು ಬಾಲಕಿಯರನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸಲಾಯಿತು. ಪ್ರಕರಣ



ಮುಳಬಾಗಿಲಿನ ಸಹೋದರಿಯರನ್ನು ರಕ್ಷಿಸಿರುವ ಪೊಲೀಸ್ ಅಧಿಕಾರಿಗಳು

4ರಲ್ಲಿ ರಾಮಸಂದ್ರದ ನಿವಾಸಿ ಶ್ರೀಮತಿ ವೆಂಕಟಮ್ಮಮನವರ ಮೊಮ್ಮಗ ನಾಪತ್ತೆಯಾಗಿದ್ದು, ಮೊ.ಸಂ. 111/2025ರ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಬಾಲಕ ಹೈದರಾಬಾದ್‌ನಲ್ಲಿ ಇರುವ ಬಗ್ಗೆ ಮಾಹಿತಿ ಕಲೆ ಹಾಕಿದ ಪೊಲೀಸರು ತಕ್ಷಣ ಹೈದರಾಬಾದ್‌ನ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿ ಬಾಲಕನನ್ನು ಸುರಕ್ಷಿತವಾಗಿ ಪತ್ತೆ ಮಾಡಿ ಕೋಲಾರಕ್ಕೆ ಕರೆತಂದು ಪೋಷಕರಿಗೆ ಒಪ್ಪಿಸಿದರು. ಪ್ರಕರಣ 5ರಲ್ಲಿ ಮುಳಬಾಗಿಲು ನಗರದ ನಿವಾಸಿಯೊಬ್ಬರ 14 ಮತ್ತು 11 ವರ್ಷದ ಇಬ್ಬರು ಪುತ್ರಿಯರು ಶಾಲೆಗೆ ಹೋಗಿ ಬರುವುದಾಗಿ ಹೇಳಿ ಹೋದರು. ಆದರೆ ಬಾಲಕಿಯರು ಶಾಲೆಗೆ ಬಾರದಿರುವುದನ್ನು ನೋಡಿದ ಆಡಳಿತ ಮಂಡಳಿಯು ಪೋಷಕರಿಗೆ ಮಾಹಿತಿ ನೀಡಿದರು. ಮಕ್ಕಳಿಗಾಗಿ ಹುಡುಕಾಟ ನಡೆಸಿದರು. ಆದರೆ ನಾಪತ್ತೆಯಾದ ಕಾರಣ ಮುಳಬಾಗಿಲು ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಕಾರ್ಯಪ್ರವೃತ್ತರಾದ ಪೊಲೀಸರು, ಮೊಬೈಲ್ ಟ್ರ್ಯಾಕಿಂಗ್ ಮೂಲಕ ಹುಡುಕಾಟ ನಡೆಸಿದ್ದು, ಮಕ್ಕಳ ಹತ್ತಿರ ಇದ್ದ ಮೊಬೈಲ್ ಫೋನ್ ಬೆಂಗಲೂರು ತಲುಪುವವರೆಗೂ ಸ್ವಿಚ್ ಆಫ್ ಆಗಿತ್ತು. ನಂತರ ಬೆಂಗಳೂರಿನ ಕಾಡುಬಿಸನಹಳ್ಳಿಯಲ್ಲಿ ಮೊಬೈಲ್ ಫೋನ್ ಆನ್ ಆಗಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಮಾರತ್‌ಹಳ್ಳಿ ಪೊಲೀಸ್ ಠಾಣೆ ಸಿಬ್ಬಂದಿ ಸಹಕಾರದಿಂದ ಮಕ್ಕಳನ್ನು ಸುರಿಕ್ಷತವಾಗಿ ಪತ್ತೆ ಮಾಡಿ ಪೋಷಕರಿಗೆ ಸುರಕ್ಷಿತವಾಗಿ ಒಪ್ಪಿಸಿದ್ದಾರೆ.



ಪತ್ತೆಯಾದ ನರಸಾಪುರದ ಶರಣ್ಯ, ದೇವಿ

ಇವೆಲ್ಲ ಯಶಸ್ವಿ ಕಾರ್ಯಾಚರಣೆಯು ಎಸ್ಪಿ ಬಿ. ನಿಖಿಲ್‌ರವರ ಮಾರ್ಗದರ್ಶನದಲ್ಲಿ ಹಾಗೂ ಹೆಚ್ಚುವರಿ ಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್‌ರವರ ನೇತೃತ್ವದಲ್ಲಿ ಕೋಲಾರ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಿ. ಶಂಕರಾಚಾರ್, ಪಿಎಸ್‌ಐಗಳಾದ ಶ್ರೀಮತಿ ಸರಸ್ವತಮ್ಮ ಮತ್ತು ಶ್ರೀಮತಿ ಸುನಿತಾ, ಸಿಬ್ಬಂದಿ ವರ್ಗದವರಾದ ಬಿ. ಶ್ರೀನಿವಾಸಯ್ಯ, ರಮೇಶ್, ಎಸ್.ಎನ್. ದೇವರಾಜ್, ಮಂಜುನಾಥ್, ಕೆ. ರಾಜೇಶ್, ಅರುಣ್‌ಮೂರ್ತಿ, ನಿಂಗಣ್ಣ, ರೋಜಾ, ಭಾರತಿ, ಮುರಳಿ, ಶ್ರೀನಾಥ್ ಮುಂತಾದವರು ಯಶಸ್ವಿಯಾಗಿ ಮುಗಿಸಿದ್ದಾರೆ. ಮಾನವೀಯತೆ ಮತ್ತು ಶ್ರದ್ಧೆಯ ಸಂಕೇತವಾದ ಈ ಐದು ಪ್ರಕರಣಗಳಲ್ಲಿ ಅಪ್ರಾಪ್ತರನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸುವ ಮೂಲಕ ಪೊಲೀಸ್ ಇಲಾಖೆ ತನ್ನ ಶ್ರದ್ಧೆ, ವೇಗ, ಮಾನವೀಯತೆ ಮತ್ತು ಜವಾಬ್ದಾರಿಯನ್ನು ತೋರಿಸಿದೆ ಎಂದು ಸಾರ್ವಜನಿಕರು ಮತ್ತು ಪೋಷಕರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಮನೆ ಬಿಟ್ಟು ಊರು ಸುತ್ತಲು ಹೋಗಿ ಆತಂಕ ಸೃಷ್ಟಿಸಿದ್ದ ಮಕ್ಕಳನ್ನು ಪತ್ತೆಹಚ್ಚಿ ಪೋಷಕರ ಮಡಿಲಿಗೆ ತಲುಪಿಸುವಲ್ಲಿ ನಮ್ಮ ಜೊತೆಗೆ ಮಥುರ ಮತ್ತು ದೆಹಲಿ ರೈಲ್ವೆ ಪೊಲೀಸರು ಹಾಗೂ ಬೆಂಗಳೂರಿನ ಉಪ್ಪಾರಪೇಟೆ ಠಾಣೆಯ ಮಾರುತಿ, ಹರೀಶ್ ಮತ್ತು ಹರೀಶ್‌ಕುಮಾರ್ ನೀಡಿದ ಸಹಕಾರ ಶ್ಲಾಘನೀಯವಾದುದು ಎಂದು ಎಸ್ಪಿ ಬಿ. ನಿಖಿಲ್ ತಿಳಿಸಿದ್ದಾರೆ.

# ಸ್ವಯಂಘೋಷಿತ ಹಠ ಯೋಗಿ ಲೋಕೇಶ್ವರನಿಗೆ 35 ವರ್ಷ ಕಠಿಣ ಶಿಕ್ಷೆ!

7 ☞
ಬಾಗಲಕೋಟ ಮಾರ್ಗವಾಗಿ ಮಂತ್ರಾಲಯಕ್ಕೆ ಕರೆದೊಯ್ದು ಸುತ್ತಾಡಿಸಿದನು.

**ಲಾಡ್ಜ್‌ನಲ್ಲಿ ಅಪ್ರಾಪ್ತೆಯ ಮೇಲೆ ಅತ್ಯಾಚಾರ...**

ಮೇ ತಿಂಗಳ 13 ಮತ್ತು 14ನೇ ತಾರೀಕಿನಂದು ಮಂತ್ರಾಲಯದ ಲಾಡ್ಜ್‌ನಲ್ಲಿ ಅಪ್ರಾಪ್ತೆಯ ಇಚ್ಛೆಗೆ ವಿರುದ್ಧವಾಗಿ ಬಲವಂತವಾಗಿ ಅವಳ ಮೇಲೆ ನಿರಂತರ ಅತ್ಯಾಚಾರವನ್ನು ಎಸಗಿದ್ದ ಲೋಕೇಶ್ವರ ಸ್ವಾಮಿ. ಅಕ್ಷರಶಃ ಆಕೆಯನ್ನು ಮೃಗದಂತೆ ಕಿತ್ತು ತಿಂದಿದ್ದನು. ಮುಂದೆ ಬಾಗಲಕೋಟೆ ನಗರಕ್ಕೆ ಬಂದು 15ನೇ ತಾರೀಕಿನಂದು ಲಾಡ್ಜ್‌ನಲ್ಲಿ ಮತ್ತೇ ಅಮಾನುಷವಾದ ರೀತಿಯಲ್ಲಿ ಅತ್ಯಾಚಾರ ಎಸಗಿದ್ದಾನೆ. ಅಪ್ರಾಪ್ತೆಯು ಪರಿ... ಪರಿಯಾಗಿ ಬೇಡಿಕೊಂಡು ಕೈಕಾಲು ಬಿದ್ದರೂ ಕರಗದ ಕಟುಕ ಲೋಕೇಶ್ವರ ಸ್ವಾಮಿ.

**ಮಹಾಲಿಂಗಪೂರದಲ್ಲಿ ಬಿಟ್ಟು ಹೋದ...**

ಅಪ್ರಾಪ್ತೆ ಎರಡು-ಮೂರು ದಿನಗಳ ಕಾಲ ಈ ಕಪಟ ಕಾಮುಕ ಸ್ವಾಮೀಜಿಯು ನೀಡಿದ ಲೈಂಗಿಕ ಚಿತ್ರಹಿಂಸೆ ತಡೆಯಲಾರದೇ ಗೋಳಿಟ್ಟಳು. ದಿನಾಂಕ 16-05-2025ರಂದು ಮಹಾಲಿಂಗಪೂರದ ಬಸ್ ನಿಲ್ದಾಣದ ಹತ್ತಿರ ಅಪ್ರಾಪ್ತೆಯನ್ನು ಕಾರಿನಲ್ಲಿ ತಂದು ಬಿಟ್ಟ ಲೋಕೇಶ್ವರ ಸ್ವಾಮಿ 'ಸದರಿ ಅತ್ಯಾಚಾರದ ವಿಷಯವನ್ನು ಅದ್ಯಾರ ಮುಂದಾದರೂ ಹೇಳಿದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ' ಎಂದು ಬೆದರಿಕೆ ಹಾಕಿ ಅಲ್ಲಿಂದ ಪರಾರಿಯಾಗಿಬಿಟ್ಟ ಕಾಮುಕ.

**ಪೊಲೀಸರಿಗೆ ದೂರು...**

ಇತ್ತ ತೀರಾ ಅಸ್ವಸ್ಥಳಾದ ಅಪ್ರಾಪ್ತೆ ಹೇಗೋ ಮಾಡಿ ತನ್ನ ತಂದೆತಾಯಿಗಳನ್ನು ಕೂಡಿಕೊಂಡಳು. ಅದುವರೆಗೆ ರಾಮ ಮಂದಿರ ಮಠದಲ್ಲಿ ಇರಬೇಕೆಂದು ತಂದೆತಾಯಿ ತಿಳಿದುಕೊಂಡಿದ್ದರು. ಅಪ್ರಾಪ್ತೆ ಕಳೆದ ಮೂರು ದಿನಗಳಿಂದ ಲೋಕೇಶ್ವರ ಸ್ವಾಮಿಜಿ ತನ್ನ ಮೇಲೆ ನಿರಂತರವಾಗಿ ಅತ್ಯಾಚಾರ ಮಾಡಿದ್ದನ್ನು ಹೇಳಿ ತಂದೆ-ತಾಯಿಗಳನ್ನು ಬಿಗಿದಪ್ಪಿಕೊಂಡು ಗೋಳಿಟ್ಟಳು. ತಂದೆ-ತಾಯಿ ತಮ್ಮ ಮಗಳಿಗಾದ ಗತಿ ಕಂಡು ಖಿನ್ನರಾದರು. ಬಾಗಲಕೋಟ ಮಹಿಳಾ ಪೊಲೀಸ್ ಠಾಣೆಗೆ ತೆರಳಿ ಆರೋಪಿ ಲೋಕೇಶ್ವರ ಸ್ವಾಮಿಯ ವಿರುದ್ಧ ದೂರು ನೀಡಿ ಕ್ರಮ ಕೈಗೊಳ್ಳಲು ವಿನಂತಿಸಿದ್ದರು. ಅದಾಗಲೇ ಮೇಕಳಿ ಗ್ರಾಮದಲ್ಲಿ ರಾಮ ಮಂದಿರದ ವಿರುದ್ಧ ಆಕ್ರೋಶ ಭುಗಿಲೆದ್ದಿತ್ತು. ಲೋಕೇಶ್ವರ ಸ್ವಾಮಿಜಿ ವಿರುದ್ಧ ಛೀ... ಥೂ ಘೋಷಣೆ ವ್ಯಾಪಕವಾಗಿದ್ದವು. ಬಾಗಲಕೋಟೆ ಪೊಲೀಸರು ಮೂಡಲಗಿ ಪೊಲೀಸ್ ಠಾಣೆಗೆ ಪ್ರಕರಣವನ್ನು ವರ್ಗಾಯಿಸಿದ್ದರು. ಮೂಡಲಗಿ ಪಿಎಸ್‌ಐ ರಾಜು ಪೂಜೇರಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಿಪಿಐ ಶ್ರೀಶೈಲ ಬ್ಯಾಕೋಡ, ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎಸ್.ಎನ್., ರಾಮನಗೌಡ ಬಸರಗಿ, ಎಸ್ಪಿ ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಕಾರ್ಯಪ್ರವೃತ್ತರಾದರು.



ಸರಕಾರಿ ಅಭಿಯೋಜಕ ಎಲ್.ವ್ಹಿ. ಪಾಟೀಲ

**ಸಿಪಿಐ ಶ್ರೀಶೈಲ ಬ್ಯಾಕೋಡ ಕಾರ್ಯಾಚರಣೆ...**

ಮೂಡಲಗಿಯ ಚತುರ ಮತ್ತು ಧಾಡಸಿ ಸಿಪಿಐ ಶ್ರೀಶೈಲ ಬ್ಯಾಕೋಡ ಅವರು ಅಪ್ರಾಪ್ತೆಯ ಅತ್ಯಾಚಾರ ಪ್ರಕರಣವನ್ನು ಕೈಗೆತ್ತಿಕೊಂಡು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿಗಳಾದ ಎಸ್ಪಿಗಳಾದ ಶ್ರುತಿ ಎಸ್.ಎನ್., ರಾಮನಗೌಡ ಬಸರಗಿ, ಡೈನಾಮಿಕ ಎಸ್ಪಿ ಭೀಮಾಶಂಕರ ಗುಳೇದ ಅವರ ನಿರ್ದೇಶನದಲ್ಲಿ ಕಾರ್ಯಾಚರಣೆಗೆ ಇಳಿದರು. ಹಲಾಲುಕೋರ ಸನ್ಯಾಸಿ ಲೋಕೇಶ್ವರ ಸ್ವಾಮೀಜಿ ತಲೆಮರೆಸಿಕೊಳ್ಳದಂತೆ ಚಕ್ರವ್ಯೂಹ ರಚಿಸಿದ ಸಿಪಿಐ ಶ್ರೀಶೈಲ ಬ್ಯಾಕೋಡ ಮತ್ತು ಪಿಎಸ್‌ಐ ರಾಜು ಪೂಜೇರಿ ತಮಗಿರುವ ಮಾಹಿತಿ ಮತ್ತು ಖಚಿತವಾದ ಸಂದೇಹದ ಮೇಲೆ ದಿನಾಂಕ 24-05-2025ರಂದು ಮಹಾಲಿಂಗಪೂರದ ಪರಿಸರದಲ್ಲಿ ಲೋಕೇಶ್ವರ ಸ್ವಾಮಿಯನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದಾಗ ಆತ ತನ್ನ ಕೃತ್ಯ ಒಪ್ಪಿಕೊಂಡನು. ಈತ ಅಪ್ರಾಪ್ತೆ ಜತೆಗೆ ಲಾಡ್ಜ್‌ನಲ್ಲಿದ್ದ ಎಲ್ಲಾ ಸಿಸಿಟಿವಿ ಫುಟೇಜ್ ವಶಪಡಿಸಿಕೊಂಡು, ಪೂರಕ ಸಾಕ್ಷಿಗಳ ಹೇಳಿಕೆಯೊಂದಿಗೆ ತನಿಖಾಧಿಕಾರಿ ಶ್ರೀಶೈಲ ಬ್ಯಾಕೋಡ ಅವರು ಪ್ರಬಲವಾದ ದೋಷಾರೋಪಣೆ ಪತ್ರದೊಂದಿಗೆ ಕಾಮುಕ ಸ್ವಾಮಿಯನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ಆತನನ್ನು ಜೈಲಿಗೆ ಅಟ್ಟಲಾಯಿತು. ಇತ್ತ ಮೇಕಳಿ ಗ್ರಾಮಸ್ಥರು ರೊಚ್ಚಿಗೆದ್ದು ರಾಮ ಮಂದಿರವನ್ನು ನೆಲಸಮಗೊಳಿಸಿದರು.

**ಅತ್ಯಾಚಾರಿಗೆ 35 ವರ್ಷ ಶಿಕ್ಷೆ...**

ಇತ್ತೀಚಿಗೆ ಲೋಕೇಶ್ವರ ಸ್ವಾಮೀಜಿ ಅಪ್ರಾಪ್ತೆಯ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣವು ಬೆಳಗಾವಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ಶೀಘ್ರಗತಿ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಎಂ. ಪುಷ್ಪಲತಾ ಅವರು ವಿಚಾರಣೆ ಕೈಗೊಂಡಿದ್ದರು. ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ್ದ ಪ್ರಕರಣ ಸಾಬೀತಾಗಿದ್ದರಿಂದ ಆರೋಪಿ ಲೋಕೇಶ್ವರ ಶಾಬಣ್ಣ ಜಂಭಗಿ ಈತನಿಗೆ 35 ವರ್ಷಗಳ ಕಠಿಣ ಶಿಕ್ಷೆ, 1 ಲಕ್ಷ ರೂ.ಗಳ ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ನೊಂದ ಅಪ್ರಾಪ್ತೆಗೆ ಜಿಲ್ಲಾ ಕಾನೂನು ಪ್ರಾಧಿಕಾರದಿಂದ 4 ಲಕ್ಷ ರೂ. ಪರಿಹಾರ ಧನ ಪಡೆಯಲು ನ್ಯಾಯಾಲಯ ಆದೇಶಿಸಿದೆ. ಸರಕಾರದ ಪರವಾಗಿ ಅಭಿಯೋಜಕರಾಗಿ ಎಲ್.ವ್ಹಿ. ಪಾಟೀಲ ಸಮರ್ಥವಾಗಿ ವಾದ ಮಂಡಿಸಿದ್ದರು. ಕೊನೆಗೂ ಅತ್ಯಾಚಾರಿ ಸ್ವಯಂ ಘೋಷಿತ ಹಠ ಯೋಗಿಗೆ ನ್ಯಾಯಾಲಯ ತಕ್ಕ ಶಿಕ್ಷೆ ನೀಡಿದ್ದು ಜನತೆ ನಿಟ್ಟುಸಿರು ಬಿಡುವಂತಾಗಿದೆ. ☯

# ಮೈಸೂರಿನಲ್ಲಿ ಮೂವರನ್ನು ಬಲಿ ಪಡೆದ ಸ್ಫೋಟ...

4 ☞
ಗ್ರಾಮದ ಸಲೀಂ (40) ಅರಮನೆ ಬಳಿ ಸೈಕಲ್‌ನಲ್ಲಿ ಹೀಲಿಯಂ ಬಲೂನ್ ಮಾರುತ್ತಿದ್ದರು. ರಾತ್ರಿ 8.30ಕ್ಕೆ ಸಿಲಿಂಡರ್ ಸ್ಫೋಟಗೊಂಡು ಸಿಡಿದ ಲೋಹದ ಭಾಗಗಳು ಸ್ಥಳದಲ್ಲಿದ್ದವರ ಮೇಲೆ ರಭಸವಾಗಿ ಹೊಡೆದು



ಗಂಭೀರ ಗಾಯಗಳಾಗಿದ್ದವು. ಈ ವೇಳೆ ಸಲೀಂ ಸ್ಥಳದಲ್ಲೇ ಮೃತಪಟ್ಟಿದ್ದರು. ಘಟನೆಗೆ ಸಂಬಂಧಿಸಿ ಮೃತ ಸಲೀಂ ವಿರುದ್ಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಲಷ್ಕರ್ ಮೊಹಲ್ಲಾದ ಶರೀಫ್ ಲಾಡ್ಜ್‌ನಲ್ಲಿ ಅವರೊಂದಿಗೆ ವಾಸ್ತವ್ಯವಿದ್ದ ಅರ್ಬಾಜ್, ರಿಜ್ವಾನ್, ರಾಜು ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ.

ಘಟನಾ ಸ್ಥಳಕ್ಕೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಯ ಮೂವರು ಪ್ರತಿನಿಧಿಗಳು ಭೇಟಿ ನೀಡಿ ಮಾಹಿತಿ ಪಡೆದು ತೆರಳಿದ್ದಾರೆ. ಜತೆಗೆ ಮೃತ ಸಲೀಂ ಜತೆಗೆ ಲಾಡ್ಜ್‌ನಲ್ಲಿ ಉಳಿದ ಸ್ನೇಹಿತರುಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಶುಕ್ರವಾರ ಘಟನಾ ಸ್ಥಳದಲ್ಲಿ ಬೆರಳಚ್ಚು ತಜ್ಞರು, ಪೊಲೀಸ್ ಇಲಾಖೆಯ ವಿವಿಧ ತಂಡಗಳು ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿವೆ. ಸ್ಥಳದಲ್ಲಿ ಬಿಳಿ ಪೌಡರ್ ದೊರೆತಿದ್ದು, ಬಲೂನ್‌ಗೆ ತುಂಬಲು ಸೋಡಿಯಂ ಹೈಡ್ರಾಕ್ಸೈಡ್ ಹಾಗೂ ಕಾಸ್ಟಿಕ್ ಸೋಡ ಬಳಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹೀಲಿಯಂ ಗ್ಯಾಸ್ ಸ್ಫೋಟದಿಂದ ಮೃತಪಟ್ಟ ಬಲೂನ್ ವ್ಯಾಪಾರಿ ಸಲೀಂ ಅವರ ಪಾರ್ಥಿವ ಶರೀರವನ್ನು ಕುಟುಂಬಸ್ಥರು ಮತ್ತು ಸಂಬಂಧಿಕರು, ಉತ್ತರ ಪ್ರದೇಶದಲ್ಲಿನ ಸ್ವಗ್ರಾಮಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಉತ್ತರ ಪ್ರದೇಶದ ಕನ್ನೌಜ್ ಜಿಲ್ಲೆಯ ಶುಕ್ಲಪೂರ್ವಾರ್ ಗ್ರಾಮದ ಸಲೀಂನ ಮೃತ ದೇಹವನ್ನು



ಘಟನೆಯ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿತ್ತು. (ಡಿ.27) ಶನಿವಾರ ಬೆಳಗ್ಗೆ ಸಲೀಂ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಬಳಿಕ ಆಂಬ್ಯುಲೆನ್ಸ್ ಮೂಲಕ ಶವವನ್ನು ಉತ್ತರ ಪ್ರದೇಶಕ್ಕೆ ಸಾಗಿಸಲಾಗಿದೆ.

ಸಲೀಂ ಅವರ ಜತೆ ಮೈಸೂರಿನಲ್ಲಿಯೇ ವಾಸ್ತವ್ಯ ಹೂಡಿದ್ದ ಸಂಬಂಧಿಕರಾದ ನಿಜಾಂ ಮತ್ತು ರಿಜ್ವಾನ್ ಹಾಗೂ ಸ್ನೇಹಿತ ರಾಜು ಅವರು ಆಂಬ್ಯುಲೆನ್ಸ್ ಮಾಡಿಕೊಂಡು ಸಲೀಂ ಪ್ರಾರ್ಥಿವ ಶರೀರದೊಂದಿಗೆ ಉತ್ತರ ಪ್ರದೇಶಕ್ಕೆ ಶನಿವಾರ ತೆರಳಿದ್ದಾರೆ. ಸಲೀಂ ಬನ್ನಿಮಂಟಪದ ಸುನ್ನಿ ಚೌಕದ ಬಳಿಯ ಷರೀಫ್ ಲಾಡ್ಜ್‌ನಲ್ಲಿ ಮೂವರೊಂದಿಗೆ ನೆಲೆಸಿದ್ದು, ಬಲೂನ್ ವ್ಯಾಪಾರ ಮಾಡುತ್ತಿದ್ದ. ಪ್ರತಿದಿನ ಲಾಡ್ಜ್‌ನ ಕೋಣೆಗೆ 100 ರೂ. ಬಾಡಿಗೆ ನೀಡುತ್ತಿದ್ದ ಸಲೀಂ ಅವರೊಂದಿಗೆ ನಿಜಾಂ, ರಿಜ್ವಾನ್ ಮತ್ತು ರಾಜು ಕೂಡ ಇದ್ದರು. ನಾಲ್ವರು ಸೇರಿಕೊಂಡು ಒಟ್ಟಿಗೆ ಬಲೂನ್ ವ್ಯಾಪಾರ ನಡೆಸುತ್ತಿದ್ದರು.

ಇನ್ನೊಂದೆಡೆ ಸ್ಫೋಟದಿಂದ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ಲಕ್ಷ್ಮೀ ಅವರ ಶವವನ್ನು ಸಹ ಕುಟುಂಬದವರಿಗೆ ಮರಣೋತ್ತರ ಪರೀಕ್ಷೆ ಬಳಿಕ ನೀಡಲಾಗಿದ್ದು, ಸ್ವಗ್ರಾಮದ ಮಂಡ್ಯಕ್ಕೆ ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ನೆರವೇರಿಸಲಾಗಿದೆ. ಶನಿವಾರ ರಾತ್ರಿಯೇ ಮೃತಪಟ್ಟ ಮಂಜುಳಾ ಅವರ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬದವರಿಗೆ ನೀಡಲಾಗಿತ್ತು. ಮಂಜುಳಾ ಅವರ ಸ್ವಗ್ರಾಮವಾದ ನಂಜನಗೂಡಿನ ಚಾಮಲಾಪುರಕ್ಕೆ ತೆಗೆದುಕೊಂಡು ಹೋದ ಕುಟುಂಬಸ್ಥರು ಹಾಗೂ



ಸಂಬಂಧಿಕರು ಗ್ರಾಮದಲ್ಲಿಯೇ ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ.

ಅರಮನೆ ಮುಂಭಾಗ ಸಂಭವಿಸಿದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣ ಬೆನ್ನಲ್ಲೆ ನಗರ ಪೊಲೀಸರು ಅಲರ್ಟ್ ಆಗಿದ್ದಾರೆ. ಮೈಸೂರಿನ ಎಲ್ಲಾ ಲಾಡ್ಜ್‌ಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದು, ಹೊರಗಡೆಯಿಂದ ಬಂದಿರುವ ವ್ಯಕ್ತಿಗಳ ಮಾಹಿತಿ ಪಡೆದು ರೂಮ್ ಕೊಡುವಂತೆ ಸೂಚನೆ ನೀಡಿದ್ದಾರೆ. ಆಧಾರ್ ಕಾರ್ಡ್ ಗುರುತು ಚೀಟಿ ಇಲ್ಲದೆ ರೂಮ್ ಕೊಡುವ ಲಾಡ್ಜ್‌ಗಳ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದು, ಲಾಡ್ಜ್‌ಗಳಲ್ಲಿ ಅಕ್ರಮವಾಗಿ ಉಳಿದುಕೊಂಡಿರುವವರ ಮೇಲೆ ನಿಗಾ ಇಟ್ಟಿದ್ದಾರೆ. ಯಾವುದೇ ಅನಾಹುತವಾಗದಂತೆ ಕಟ್ಟೆಚ್ಚರ ವಹಿಸಿದ್ದಾರೆ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 28.12.2025

# ಮೊದಲ ಚಿತ್ರದಲ್ಲೇ ಜಾಕ್‌ಪಾಟ್ ಹೊಡೆದ ಅರ್ಜುನ್ ಜನ್ಯ!

ಕನ್ನಡದ ಮಟ್ಟಿಗೆ ಇತ್ತೀಚಿನ ದಿನಗಳಲ್ಲಿ ಸೂಪರ್‌ಸ್ಟಾರ್ ಎನಿಸಿಕೊಂಡವರು ಕಂಟೆಂಟ್ ಸಿನಿಮಾಗಳನ್ನು ಮಾಡಿದ್ದು ಬಹಳ ವಿರಳ. ಮಲಯಾಳಂನ ಸ್ಟಾರ್ ನಟರಂತೆ ಕನ್ನಡದಲ್ಲಿಯೂ ಸ್ಟಾರ್‌ಗಳು ಸಿದ್ಧಸೂತ್ರದ ಸಿನಿಮಾಗಳನ್ನು ಬಿಟ್ಟು ಕಥಾ ಪ್ರಧಾನ ಚಿತ್ರಗಳನ್ನು ಮಾಡಬೇಕೆಂಬ ಕೂಗು ಹೆಚ್ಚಾಗಿತ್ತು. ಆ ಕೊರತೆಯನ್ನು ನೀಗಿಸುವ ಚಿತ್ರ '45'. ಹಾಗೆ ನೋಡಿದರೆ ಈ ಚಿತ್ರದಲ್ಲಿ ಉಪೇಂದ್ರ, ಖಳನಾಯಕ. ಶಿವರಾಜ್‌ಕುಮಾರ್ ಬರುವುದೇ ದ್ವಿತೀಯಾರ್ಧದಲ್ಲಿ. ರಾಜ್ ಬಿ. ಶೆಟ್ಟಿಯದ್ದು ಸಾಮಾನ್ಯರಲ್ಲಿ ಸಾಮಾನ್ಯ ಎಂಬಂಥ ಪಾತ್ರ. ಇಷ್ಟಾಗಿಯೂ ಪಾತ್ರವರ್ಗ ಪರಿಪೂರ್ಣ ಎಂಬಂತಿದೆ. ಎಲ್ಲ ಮುಖ್ಯ ಕಲಾವಿದರು ತಮ್ಮ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿ ಸಿನಿಮಾವನ್ನು ದಡ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾಯಕ ಖಳನಾಯಕನನ್ನು ಸಂಹರಿಸಿ ಅಂತಿಮವಾಗಿ ಸತ್ಯಕ್ಕೆ, ನ್ಯಾಯಕ್ಕೆ ಜಯ ಸಿಗುತ್ತದೆ ಎಂಬುದು ಬಹುತೇಕ ಎಲ್ಲ ಮಾಸ್ ಸಿನಿಮಾಗಳಲ್ಲಿನ ಒಟ್ಟಾರೆ ಕಥೆ. ಅಸುರರ ವಿರುದ್ಧ ಸುರರ ಯುದ್ಧ, ಕೆಡಕಿನ ವಿರುದ್ಧ ಒಳಿತಿನ ಕಾದಾಟ, ಸುಳ್ಳಿನ ವಿರುದ್ಧ ಸತ್ಯದ ಹೋರಾಟ... ಇದರ ಅಂತಿಮ ಫಲಿತಾಂಶ ಎಲ್ಲರಿಗೂ ತಿಳಿದಿರುತ್ತದೆ. ಆ ಗೆಲುವು ಹೇಗೆ ಸಿಗುತ್ತದೆ ಎಂಬುದೇ ಈ ಚಿತ್ರದ ಒನ್ ಲೈನ್ ಸಾರಾಂಶ. ಅದನ್ನ ಗರುಡ ಪುರಾಣದ ಹಿನ್ನೆಲೆಯಲ್ಲಿ ಹೇಳಿರುವುದು ಮತ್ತೊಂದು ವಿಶೇಷ. ಈ ರೀತಿಯ ವಿಷಯಗಳಲ್ಲಿ ಕಥೆಗಿಂತ ಚಿತ್ರಕಥೆಯೇ ಮುಖ್ಯ.





ಸಾವಿನ ಅಧಿಪತಿ ಯಮನ ವಿರುದ್ಧ ಸಶ್ಮಾನದ ಅಧಿಪತಿ ಶಿವನ ಯುದ್ಧ ಎಂಬುದು '45' ಚಿತ್ರದ ಕಥೆ. ಅದು ಏಕೆ, ಹೇಗೆ ಮತ್ತು ಎಲ್ಲಿ ಎಂಬುದೇ ಚಿತ್ರಕಥೆ. ಗಮನ ಸೆಳೆಯುವ ದೃಶ್ಯ ವೈಭವದೊಂದಿಗೆ ಸಾಮಾಜಿಕ ಕಳಕಳಿಯ ಸಂದೇಶವನ್ನು ದಾಟಿಸುವಲ್ಲಿ ಅರ್ಜುನ್ ಜನ್ಯ ಚೊಚ್ಚಲ ಪ್ರಯತ್ನದಲ್ಲಿಯೇ ಯಶಸ್ವಿಯಾಗಿದ್ದಾರೆ.




ಸಾಮಾನ್ಯ ಸಾಫ್ಟ್‌ವೇರ್ ಉದ್ಯೋಗಿ ವಿನಯ್ ಮೊಬೈಲ್‌ನಲ್ಲಿ ಮಾತಾಡಿಕೊಂಡು ದ್ವಿಚಕ್ರ ವಾಹನ ಓಡಿಸುತ್ತ ಅಪಘಾತದಲ್ಲಿ ನಾಯಿಯನ್ನು ಸಾಯಿಸುತ್ತಾನೆ. ಕೊನೆಗೆ ತಾನೂ ಅಪಘಾತದಲ್ಲಿಯೇ ಸಾಯುತ್ತಾನೆ. ಸತ್ತ ವಿನಯ್ ಬದುಕಿದ್ದೇನೆಂಬ ಭ್ರಮೆಯಲ್ಲಿಯೇ ಚಿತ್ರ ಪ್ರಾರಂಭವಾಗುತ್ತದೆ. ಈ ನಾಯಿಯನ್ನು ತಾಯಿಯೆಂದು ಭಾವಿಸುವ ರಾಯಪ್ಪ ವಿನಯ್ ಪಾಲಿಗೆ ಯಮನಾಗಿ ಬಂದು ಕಾಡಲು ಶುರು ಮಾಡುತ್ತಾನೆ. ವಿನಯ್‌ಗೆ ಭೂಮಿಯ ಮೇಲೆ ಬದುಕುಳಿಯಲು ರಾಯಪ್ಪ 45 ದಿನಗಳ ಗಡುವು ನೀಡುತ್ತಾನೆ. ಆ ಅವಧಿಯಲ್ಲಿ ನಡೆಯುವ ಒಂದಷ್ಟು ಸನ್ನಿವೇಶಗಳೇ ಸಿನಿಮಾವಾಗಿದೆ.

ಕಥೆ, ಚಿತ್ರಕಥೆಗಿಂತಲೂ ಹೆಚ್ಚು ಗಮನ ಸೆಳೆಯುವುದು ಚಿತ್ರದ ಮೇಕಿಂಗ್. ಪ್ರತಿ ದೃಶ್ಯವೂ ಅದ್ದೂರಿಯಾಗಿದೆ. ಹಲವು ಕಡೆ ಗ್ರಾಫಿಕ್ಸ್‌ನಲ್ಲಿ ಕನ್ನಡ ಸಿನಿಮಾರಂಗಕ್ಕೆ ಹೊಸತು ಎಂಬಂಥ ಲೋಕ ಸೃಷ್ಟಿಸಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪಾತ್ರವರ್ಗವೇ ಸಿನಿಮಾದ ದೊಡ್ಡ ಗೆಲುವು. ರಾಯಪ್ಪನಾಗಿ ಉಪೇಂದ್ರ, ಅವರ ಗೆಟಪ್, ಹಾವಭಾವ ಮುದ ನೀಡುತ್ತದೆ. ಯಮನ ಸ್ವರೂಪಿ ರಾಯಪ್ಪನಾಗಿ ಉಪೇಂದ್ರ, ಅಕ್ಷರಶಃ ಸಿನಿಮಾವನ್ನು ಹೆಗಲ ಮೇಲೆ ಹೊತ್ತುಕೊಂಡು ಸಾಗಿದ್ದಾರೆ. ಆ ಪಾತ್ರಕ್ಕೆ ತದ್ವಿರುದ್ಧವಾಗಿ ಎಲ್ಲ ಸನ್ನಿವೇಶಗಳನ್ನು ಶಾಂತವಾಗಿ ನಿಭಾಯಿಸುವ ಶಿವಪ್ಪನಾಗಿ ಶಿವರಾಜ್ ಕುಮಾರ್ ಮತ್ತೊಂದು ಹೆಗಲು ನೀಡಿದ್ದಾರೆ.

ಸಾಮಾನ್ಯ ವ್ಯಕ್ತಿಯಾಗಿ ಅಲ್ಲಲ್ಲಿ ಸಹಜ ಹಾಸ್ಯದಿಂದ ರಾಜ್ ಬಿ. ಶೆಟ್ಟಿ ನಗಿಸುತ್ತಾರೆ. ಯಮನ ಬಲಗೈ ಬಂಟನಾಗಿ ಕುಳ್ಳ ಜಾಫರ್ ಸಾದಿಕ್ ಗಮನ ಸೆಳೆಯುತ್ತಾರೆ. ಕ್ಲೈಮಾಕ್ಸ್ ನಲ್ಲಂತು ಶಿವಣ್ಣ ಸಾಕ್ಷಾತ್ ಪರಶಿವನಾಗಿ ರುದ್ರ ತಾಂಡವ ಆಡುತ್ತಾರೆ. ಈ ದೃಶ್ಯ ವೈಭವ ಜಾತ್ರೋತ್ಸವ ಗಳಲ್ಲಿ ಅಂತಿಮವಾಗಿ ಮತಾಪು ಸಿಡಿಸಿ ಸಂಭ್ರಮಿಸುತ್ತಾರಲ್ಲ ಹಾಗಿದೆ! ☯

# ನಟಿ ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ?!

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಕನ್ನಡ, ತೆಲುಗು ಮತ್ತು ತಮಿಳು ಕಿರುತರೆಯಲ್ಲಿ ಮಿಂಚುತ್ತಿದ್ದ ನಟಿ ನಂದಿನಿ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ವೃತ್ತಿಜೀವನದಲ್ಲಿ ಸಕ್ರಿಯರಾಗಿದ್ದ ನಟಿ ಇಂತಹ ಕಠಿಣ ನಿರ್ಧಾರ ತೆಗೆದುಕೊಳ್ಳಲು ಕಾರಣವೇನು ಎಂಬುದು ಸದ್ಯಕ್ಕೆ ನಿಗೂಢವಾಗಿದೆ! ಮನೆಯಲ್ಲಿ ಸರ್ಕಾರಿ ಕೆಲಸ ಮಾಡಲು ಒತ್ತಾಯಿಸುತ್ತಿದ್ದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಡೆತ್ ನೋಟ್‌ನಲ್ಲಿ ನಂದಿನಿ ಉಲ್ಲೇಖಿಸಿದ್ದಾರೆ.

ಕನ್ನಡದ 'ನೀನಾದೆನಾ' ಮತ್ತು 'ಸಂಘರ್ಷ' ಧಾರಾವಾಹಿಗಳಲ್ಲಿ ನಟಿಸಿದ್ದ ನಂದಿನಿಗೆ ತಮಿಳು, ತೆಲುಗು ಮಂದಿಯು ಫ್ಯಾನ್ಸ್ ಆಗಿದ್ದರು. ತಮಿಳು ಕಲೈಗ್ನರ್ ಟಿವಿಯಲ್ಲಿ ಪ್ರಸಾರವಾಗುತ್ತಿರುವ 'ಗೌರಿ' ಧಾರಾವಾಹಿಯಲ್ಲಿ ನಾಯಕಿಯಾಗಿ ನಟಿಸುತ್ತಿದ್ದ ಕಿರುತರೆ ನಟಿ ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿಗೂ ಮುನ್ನ ನಟಿ ಬರೆದಿದ್ದಾರೆ ಎನ್ನಲಾದ ಡೆತ್‌ನೋಟ್ ಲಭ್ಯವಾಗಿದ್ದು, ಅದರಲ್ಲಿ ಮದುವೆಯ ಒತ್ತಡದ ಬಗ್ಗೆ, ನಟನೆ ಬಿಟ್ಟು ಸರ್ಕಾರಿ ಕೆಲಸ ಮಾಡುವ ಬಗ್ಗೆ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ನಂದಿನಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ತಾಲೂಕಿನವರು. 2025ರ ಆಗಸ್ಟ್‌ನಿಂದ ವೈಲಸಂದ್ರದ ಪಿಜಿಯಲ್ಲಿ ವಾಸಿಸುತ್ತಿದ್ದರು. ಮೊನ್ನೆ ಭಾನುವಾರ ತನ್ನ ಗೆಳೆಯ ಪುನೀತ್ ಎಂಬುವರ ಮನೆಗೆ ಹೋಗಿ ರಾತ್ರಿ 11.20ರ ಸುಮಾರಿಗೆ ವಾಪಸ್ ಬಂದಿದ್ದರು. ಪುನಃ ಪುನೀತ್ ಕರೆ ಮಾಡಿದಾಗ ಸ್ವೀಕರಿಸಿರಲಿಲ್ಲ. ಇದರಿಂದ ಅನುಮಾನಗೊಂಡ ಪುನೀತ್, ಪಿಜಿ ಮ್ಯಾನೇಜರ್‌ಗೆ ತಿಳಿಸಿದ್ದರು. ಪಿಜಿ ಮ್ಯಾನೇಜರ್ ಹಾಗೂ ಸಿಬ್ಬಂದಿ ನಂದಿನಿ ಕೊಠಡಿ ಬಳಿ ತೆರಳಿ ನೋಡಿದಾಗ ವೇಲ್‌ನಿಂದ ಕಿಟಕಿ ಸರಳಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

## ಡೆತ್ ನೋಟ್ ಸೀಕ್ರೆಟ್?

ನಂದಿನಿ ಅವರು ಡೈರಿಯಲ್ಲಿ ಡೆತ್‌ನೋಟ್ ಬರೆದಿರುವುದು ಕಂಡು ಬಂದಿದೆ. ''ನನಗೆ ಸರಕಾರಿ ಕೆಲಸ ಇಷ್ಟವಿಲ್ಲ. ನಟನೆ ಬಗ್ಗೆ ಆಸಕ್ತಿಯಿದ್ದು, ಅದರಲ್ಲಿಯೇ ಮುಂದುವರಿಯಬೇಕು. ಆದರೆ, ಮನೆಯಲ್ಲಿ ಇದಕ್ಕೆ ಒಪ್ಪುತ್ತಿಲ್ಲ'' ಎಂದು ಬರೆದಿರುವುದಾಗಿ ಪೊಲೀಸರು ಹೇಳಿದ್ದಾರೆ.

## ಅನುಕಂಪದ ಉದ್ಯೋಗ!

ನಂದಿನಿ ಅವರ ತಾಯಿ ಬಸವರಾಜೇಶ್ವರಿ ಸರಕಾರಿ ಶಾಲಾ ಶಿಕ್ಷಕಿಯಾಗಿದ್ದಾರೆ. ಅವರು ಮಗಳ ಸಾವಿನ ಕುರಿತು ತಮ್ಮ ಹೇಳಿಕೆ ದಾಖಲಿಸಿದ್ದಾರೆ. 'ಸರಕಾರಿ ಶಿಕ್ಷಕರಾಗಿದ್ದ ಪತಿ ಎಸ್. ಮಹಾಬಲೇಶ್ವರ ಅವರು 2021ರಲ್ಲಿ ಮೃತಪಟ್ಟಿದ್ದರು. ಹೀಗಾಗಿ, 2023ರಲ್ಲಿ ಮಗಳು ನಂದಿನಿಗೆ ಅನುಕಂಪದ ಆಧಾರದಲ್ಲಿ ಸರಕಾರಿ ಕೆಲಸ ಸಿಕ್ಕಿತ್ತು. ಆದರೆ, ಕೆಲಸಕ್ಕೆ ಹೋಗದ ನಂದಿನಿ, ನಟನಾ ಕ್ಷೇತ್ರದಲ್ಲಿಯೇ ಮುಂದುವರಿಯುವುದಾಗಿ ಹಠ ಮಾಡಿ ಬೆಂಗಳೂರಿಗೆ ಬಂದಿದ್ದಳು' ಎಂದು ತಿಳಿಸಿದ್ದಾರೆ. 'ಜತೆಗೆ, ಮಗಳ ಸಾವಿನ ಬಗ್ಗೆ ಯಾವುದೇ ಅನುಮಾನವಿಲ್ಲ ಎಂದಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ ನಂದಿನಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಅಸಹಜ ಸಾವು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ.

## ಒಳ್ಳೆಯ ಭವಿಷ್ಯವಿತ್ತು!

ನೀನಾದೆನಾ, ಜೀವ ಹೂವಾಗಿದೆ, ಸಂಘರ್ಷ, ಮಧುಮಗಳು ಸೀರಿಯಲ್‌ನಲ್ಲಿ ನಟಿಸಿದ್ದರು. ತಮಿಳಿನ 'ಗೌರಿ' ಧಾರಾವಾಹಿಯ ಮೂಲಕ ಜನರಿಗೆ ಇನ್ನಷ್ಟು ಹತ್ತಿರವಾಗಿದ್ದರು ನಂದಿನಿ. ಈ ಧಾರವಾಯಿಯಲ್ಲಿ ನಂದಿನಿ ಅವರು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದರು. ಇದರಲ್ಲಿ ಅವರು ಕನಕ ಮತ್ತು ದುರ್ಗ ಎಂಬ ಎರಡು ಸವಾಲಿನ ಪಾತ್ರಗಳನ್ನು ನಿರ್ವಹಿಸಿ ಜನರ ಮೆಚ್ಚುಗೆ ಗಳಿಸಿದ್ದರು. ಒಟ್ಟಾರೆ, ಮುದ್ದು ಮುಖದ ಚೆಲುವೆ ನಂದಿನಿಗೆ ನಟನಾ ರಂಗದಲ್ಲಿ ಒಳ್ಳೆಯ ಭವಿಷ್ಯವಿತ್ತು. ಆದರೆ, ಅವರ ತಾಯಿಗೆ ಬಣ್ಣದ ಲೋಕ ಇಷ್ಟವಿರಲಿಲ್ಲ. ಮಗಳು ತಮ್ಮ ಹಾಗೆ ಶಿಕ್ಷಕಿಯಾಗಿ ಪಾಠ ಪ್ರವಚನ ಭೋದಿಸಿಕೊಂಡು ಇರಬೇಕು ಎಂಬಾಸೆ ಇತ್ತು. ಮಗಳ ಆಸೆಗೆ ತಣ್ಣೀರು ಎರಚಲು ಹೋಗಿ... ಇಂಥ ಅನಾಹುತ ಸಂಭವಿಸಿದೆ!! ☯

Vol. 41 No. 30 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 tps://www.instagram.com/police_news?igsh=MWJ6bHJwZDRmZDc1aQ==